
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨೭-೬-೫೯



ಬೆಲೆ ಎರಡಾಣೆ



ಬುದ್ಧನ ಶಿರಸ್ಸು

Karmaveer KANNADA ILLUSTRATED WEEKLY HUB

ಮುಖಪತ್ರದಲ್ಲಿ

೨೫೦೦ ವರ್ಷಗಳ ಹಿಂದೆ ಪ್ರಪಂಚದ ವಿಚಾರ ಧಾರೆಯ ಮೇಲೆ ಅಪ್ರತಿಮ ಪ್ರಭಾವ ಬೀರಿದ **ಜ್ಞಾನಿ ಬುದ್ಧನ** ಹೆಸರು ಭಾರತದ ಇತಿಹಾಸದ ಸಂಸ್ಕೃತಿಗಳಲ್ಲಿ ಅಜ್ಜಳಿಯದೆ ಒತ್ತಿದೆ. ಕರ್ಮಕಾಂಡದ ಜಂಜಾಟದಲ್ಲಿ ಸಿಲುಕಿದ್ದ ಭಾರತವನ್ನು ಅವನು ಬೌದ್ಧಿಕ ದಾಸ್ಯದಿಂದ ಮುಕ್ತಗೊಳಿಸಿದನು. ಪ್ರಾಣಿದಯೆ ಸದಾಚಾರಗಳ ಮಹತಿಯನ್ನೊತ್ತಿ ಹೇಳಿ ಮುಕ್ತಿಯ ಉದಾತ್ತವಾದ ಕಲ್ಪನೆಯನ್ನು ಕಟ್ಟಿದವರಲ್ಲಿ ಅವನು ಮೊದಲಿಗನು. ಅವನ ಬೋಧೆಯ ಪ್ರಭಾವ ಭಾರತವನ್ನೆಲ್ಲ ವ್ಯಾಪಿಸಿತು. ಮುಂದೆ ಬ್ರಾಹ್ಮಣ ಧರ್ಮವೇ ಏಳಿಗೆಗೆ ಬಂದು ಅವನ ಅನುಯಾಯಿಗಳ ಸಂಖ್ಯೆಯನ್ನು ಶೂನ್ಯಸಮೀಪಕ್ಕೆ ಇಳಿಸಿ ಬಿಟ್ಟರೂ ಅವನು ಪ್ರವರ್ತಿಸಿದ ದರ್ಶನ ಪದ್ಧತಿ, ಮಾನವ ನೀತಿಗಳು ಹಿಂದೂ ಧರ್ಮದ ಮೇಲೆ ಅಳಿಸಲಾರದಂತೆ ಅಚ್ಚೊತ್ತಿಬಿಟ್ಟವೆ. ಅವನನ್ನು ವಿಷ್ಣುವಿನ ಒಂಬತ್ತನೆಯ ಅವತಾರವೆಂದು ಕೂಡ ಅಂಗೀಕರಿಸಲಾಯಿತು. ಅವನು ಬೋಧಿಸಿದ ಅಹಿಂಸಾ ಧರ್ಮಕ್ಕೆ ೨೫೦೦ ವರ್ಷಗಳ ನಂತರ ಅಷ್ಟೇ ಮಹಾಮಹಿಮನಾದ ಇನ್ನೊಬ್ಬ ಭಾರತ ಪುತ್ರನ ರಕ್ತಬಲಿಯಾಯಿತು. ಮುಖಪತ್ರದಲ್ಲಿ ಕಾಣುವ ಬುದ್ಧನ ಮುಖದ ವಿಗ್ರಹ ಭಾರತದ ಗವರ್ನರ ಜನರಲ್ಲರ ದಿಲ್ಲಿಯ ಸರಕಾರಿ ಭವನದಲ್ಲಿ ಕಾಣಸಿಗುತ್ತದೆ.

— ಚಿತ್ರ: ಶ್ರೀ ಅನಂತಬಾಬು ದಿವಾಕರ

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :

ಶ್ರೀ. ರಂ. ರಾ. ದಿವಾಕರ

ಸಂಪಾದಕರು :

ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ತಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ | ಸಂಚಿಕೆ ೧೧

ಕರ್ಮವೀರ

ಸೋಮವಾರ | ಆಷಾಢ ಶು. ೮

ತಾರೀಖು ೨೬—೬—೧೯೪೯

ಮೈಸೂರು ಕಾಂಗ್ರೆಸ್ಸಿನ ವಿಲಂಬವೃತ್ತಿ

ಕನ್ನಡಿಗರಿಗೆ ಜೀವಾಳದ ಪ್ರಶ್ನೆಯಾದ ಅಖಂಡ ಕರ್ನಾಟಕದ ನಿರ್ಮಾಣದ ವಿಷಯದಲ್ಲಿ ಸ್ಪಷ್ಟವಾದ ನಿರ್ದೇಶವನ್ನು ಕೊಡಬಹುದೆಂದು ತುಮಕೂರಿನಲ್ಲಿ ಸೇರಿದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಮೇಲೆ ಎಲ್ಲರ ದೃಷ್ಟಿ ನಟ್ಟಿತ್ತು. ಆದರೆ ಗಾದೆ ಮಾತಿನ ಪರ್ವತದಂತೆ ಆ ಅಧಿವೇಶನವು ಒಂದು ಇಲಿಯನ್ನು ಕೂಡ ಹಡೆಯದೆ ಹೋಯಿತು. ೮ ತಿಂಗಳ ಹಿಂದೆ ,ಬೀರೂರಿನಲ್ಲಿ ಸೇರಿದ ಅಧಿವೇಶನದಲ್ಲಿ ಮೈಸೂರು ಸಮೇತವಾದ ಅಖಿಲ ಕರ್ನಾಟಕದ ನಿರ್ಮಾಣದ ಪ್ರಶ್ನೆಯನ್ನು ಮಥಿಸಿ ಸೂಚನೆ ಮಾಡಲು ನೇಮಿಸಲ್ಪಟ್ಟಿದ್ದ ಸಮಿತಿಯ ವರದಿ ಕಾರ್ಯಸಮಿತಿಯ ಕೈಯಲ್ಲಿತ್ತು. ಆ ಬಗ್ಗೆ ಯಾವುದೊಂದು ನಿರ್ಣಯಕ್ಕೆ ಬರಲು ಕಾರ್ಯಸಮಿತಿ ಅ. ಮೈ. ಸಮಿತಿಗೆ ಮಾರ್ಗದರ್ಶನ ಮಾಡಬಹುದೆಂದು ಆಶಿಸಲಾಗಿತ್ತು. ಆದರೆ ಅದು ತಾನಂತೂ ಹಾಗೆ ಮಾಡಲಿಲ್ಲ. ಅದನ್ನು ಮುಂದಿನ ಅಧಿವೇಶನದ ವರೆಗೆ ತಳ್ಳಿಬಿಡಬೇಕೆಂದು ಅದು ಗೊತ್ತುಮಾಡಿತು. ಸಮಸ್ಯೆಯ ಮಹತ್ವವನ್ನೂ ಜನಾಭಿಪ್ರಾಯದ ತೀವ್ರತೆಯನ್ನೂ ಅರಿತ ಕೆಲ ಸದಸ್ಯರು ತಾವೇ ಈ ಬಗ್ಗೆ ಒಂದು ಗೊತ್ತುವಳಿಯನ್ನು ತರಲು ಪ್ರಯತ್ನಿಸಿದಾಗ ಅಧ್ಯಕ್ಷರು ಅದಕ್ಕೂ ಅವಕಾಶ ಕೊಡದೆ, ಉಳಿದ, ಅಷ್ಟು ದೊಡ್ಡವಲ್ಲದ ಗೊತ್ತುವಳಿಗಳ ಚರ್ಚೆಯಲ್ಲೇ ಹೊತ್ತುಗಳೆಯಲು ಬಿಟ್ಟು, ಕೊನೆಗೆ ಕಾಲಾವಕಾಶವಿಲ್ಲೆಂದೂ ಈ ಮಹತ್ವದ ಪ್ರಶ್ನೆಯನ್ನು ತೀರ್ಮಾನಿಸಲು ಬೇರೆಯೆ ಒಂದು ಅಧಿವೇಶನವನ್ನು ಕರೆಯುವದು ಯುಕ್ತವೆಂದೂ ಹೇಳಿ ಸಭೆಯನ್ನು ಮುಗಿಸಿಬಿಟ್ಟದ್ದು ತುಂಬ ನಿರಾಶೆಗೂ ಅಸಂತುಷ್ಟಿಗೂ ಕಾರಣವಾಯಿತು. ಅದರಲ್ಲಿಯೂ ಈ ಖಾಸಗಿ ಗೊತ್ತುವಳಿಗೆ ಅವಕಾಶ ಕೊಡುವದಾಗಿ ಅದರ ಸಮರ್ಥಕರಿಗೆ ಅಧ್ಯಕ್ಷ ಶ್ರೀ ಸಿದ್ಧಲಿಂಗಯ್ಯನವರು ಮೊದಲು ಆಶ್ವಾಸನ ಕೊಟ್ಟು ಮುಂದೆ ಮುಖ ತಿರುಗಿಸಿದ್ದರಿಂದ ಸಂತಪ್ತರಾದ ಶ್ರೀ. ದೊರೆಸ್ವಾಮಿ, ಶ್ರೀ. ಆರ್. ಎಸ್. ಆರಾಧ್ಯರೇ ಮೊದಲಾದವರು ಪ್ರತಿಭಟನಾರ್ಥವಾಗಿ ಸಭಾತ್ಯಾಗ ಮಾಡಬೇಕಾಯಿತು.

ಮೈಸೂರು ಕಾಂಗ್ರೆಸ್ ಮುಂದಾಳುಗಳು ಈ ಬಗೆಯಾಗಿ ದೀರ್ಘಸೂತ್ರ ಧೋರಣವನ್ನು ಅನುಸರಿಸಲು ಕಾರಣವೇನು? ಉಷ್ಟ್ರಪಕ್ಷಿಯಂತೆ ತಲೆಯನ್ನು ಮಳಲರಾಶಿಯಲ್ಲಿ ಹುಗಿದುಕೊಂಡರೆ ಸಮಸ್ಯೆಯಿಂದ ತಪ್ಪಿಸಿಕೊಂಡಂತಾಗಲಿಲ್ಲ ತಾನೆ? ಮುಂದಾಳುಗಳಿಗೆ , ಮೈಸೂರು ಸಹಿತ ಏಕೀಕರಣವಾಗುವದರಲ್ಲಿ ಆಸ್ಥೆಯಿಲ್ಲೆಂದೂ ಜನತೆಯ ಒಲವು ಆ ದಿಶೆಯಲ್ಲಿ ಪ್ರಬಲವಾಗಿದೆಯೆಂದೂ ತಿಳಿದುಕೊಳ್ಳಲು ಅನೇಕ ಕಾರಣಗಳುಂಟು. ಮೈಸೂರು ಕಾಂಗ್ರೆಸ್ಸನ್ನು ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಸೇರಿಸುವ ಬಗ್ಗೆ ಈ ಮುಂದಾಳುಗಳ ವಿರೋಧ ಬಹಿರಂಗವಾಗಿಯೆ ಇದೆ. ಈ ಪ್ರಶ್ನೆಯನ್ನು ಮುಂದಿನ ಅ. ಭಾ. ಕಾಂಗ್ರೆಸ್ ಸಭೆಯಲ್ಲಿ ನಿರ್ಣಯಿಸಲಾಗುವದೆಂದು ಸಭೆಯಲ್ಲಿ ಅಧ್ಯಕ್ಷ ಸಿದ್ಧಲಿಂಗಯ್ಯನವರು "ವಿಷಾದಪೂರ್ವಕ"ವಾಗಿ ಸಾರಿದರು. ಮೈಸೂರಿನ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಮುಂದಾಳುಗಳ ಹಂಬಲಕ್ಕೆ ಈ "ವಿಷಾದವೆ" ಸಾಕ್ಷಿ. ಮೈಸೂರು ಪ್ರತ್ಯೇಕ ರಾಜಕೀಯ ಘಟಕವಾಗಿರುವಷ್ಟು ಕಾಲ ಅದರ ಕಾಂಗ್ರೆಸ್ಸೂ ಪ್ರತ್ಯೇಕವಾಗಿರಬೇಕೆಂಬ ಅವರ ವಾದ ಎರಡೂ ಬದಿಗೆ ಮಸೆದ ಕತ್ತಿಯಂತೆ ತೋರುತ್ತದೆ. ಒಮ್ಮೆ ಪ್ರತ್ಯೇಕ ಕಾಂಗ್ರೆಸ್ಸು ದೊರೆತರೆ ಏಕೀಕರಣಕ್ಕೆ ತಿಲಾಂಜಲಿ ಬಿಡುವ ವಿಚಾರ ಅವರಲ್ಲಿದ್ದಂತಿದೆ. ಆದರೆ ಜನತೆಯ ಮತ ಮಾತ್ರ ವಿರುದ್ಧ ದಿಕ್ಕಿಗೆ ಹರಿದಿದೆ. ಕಲಬುರ್ಗಿ ಸಾಹಿತ್ಯ ಸಮ್ಮೇಲನದಲ್ಲಿ ಅರಸೊತ್ತಿಗೆಯನ್ನೂ ಮೈಸೂರಿಗತನವನ್ನೂ ರಭಸದಿಂದ ಪ್ರತಿಪಾದಿಸಿದ ಶ್ರೀ ಟಿ. ಸುಬ್ರಹ್ಮಣ್ಯರು ಕೂಡ ಈಚೆಗಿನ ಜನಮತದ ತೀವ್ರತೆಯನ್ನು ಅನುಭವದಿಂದ ಕಂಡುಕೊಂಡು ಮೈಸೂರಿನ ವಿಲಯನಕ್ಕೆ ಅನುಕೂಲಾಭಿಪ್ರಾಯವನ್ನು ತಳೆದಿದ್ದಾರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಪ್ರಸ್ತುತ ಖಾಸಗಿ ಗೊತ್ತುವಳಿಯನ್ನು ಮಂಡಿಸಿದವರಿಗೆ ಸಾಕಷ್ಟು ಜನ ಬೆಂಬಲವುಂಟೆಂದು ಖಂಡಿತವಾಗಿ ಹೇಳಬಹುದು. ಆದುದರಿಂದಲೇ ಕಾರ್ಯಸಮಿತಿ ಈ ಪ್ರಶ್ನೆಯನ್ನು ನೇರವಾಗಿ ಎದುರಿಸಲು ಹಿಂಜರಿದಿರಬೇಕು. ಏಕೀಕರಣಕ್ಕೆ ಇತ್ತ ಬಾಯ್ಮಾತಿನ ಬೆಂಬಲ ಕೊಟ್ಟು ಅತ್ತ ಪ್ರತ್ಯೇಕ ಕಾಂಗ್ರೆಸ ಸಮಿತಿಯ ಛಲತೊಟ್ಟ ಅವರ ನೀತಿಯ ಬಗ್ಗೆ ಜನರು ಸಾಶಂಕರಾಗುವದು ಸ್ವಾಭಾವಿಕವೇ. ನಿರ್ಣಯವನ್ನು ವ್ಯರ್ಥವಾಗಿ ಮುಂದೂಡುತ್ತ ಕೊನೆಗೆ ಅನಿವಾರ್ಯವಾದುದಕ್ಕೆ ತಲೆವಾಗುವ ಬದಲು ಪ್ರಶ್ನೆಯನ್ನು ನೇರವಾಗಿ ಎದುರಿಸಿ ಗೌರವದಿಂದಲೇ ಉಳಿದ ಕನ್ನಡಿಗರೊಡನೆ ಒಂದಾಗುವದು ಅವರಿಗೂ ಶ್ರೇಯಸ್ಕರ, ಉಳಿದವರಿಗೂ ಕ್ಷೇಮ. ಈ ಬಗೆಯ ಮುಂದಾಳ್ತನವನ್ನು ಅವರಿಂದ ಮುಂದಿನ ಅಧಿವೇಶನದಲ್ಲಾದರೂ ಅಪೇಕ್ಷಿಸಬಹುದೆ?

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ತುಮಕೂರು ಅಧಿವೇಶನದಲ್ಲಿ ಭಾರತ ಸ್ವಾತಂತ್ರ್ಯದ ಮತ್ತು ಮೈಸೂರು ಪ್ರಜಾ ಸರಕಾರದ ಚಳವಳಿಗಳಲ್ಲಿ ಸಂಕಷ್ಟಕ್ಕೀಡಾದವರ ಯಾದಿಯನ್ನು ಸಿದ್ಧಪಡಿಸಿ ಯೋಗ್ಯ ಪರಿಹಾರಕ್ರಮ ಸೂಚಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಪ್ರಜಾರಾಜ್ಯವಾಗಿಯೆ ಕಾಮನ್‌ವೆಲ್ತದಲ್ಲಿ ಭಾರತವುಳಿಯಬೇಕೆಂಬ ನಿರ್ಣಯವನ್ನೂ ಸ್ವಾಗತಿಸಲಾಯಿತು. ಮೈಸೂರು ದಿವಾಣಪದವನ್ನು ರದ್ದುಗೊಳಿಸಿ ಪ್ರಜಾಪ್ರಭುತ್ವ ತಳಹದಿಯ ಮಂತ್ರಿಮಂಡಲ ವೇರ್ಪಟ್ಟಿದ್ದಕ್ಕಾಗಿ ಸಮಾಧಾನವನ್ನೂ ವ್ಯಕ್ತಗೊಳಿಸಲಾಯಿತು. ಆದರೆ ಮೈಸೂರು ಕಾಂಗ್ರೆಸ್ಸಿನ ಮುಂದಾಳುಗಳಲ್ಲಿ ಸದಸ್ಯರ ವಿಶ್ವಾಸ ಕಡಿಮೆಯಾಗುತ್ತಿದೆಯೆಂದು ಸೂಚಿಸುವ ಘಟನೆಗಳು ಎರಡನೆ ದಿನದ ಅಧಿವೇಶನದಲ್ಲಿ ತಲೆದೋರಿದವು. ಮೈಸೂರು ಕಾಂಗ್ರೆಸ್ ಅಧ್ಯಕ್ಷರು ರಾಜೀನಾಮೆ ಕೊಟ್ಟು ಇದೇ ಸಭೆಯಲ್ಲಿ ಹೊಸ ಅಧ್ಯಕ್ಷರನ್ನಾರಿಸಿ ಅವರಿಗೆ ಕಾರ್ಯಸಮಿತಿಯನ್ನು ರಚಿಸಿಕೊಳ್ಳಲವಕಾಶ ಕೊಡಬೇಕೆಂಬ ಆಶಯದ ಒಂದು ಗೊತ್ತುವಳಿಯನ್ನು ಶ್ರೀ ದೊರೆಸ್ವಾಮಿ ಮೊದಲಾದ ೪೫ ಮಂದಿ ಸದಸ್ಯರು ತಂದಿದ್ದರು. ಆದರೆ ಅಧ್ಯಕ್ಷರು ಘಟನೆಯ ಒಂದು ಕಲಮಿನ ಆಶ್ರಯ ಪಡೆದು ಅದನ್ನು ತಳ್ಳಿಹಾಕಿದರು. ಈಗ ಮೂರು ವರ್ಷಗಳಿಂದ ಪ್ರಾದೇಶಿಕ ಸಮಿತಿಗಳಿಂದ ವರ್ಕಿಂಗ್ ಕಮಿಟಿಗೆ ಆಯ್ಕೆಗಳೇ ಆಗಿಲ್ಲ. ಕಾಂಗ್ರೆಸ್ ಸಮಿತಿಗಳಿಗೂ ಚುನಾವಣೆಗಳಾಗಿಲ್ಲ. ಈ ಸ್ಥಿತಿಯಲ್ಲಿ ಜನಾಭಿಪ್ರಾಯದ ಬದಲಾವಣೆ ಸಮಿತಿಗಳಲ್ಲಿ ಬಿಂಬಿಸಲವಕಾಶವಿಲ್ಲ. ಈ ಸೂಚನೆ ತಂದವರು ಅದರ ಚರ್ಚೆಗಾಗಿ ಬೇರೆಯೆ ಅಧಿವೇಶನ ಕೂಡಿಸುವದಾಗಿಯೂ ಬೆದರಿಕೆ ಹಾಕಿದ್ದಾರೆ. ಏಕೀಕರಣ ಗೊತ್ತುವಳಿ ತಂದವರಲ್ಲಿ ಕೆಲವರು ಇದಕ್ಕೂ ಬೆಂಬಲವಿತ್ತಿಷ್ಟರೆಂಬುದು ಗಮನಾರ್ಹವಾಗಿದೆ.

× × ×

ಮುಂಬಯಿ ಪ್ರಾಂತದಲ್ಲಿ ಸದ್ಯಕ್ಕೆ ಇರುವ ೧೨ ಔನ್ಸ್ ಸೀದಾ ಪ್ರಮಾಣವನ್ನು ಕಡಿಮೆ ಮಾಡಲಾಗುವದಿಲ್ಲೆಂದು ಪ್ರಧಾನ ಮಂತ್ರಿ ಶ್ರೀ ದಿನಕರರಾವ ದೇಸಾಯಿಯವರು ಆಶ್ವಾಸನ ಕೊಟ್ಟದ್ದು ಸಮಾಧಾನಕರವಾಗಿದೆ. ಪ್ರಾಂತದ ಆಹಾರ ಪರಿಸ್ಥಿತಿ ಸಮಾಧಾನಕರವಾಗಿದೆಯೆಂದೂ ಅವರು ಧೈರ್ಯ ಕೊಟ್ಟರು. ಒಂದು ವೇಳೆ ಸೀದಾ ಪ್ರಮಾಣವನ್ನು ಕಡಿಮೆ ಮಾಡುವ ಪ್ರಸಂಗ ಬಂದರೆ ಸೀದಾಪದ್ಧತಿಯನ್ನೇ ರದ್ದುಗೊಳಿಸಬೇಕಾಗುವದಾಗಿಯೂ ಅವರು ಸಾರಿದರು. ಎತ್ತುವಳಿ ಯಶಸ್ವಿಯಾಗಿ ೩ ಲಕ್ಷ ಟನ್ ಧಾನ್ಯದ ಬದಲು ರೈತರಿಂದ ೪ ಲಕ್ಷ ಟನ್ ದೊರೆತಿದೆಯೆಂದು ಹೇಳಿದ್ದಂತೂ ತುಂಬ ಆಶಾಜನಕವಾಗಿದೆ. ಆದರೆ ಸೀದಾ ಪ್ರಮಾಣದಲ್ಲಿ ಅರ್ಧಾಂಶವನ್ನು ಗೋದಿ ಜೋಳ, ಕೆಂಪುಜೋಳ ಮೊದಲಾದ ಆಹಾರ್ಯವಲ್ಲದಿದ್ದರೂ ಅಪರಿಚಿತವಾದ ಧಾನ್ಯಗಳ ರೂಪದಲ್ಲಿ ಪಡೆಯುತ್ತಿರುವ ಗ್ರಾಹಕರು ಇದನ್ನೋದಿ ಹೋಳಿಗೆಯ ಕತೆಕೇಳಿ ಬಾಯಿ ಚಪ್ಪರಿಸುವವರಂತೆ ಮಾಡಬೇಕಾಗಿದೆ. ಆಹಾರದ ಈಗಿನ ಮೂಲಕಾರಣ ಅಭಾವಕ್ಕಿಂತ ಅವ್ಯವಸ್ಥೆಯಲ್ಲಿದೆಯೆಂಬ ಊಹೆಗೆ ಮಂತ್ರಿವರ್ಯರ ಹೇಳಿಕೆ ಪುಷ್ಟಿ ಕೊಡುತ್ತದೆ. ವಿತರಣ ದೋಷಯುಕ್ತವಾಗಿರದಿದ್ದರೆ ಈ ಬಗೆಯಾಗಿ ವಿದೇಶಿ ಧಾನ್ಯಗಳು ಕಾಲಕಾಲಕ್ಕೆ ಒಮ್ಮಿಂದೊಮ್ಮೆ ದೊಡ್ಡ ಪ್ರಮಾಣದಲ್ಲಿ ಗ್ರಾಹಕನ ಮೇಲೆರಗಲು ಬೇರಾವ ಕಾರಣವೂ ಕಾಣಿಸುವದಿಲ್ಲ. ಮದ್ರಾಸ್ ಪ್ರಾಂತದಲ್ಲಿ ಪ್ರಧಾನ ಧಾನ್ಯವಾಗಿರುವ ಅಕ್ಕಿ ತಲಾ ಎಂಟು ಔನ್ಸು ದೊರೆಯುತ್ತಿದ್ದರೆ (ಅಕ್ಕಿ ಜಗತ್ತಿನಲ್ಲಿ ಅತಿ ದುರ್ಲಭವೆಂದು ನಾವು ಮರೆಯತಕ್ಕದ್ದಲ್ಲ.) ಜೋಳದ ಪ್ರಾಧಾನ್ಯವಿರುವ ಈ ಜಿಲ್ಹೆಗಳಲ್ಲಿ ತಲಾ ಎರಡು ಔನ್ಸು ಜೋಳ ದೊರೆಯುವದು ಸೀದಾ ಪದ್ಧತಿಯ ಅನೇಕ ವೈಲಕ್ಷಣ್ಯಗಳಲ್ಲಿ ಒಂದು ಮಾತ್ರ. ಹಂಚಿಕೆ ವ್ಯವಸ್ಥಿತವಾಗಿ ಆಗುವಂತೆ ಮಾಡಿದರೆ ಆಹಾರದ ಕೊರತೆ ಅಷ್ಟು ಜಟಿಲ ಸಮಸ್ಯೆಯಲ್ಲೆಂದು ಈ ವರ್ಷದ ಅನುಭವ ಹೇಳುತ್ತದೆ.

ಪಾಕಿಸ್ತಾನದಲ್ಲಿ ಹೊಸಬಗೆಯ "ಜನತಾ ಸರಕಾರ" ದ ಪ್ರಯೋಗವಾಗುತ್ತಿರುವಂತಿದೆ. ಹಲ ದಿನಗಳಿಂದ ಮುಸ್ಲಿಂಲೀಗಿನ ಒಳ ಜಗಳಗಳ ಫಲವಾಗಿ ಘಟನಾತ್ಮಕ ಸರಕಾರ ಕುಸಿದು ಬಿದ್ದು ೯೨ (ಅ) ಕಲಮಿನನ್ವಯ, ಅದೂ ಒಬ್ಬ ಯುರೋಪಿಯನ್ ಗವರ್ನರನ ಕೈಕೆಳಗೆ, ಪಶ್ಚಿಮ ಪಂಜಾಬ ಸರಕಾರ ನಡೆದಿದ್ದುದು ಎಲ್ಲರಿಗೂ ಗೊತ್ತು. ಪ್ರಾಂತಿಕ ಮುಸ್ಲಿಂಲೀಗಿಗೂ ಶಾಸನ ಸಭಾ ಲೀಗಿನ ಬಹುಮತ ಪಕ್ಷಕ್ಕೂ ಬಂದ ತಿಕ್ಕಾಟಗಳು ಈ ಬಿಕ್ಕಟ್ಟಿಗೆ ಕಾರಣವಾಗಿದ್ದವು. ಈಗ ಪ್ರಾಂತಿಕ ಲೀಗಿಗೆ ಜಯ ಲಭಿಸಿದಂತೆ ತೋರುತ್ತದೆ. ಅದೇ ಮೇರೆಗೆ, ಶಾಸನಸಭಾ ಲೀಗ್ ಪಕ್ಷವನ್ನು ಬದಿಗೆ ಸರಿಸಿ, ನೇರವಾಗಿ ಪ್ರಾಂತಿಕ ಲೀಗೇ ಅಧಿಕಾರ ನಿರ್ವಹಣ ಮಾಡುವ ಸಲುವಾಗಿ ಹೊಸ ಯುಕ್ತಿಯೊಂದು ಆಚರಣೆಗೆ ಬರಲಿದೆ. ಅದು "ಸಲಹೆಗಾರ ರಾಜ್ಯ" ವಾಗುವದು. ೫ ಜನ ಸಲಹೆಗಾರರ ಹೆಸರುಗಳನ್ನು ಪ್ರಾಂತಿಕ ಲೀಗು ಸೂಚಿಸುವದು. ಅವರನ್ನು ಪಾಕಿಸ್ತಾನ ಮುಖ್ಯ ಮಂತ್ರಿ ಪ್ರಾಂತದ ಸಲಹೆಗಾರರನ್ನಾಗಿ ನೇಮಿಸುವನು. ಅವರಿಗೆ ಮಂತ್ರಿಗಳ ಸಮಸ್ತ ಅಧಿಕಾರಗಳೂ ಇರಬೇಕು. ಅವರಲ್ಲಿ ಯಾರನ್ನಾದರೂ ಹಿಂತೆಗೆದುಕೊಂಡು ಹೊಸಬರನ್ನು ಆ ಸ್ಥಳಕ್ಕೆ ನೇಮಿಸುವ ಹಕ್ಕು ಪ್ರಾಂತಿಕ ಲೀಗಿಗಿದೆ. ಗವರ್ನರನಿಗೂ ಸಲಹೆಗಾರರಿಗೂ ಮತಭೇದವಾದಲ್ಲಿ ನಿರ್ಣಯವನ್ನು ಕೇಂದ್ರ ಸರಕಾರಕ್ಕೆ ಬಿಡಬೇಕು. ಈ ವ್ಯವಸ್ಥೆಗೆ ಪ್ರಾಂತಿಕ ಲೀಗಿನ ಒಪ್ಪಿಗೆಯಿದೆಯಂತೆ. ಒಂದು ರಾಜಕೀಯ ಪಕ್ಷದ ಪ್ರತ್ಯಕ್ಷ ಸರ್ವಾಧಿಕಾರವಾದ ಈ ವಿಚಿತ್ರ ಕ್ರಮದ ಫಲಿತಾಂಶವನ್ನು ಕಾಲವೇ ಪ್ರಕಟಿಸಬಲ್ಲದು.

ಮುಸ್ಲಿಮರ ಧರ್ಮಾಭಿಮಾನವನ್ನು ಬಳಸಿಕೊಂಡು ವಾಯವ್ಯ ಗಡಿನಾಡು ಪ್ರಾಂತವನ್ನು ಬುಟ್ಟಿಯಲ್ಲಿ ಹಾಕಿಕೊಂಡ ಪಾಕಿಸ್ತಾನಕ್ಕೆ ಅದು—ಬ್ರಿಟಿಶರಿಗಾಗಿದ್ದಂತೆ—ಯಾವಾಗಲೂ ಬಗಲಿನ ಮುಳ್ಳಾಗುವಂತೆ ತೋರುತ್ತದೆ. ಗಡಿನಾಡು ಗಾಂಧಿಯ ಸ್ವತಂತ್ರ ಪಠಾಣಿಸ್ತಾನದ ಕರೆಯನ್ನು ಮುರಿಯಲು ಗಡಿನಾಡಿನ ಕಾಶ್ಮೀರಿ ಮುಖ್ಯಮಂತ್ರಿ ಖ್ಯಾಯುಮಖಾನರು ಹೂಡಿದ ದಬ್ಬಾಳಿಕೆ ಅನಿರೀಕ್ಷಿತ ದಿಶೆಯಿಂದ ಪ್ರತಿಭಟನೆಯನ್ನೆದುರಿಸಬೇಕಾಗಿ ಬಂದಿದೆ. ಗಡಿನಾಡು ಪಾಕಿಸ್ತಾನದಲ್ಲಿ ಸೇರಲು ಸಹಾಯ ಮಾಡಿದ ಮಂಕಿ ಶರೀಫದ ಫೀರರೇ ಸರಕಾರದ ಪಠಾಣನೀತಿ ಹಿಂತೆಗೆದುಕೊಳ್ಳದಿದ್ದರೆ ಇನ್ನೊಂದೇ ವಾರದಲ್ಲಿ ಸತ್ಯಾಗ್ರಹ ಹೂಡುವ ಬೆದರಿಕೆ ಹಾಕಿದ್ದಾರೆ.

ಅಲ್ಜೀರಿಯನ್ನರ ಸ್ವಾತಂತ್ರ್ಯಾಪೇಕ್ಷೆ

ಬಿಳಿಯರ ಸ್ವಾರ್ಥಸಾಧನೆ—ಅಪ್ರಮಾಣಬದ್ಧ ಪ್ರಾತಿನಿಧ್ಯ-ಸಾಮಾನ್ಯ ಸಹಿಷ್ಣುತೆ-ದೇಶೀಯರಲ್ಲಿ ರಾಷ್ಟ್ರೀಯ ಭಾವದ ಉದಯ—ಭವಿತವ್ಯತೆಯ ಅಸ್ಪಷ್ಟತೆ

ಅಲ್ಜೀರಿಯವನ್ನು ಆಕ್ರಮಿಸಿ ಆಳುತ್ತಿರುವ ಫ್ರೆಂಚರ ಅಧಿಕಾರಹಸ್ತದ ಬಿಗಿ ದಿನೇ ದಿನೇ ಸಡಿಲವಾಗುತ್ತ ಬರಲು ದೇಶೀಯರಲ್ಲಿ ರಾಷ್ಟ್ರೀಯ ಭಾವ ಬೆಳೆಯುತ್ತ ಬಂದುದೇ ಕಾರಣ. ಜಗತ್ತಿನ ಮೂಲೆ ಮೂಲೆಗಳಲ್ಲೂ ಬಿಳಿಯರು ಹೇರಿದ ದಾಸ್ಯದ ನೊಗವನ್ನು ಕಿತ್ತೆಸೆದು ಸ್ವತಂತ್ರವಾಗಿ ಬಾಳುವ ಹುರುಪು ಮೂಡಹತ್ತಿದೆ. ಈ ಸ್ವಾತಂತ್ರ್ಯ ಸಾಧನೆಯು ಜಂಝಾವಾತದ ಹೊಡೆತಕ್ಕೆ ಸಾಮ್ರಾಜ್ಯವಾದಿಗಳಾದ ಐರೋಪ್ಯರ ಅಧಿಕಾರ ವೃಕ್ಷ ಬುಡಮೇಲಾಗುವ ಹೊತ್ತು ಸಮೀಪಿಸುತ್ತಿದೆ ಎಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ.

ಆಫ್ರಿಕದ ಉತ್ತರ ಭಾಗದಲ್ಲಿ ಅಲ್ಜೀರಿಯವೆಂಬ ಚಿಕ್ಕ ನಾಡಿದೆ. ಅದು ಫ್ರೆಂಚರ ಆಳಿಕೆಗೆ ಒಳಪಟ್ಟಿದೆ. ಅದರ ಆಡಳಿತೆಯನ್ನು ಫ್ರೆಂಚ್ ಸರಕಾರ ನಿಯಮಿಸಿದ ಗವರ್ನರ್ ಜನರಲ್ಲನು ನೋಡಿಕೊಳ್ಳುತ್ತಾನೆ. ಅಲ್ಲಿಯ ಜನಸಂಖ್ಯೆ ೭೨,೩೪,೬೮೪, ಅವರಲ್ಲಿ ೯,೮೭,೨೫೨ ಜನರು ಐರೋಪ್ಯರು, ೬೨,೪೭,೪೩೨ ಜನರು ದೇಶೀಯರು. ಉತ್ತರ ಅಲ್ಜೀರಿಯದ ವಿಸ್ತಾರ ೭,೭೭,೪೩೫ ಚ. ಮೈಲುಗಳು. ಐರೋಪ್ಯರಲ್ಲಿ ಫ್ರೆಂಚರ ಸಂಖ್ಯೆ ೮,೩೩,೨೦೯.

ಬಹುಸಂಖ್ಯರು ಮುಸಲ್ಮಾನರು, ಯೆಹೂದಿಗಳಿದ್ದಾರೆ. ಅವರನ್ನು ಫ್ರೆಂಚ್ ನಾಗರಿಕರೆಂದೇ ತಿಳಿಯಲಾಗುತ್ತದೆ. ೪,೧೨೫ ವಿದ್ಯಾರ್ಥಿಗಳಿರುವ ಒಂದು ವಿಶ್ವವಿದ್ಯಾಲಯವಿದೆ. ವ್ಯಾಪಾರ, ಕಲೆ, ಕೃಷಿ ಮುಂತಾದ ವಿಷಯಗಳನ್ನು ಕಲಿಸುವ ಶಾಲೆಗಳಿವೆ. ಫ್ರೆಂಚರು ಅಲ್ಲಿ ಒಂದು ಸೈನ್ಯವನ್ನಿಟ್ಟಿದ್ದಾರೆ.

ದೇಶೀಯರ ಬಡತನ

ತೀರಪ್ರದೇಶ ಬಹಳ ಫಲವತ್ತಾಗಿದೆ. ಅದನ್ನು ವೈಜ್ಞಾನಿಕ ರೀತಿಯಿಂದ ಐರೋಪ್ಯರು ಸಾಗು ಮಾಡುತ್ತಿದ್ದಾರೆ. ದ್ರಾಕ್ಷೆ, ಕಾಳು ಕಡಿ ಮುಂತಾದವನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಉತ್ತರ ಭಾಗ ಅರಣ್ಯ, ಗಿರಿಗಳಿಂದ ಆವೃತವಾಗಿದೆ. ಬಹುಸಂಖ್ಯ ದೇಶೀಯರು ಬಡತನದಿಂದ ಬಳಲುತ್ತಾರೆ. ರಸ್ತೆಗಳು ರಚಿತವಾಗಿದ್ದರೂ ಪರ್ವತಪ್ರದೇಶಗಳಲ್ಲಿ ಎಷ್ಟೋ ಕಡೆ ಸಂಚರಿಸುವುದು ಬಹಳ ಕಠಿನವಾಗಿದೆ. ಗೋದಿಯೇ ಅಲ್ಲಿಯ ಮುಖ್ಯ ಬೆಳೆ. ಬಾರ್ಲಿ, ಓಟ್ಸ್, ಬಟಾಟೆ, ಟೊಮ್ಯಾಟೋ ಮುಂತಾದವು ಇತರ ಬೆಳೆಗಳು. ತಂಬಾಕಿನ ಬೆಳೆಯೂ ಅಲ್ಲಿ ಸಾಗಿದೆ. ಕಾರಖಾನೆಯಲ್ಲಿ ತಯಾರಾದ ಸಾಮಾನುಗಳನ್ನು ಫ್ರಾನ್ಸಿನಿಂದ ಆಯಾತ ಮಾಡಿಕೊಳ್ಳುತ್ತಾರೆ. ಅಲ್ಲಿಗೆ ರೈತರು ತಮ್ಮ ಬೆಳೆಗಳನ್ನು ಕಳಿಸುತ್ತಾರೆ.

ಕಳೆದ ಮಹಾಯುದ್ಧ ಮುಗಿದೊಡನೆ ಅಲ್ಜೀರಿಯದಲ್ಲಿ ಬಹಳ ಸ್ಥಿತ್ಯಂತರ ಉಂಟಾಯಿತು. ಯುದ್ಧಕಾಲದಲ್ಲಿ ಜನರಿಗೆ ಮಾಂಸ, ವಸ್ತ್ರ ಮುಂತಾದವು ಸಾಕಷ್ಟು ಸಿಗುತ್ತಿರಲಿಲ್ಲ. ಈಗ ಅವೆಲ್ಲ ಬೇಕಾದಹಾಗೆ ಸಿಗುತ್ತವೆ. ಸೀದಾ ಪದ್ಧತಿ ನಡೆಸುತ್ತ ಬಂದು ಕೇವಲ ಕಾಫಿ, ಸಕ್ಕರೆ, ರೊಟ್ಟಿ, ಗ್ಯಾಸೋಲೀನ್, ಉರುವಲಿನ ಎಣ್ಣೆ ಇವಿಷ್ಟೇ ನಿಯಂತ್ರಣಕ್ಕೊಳಗಾಗಿವೆ. ಕೋರಿಕೆಗೆ ದೇಶ ಸುಧಾರಿಸುವಂತೆ ಕಂಡರೂ ಒಳಗಿನ ಗುಟ್ಟು ಬೇರೆಯೇ ಇದೆ.

ಅಲ್ಜೀರಿಯವನ್ನು ಫ್ರೆಂಚರು ೧೮೩೦ ರಲ್ಲಿ ಗೆದ್ದುಕೊಂಡರು. ಆಗಿಂದಾಗ ಐರೋಪ್ಯ ವಲಸೆಗಾರರು ಅಲ್ಲಿ ನೆಲಸತೊಡಗಿದರು; ಕೃಷಿಯನ್ನು ಕೈಕೊಂಡು ಶ್ರೀಮಂತರಾದರು; ಹುಟ್ಟುವಳಿಗಳನ್ನು ಅವರು ಫ್ರಾನ್ಸಿನಲ್ಲಿ ಮಾರಿ ಬಹಳ ಲಾಭ ಪಡೆದರು. ದಿನೇ ದಿನೇ ಜನಸಂಖ್ಯೆ ಹೆಚ್ಚುತ್ತ ಹೋಯಿತು. ಫ್ರೆಂಚರು ಅಲ್ಲಿಯ ಬರ್ಬರರು, ಕಾಬೈಲರು, ಅರಬರು ಇವರೆಲ್ಲರನ್ನೂ ಅರಬರೆಂದೇ ಸಂಬೋಧಿಸಿದರು.

ರಾಷ್ಟ್ರೀಯತೆಯ ಹುಟ್ಟು

ವಿದ್ಯಾಭ್ಯಾಸ ಪ್ರಗತಿ ಹೊಂದುತ್ತ ಬಂದಂತೆ ರಾಷ್ಟ್ರೀಯತೆ ದೇಶೀಯರಲ್ಲಿ ಮೊಳಕೆಯೊಡೆಯಿತು. ರಾಷ್ಟ್ರೀಯ ಆಂದೋಲನವನ್ನು ಬಗೆಗೊಡದಿರಲು ಫ್ರೆಂಚರು ಫ್ರೆಂಚ್ ನಾಗರಿಕತ್ವವನ್ನೂ ಕೆಲಮಟ್ಟಿನ ಸ್ವರಾಜ್ಯಾಧಿಕಾರವನ್ನೂ ಜನರಿಗೆ ದಯಪಾಲಿಸಿದರು. ಆದರೆ ೫೦ ಲಕ್ಷ ಐರೋಪ್ಯರು ೧ ಕೋಟಿ ಅರಬರನ್ನು ಎಷ್ಟು ಕಾಲದ ವರೆಗೆ ತಮ್ಮ ನಿರಂಕುಶಾಧಿಕಾರದೊಳಗೆ ಇಟ್ಟುಕೊಳ್ಳಲು ಶಕ್ತರಾದಾರು?

೧೯೪೭ ರ ಕಾಯದೆಯಂತೆ ಅಲ್ಜೀರಿಯದಲ್ಲಿ ಶಾಸನಸಭೆಯೊಂದು ನಿರ್ಮಿಸಲ್ಪಟ್ಟಿತು. ಅದರಲ್ಲಿ ಅರಬರಿಗೆ ೬೦, ಐರೋಪ್ಯರಿಗೆ ೬೦ ಸ್ಥಳಗಳನ್ನು ಕೊಡಲಾಯಿತು. ಒಂದು ವರ್ಷ ಅರಬ್ಬಿ ಅಧ್ಯಕ್ಷನಾದರೆ ಮರುವರ್ಷ ಐರೋಪ್ಯ ಹೀಗೆ ಅಧ್ಯಕ್ಷಪದ ವೈಕಲ್ಪಿಕವಾಗಿದೆ. ಆದರೆ ಹಣಕಾಸಿನ ಸರ್ವಾಧಿಕಾರವು ಫ್ರೆಂಚರ ವಶದಲ್ಲೇ ಇರುವುದು ರೂಢಿ.

ತಾತ್ವಿಕವಾಗಿ ಅರಬರಿಗೂ ಐರೋಪ್ಯರಿಗೂ ಸಮಾನಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಲಾಗಿದ್ದರೂ ವ್ಯವಹಾರದಲ್ಲಿ ಭೇದವಿದ್ದೇ ಇದೆ. ಕರ್ತವ್ಯಗಳ ಹೊಣೆ ಫ್ರೆಂಚ್ ಜನರಿಗೆ ಹೆಚ್ಚು; ತೆರಿಗೆ ಕೊಡಬೇಕಾದ ಪ್ರಮಾಣ ಅವರದೇ ಅಧಿಕ. ಆದರೆ ಬಹಳ ಜನ ಅರಬರು ಸೈನಿಕ ಸೇವೆ ಸಲ್ಲಿಸಿದರೂ ಅವರಿಗೆ ಪ್ರಮಾಣ ಬದ್ಧ ಪ್ರಾತಿನಿಧ್ಯವಿಲ್ಲ. ಶಾಲೆಗಳಲ್ಲಿ ಅರಬ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಆದರೂ ಅಲ್ಲಿ ಭೇದನೀತಿಯಿಲ್ಲ. ಐರೋಪ್ಯರೂ ಆಫ್ರಿಕನ್ನರೂ ಒಂದೇ ಗುಂಪಿನಲ್ಲಿ ಇರುವರು. ವಿದ್ಯಾಭ್ಯಾಸದ ಮೊನ್ನಡೆ ತಕ್ಕಮಟ್ಟಿಗಿದ್ದರೂ ಪರಂಗಿ ರೋಗ ಅಲ್ಲಿಯ ಅರಬರಲ್ಲಿ ಬಹಳ; ಅದಕ್ಕೆ ಬ್ರಹ್ಮಚಾರಿಣಿಯನ್ನು ಮದುವೆಯಾಗುವುದೇ ಮದ್ದೆಂದು ಆ ಹುಡುಗರ ತಿಳವಳಿಕೆ.

ಸಾಮಾಜಿಕ ಪ್ರತ್ಯೇಕತೆ

ಅರಬರಿಗೂ ಐರೋಪ್ಯರಿಗೂ ಯಾವ ಸಾಮಾಜಿಕ ಸಂಬಂಧವೂ ಬೆಳೆದುಬಂದಿಲ್ಲ. ಸ್ನೇಹವು ವ್ಯಾಪಾರ ವ್ಯವಹಾರಗಳ ಮಟ್ಟಿಗೆ; ಅದಕ್ಕಿಂತ ಮುಂದಿಲ್ಲ. ಅಮೇರಿಕದಲ್ಲಿ ನೀಗ್ರೋಗಳಿಗೂ ಬಿಳಿಯರಿಗೂ ನಡುವೆ ಇರುವಂತೆ ಇಲ್ಲಿ ಅರಬರಿಗೂ ಐರೋಪ್ಯರಿಗೂ ನಡುವೆ ಕಾಯದೆಯೊಪ್ಪದ ರಕ್ತ ಸಂಬಂಧ ರೂಢಿಯಲ್ಲಿಲ್ಲ. ಇಲ್ಲಿ ಮಿಶ್ರರಕ್ತದ ತೃತೀಯ ಕುಲದ ಸೃಷ್ಟಿಯಾಗಿಲ್ಲ. ಹೊರಗಿನ ವ್ಯವಹಾರಗಳ ಎಲ್ಲ ಕ್ಷೇತ್ರಗಳಲ್ಲೂ ಕುಲಭೇದ, ಜಾತಿಭೇದಗಳ ಪರಿವೆಯಿಲ್ಲ. ಈ ದೃಷ್ಟಿಯಲ್ಲಿ ದಕ್ಷಿಣ ಆಫ್ರಿಕದ ಬಿಳಿಯ ಸರಕಾರಕ್ಕಿಂತ ಅಲ್ಜೀರಿಯದ ಬಿಳಿಯ ಸರಕಾರ ಎಷ್ಟೋ ಪಾಲು ಮೇಲಿನ ಮಟ್ಟದಲ್ಲಿದೆಯೆನ್ನಬೇಕು. ಅರಬ ಸ್ತ್ರೀಯರು ಕೆಲಮಟ್ಟಿಗೆ ಐರೋಪ್ಯ ವೇಷ ಭೂಷಣಗಳಲ್ಲಿ ತಿರುಗುವುದು ಕಂಡುಬರುತ್ತದೆ. ಮಹಮ್ಮದೀಯ ವೆನಿಸಿದ ಘೋಷಾ ಮುಂತಾದ ಪದ್ಧತಿಗಳು ಶಿಥಿಲವಾಗಿವೆ.

ಹೀಗೆ ಎರಡು ಕುಲಗಳು ಒಟ್ಟೊಟ್ಟಿಗೆ ಬೆಳೆದು ಬಂದರೂ ಒಂದರೊಡನೊಂದು ಸೇರಿಕೊಂಡಿಲ್ಲ. ಒಂದರ ಶಕ್ತಿ ಕುಂದುತ್ತಿದೆ, ಇನ್ನೊಂದರ ಸಂಖ್ಯಾಬಲ ಹೆಚ್ಚುತ್ತಿದೆ, ರಾಜಕೀಯ ಅಧಿಕಾರ ಬೆಳೆಯುತ್ತಿದೆ ಮತ್ತು ರಾಷ್ಟ್ರೀಯತೆ ಉನ್ನತವಾಗುತ್ತಿದೆ. ಆದುದರಿಂದ ಅಲ್ಜೀರಿಯದ ಭವಿಷ್ಯ ಮಾರ್ಪಾಟು ಹೊಂದುವದು ನಿಶ್ಚಿತವಾಗಿಬಿಟ್ಟಿದೆ. ಆದರೆ ಆಳರಸರು ಹೇಗೆ ಅಧಿಕಾರಹಸ್ತಾಂತರ ಮಾಡಲು ಸಿದ್ಧರಾಗುವರು ಎಂಬುದನ್ನು ನಿರೀಕ್ಷಿಸಿ ನೋಡಬೇಕಾಗಿದೆಯೆಂದು ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಬಂದ ಎಗ್ ಬರ್ಟ್ ವೈಟರು ಬರೆಯುತ್ತಾರೆ. ಎರಡನೆಯ ಮಹಾಯುದ್ಧದ ಬಳಿಕ ಉಪನಿವೇಶಗಳ ಜನರಿಗೆ ರಾಷ್ಟ್ರೀಯತೆಯ ಅರಿವಾಗಿ ಜಗತ್ತಿನ ಎಲ್ಲೆಡೆಯಲ್ಲೂ ಪಾಶ್ಚಾತ್ಯರ ಅಧಿಕಾರದಿಂದ ಮುಕ್ತರಾಗುವ ಲವಲವಿಕೆಯುಂಟಾಗಿದೆ. ಈ ವಾತಾವರಣಕ್ಕೆ ಅನುಗುಣವಾದ ಪ್ರತಿಕ್ರಿಯೆ ಅಲ್ಜೀರಿಯನ್ನರಲ್ಲೂ ಉಂಟಾಗಿರುವುದು ಕಂಡುಬರುತ್ತದೆ. ಉಪನಿವೇಶಗಳ ಈ ಜಾಗೃತಿ ಸಾಮ್ರಾಜ್ಯಾಧಿಪರ ಹೊಟ್ಟೆಯಲ್ಲಿ ಕಸವಿಸಿಯನ್ನುಂಟುಮಾಡಿದೆ. ಭಾರತದಲ್ಲಿಯ ಚಂದ್ರನಗರ ಆಗಲೇ ಹಿಂದೀ ಒಕ್ಕೂಟವನ್ನು ಸೇರುವ ನಿರ್ಧಾರಕ್ಕೆ ಬಂದಿದೆ. ಅದೇ ಮೇರೆಗೆ ಭಾರತದಲ್ಲಿಯ ಮಿಕ್ಕ ಫ್ರೆಂಚ್ ಪ್ರದೇಶಗಳೂ ಸದ್ಯದಲ್ಲೇ ಭಾರತಕ್ಕೆ ಸೇರಲಿವೆ. ಈ ಪೌರಸ್ತ್ಯರ ಸ್ವಾತಂತ್ರ್ಯ ಪಿಪಾಸೆಯನ್ನು ಹತ್ತಿಕ್ಕಲು ಇಂಡೋ ಚೀನದಲ್ಲಿ ಫ್ರೆಂಚರು, ಇಂಡೊನೇಶಿಯದಲ್ಲಿ ಡಚ್ಚರು ಮತ್ತು ಮಲಯದಲ್ಲಿ ಬ್ರಿಟಿಶರು ಈಗ ಅಹೋರಾತ್ರ ಶ್ರಮಿಸುತ್ತಿರುವುದು ಸುವಿದಿತವಿದೆ. ಅಲ್ಜೀರಿಯನ್ನರೂ ಇದೇ ಸಮಯದಲ್ಲಿ ಸ್ವಾತಂತ್ರ್ಯ ಬೇಕೆಂದು ಆಗ್ರಹಪಡುತ್ತಿರುವುದು ಫ್ರೆಂಚರಿಗೆ ಸಹ್ಯವೆನಿಸಿರಲಿಕ್ಕಿಲ್ಲ. ಆದರೆ ಎಲ್ಲಿಯವರೆಗೆ ಪರಿಶ್ರಮದಿಂದ ಪುಷ್ಟರಾಗುವ ಬಿಳಿಯರ ಕೌಟಿಲ್ಯ ಸಾಗೀತು? ಅತ್ತಗೊಂದು ಕಾಲವಿದ್ದರೆ ಸೊಸೆಗಿನ್ನೊಂದು ಕಾಲವಿದ್ದೇ ಇದೆ ಎಂಬ ಮಾತೀಗ ಸತ್ಯವಾಗುವ ಕಾಲ ಬಂದಿದೆ. ಎಂದಮೇಲೆ ಈ ಕಾಲಗತಿಯನ್ನು ತಡೆಯಲಾರಿಗೆ ಸಾಧ್ಯ?

— ಅರ್ಜುನ

'ಹರಿಜನ'ದಿಂದ

ವೇತನವಿಧಾನ

(ಹಿಂದಿನ ಸಂಚಿಕೆಯಿಂದ ಮುಂಬರಿದುದು)

ಘಟನೆಯಲ್ಲೇ ನಿಶ್ಚಿತ ಮೊಬಲಗನ್ನು ಹೇಳದಿರಲು ಬೇರೆಯ ಕಾರಣಗಳೂ ಇವೆ. ಹಣನೆಂದಾದರೂ ಅಳತೆಯ ಅವಲಂಬನೀಯ ಮಟ್ಟವಾಗಿದ್ದಿದ್ದರೆ ಸರಿ; ಆದರೆ ಅದೀಗ ಹಾಗೆ ಆಗಿರುವುದು ನಿಂತುಹೋಗಿದೆ. ಕರಾಚಿ ಠರಾವಿನ ಕಾಲದಲ್ಲಿ ತಿಂಗಳಿಗೆ ಐನೂರು ರೂಪಾಯಿಗಳು ಒಬ್ಬ ಮಂತ್ರಿಗೆ ಯೋಗ್ಯವಾದ ವೇತನವೆಂದು ಗಣಿಸಲಾಗಿತ್ತು; ೧೯೩೯ ರಲ್ಲಿ ಅದು ಅಲ್ಲಿಂವಲ್ಲಿಗೆ ಸಾಕು ಎನಿಸಿತು; ೧೯೪೫ ರಲ್ಲಿ ಅದು ಸಾಲದೆಂದು ತಿಳಿಯಲಾಯಿತು; ೧೯೪೯ ರಲ್ಲಿ ಮಂತ್ರಿಯ ಸೇವಕನಿಗೆ ಕೂಡ ಅದು ಹೊಟ್ಟೆ ಹೊರೆದುಕೊಳ್ಳಲು ಸಾಕಾಗದ ಮೊಬಲಗು ಎನಿಸಬಹುದು—ಅಥವಾ ಅತಿ ಶ್ರೀಮಂತಿಕೆಯ ಸಂಬಳವೆನಿಸಿದರೂ ಎನಿಸೀತು! ಒಮ್ಮೆ ಹತ್ತು ರೂಪಾಯಿಗಳಿಗೆ ಒಂದು ಸೇರು ಗೋದಿ ಸಿಕ್ಕರೆ, ಇನ್ನೊಮ್ಮೆ ಒಂದು ರೂಪಾಯಿಗೆ ಹತ್ತು ಸೇರು ಗೋದಿ ಸಿಗುವಂತಾಗಬಹುದು—ಹಣದ ಬೆಲೆ ಹೀಗೆ ಇಳಿಯುವಂತಾದೀತು. ಆದುದರಿಂದ ಹೊಸದಿಲ್ಲಿಯಲ್ಲಿ ಚಳಿಗಾಲದ ರಾತ್ರಿ ಮತ್ತು ಬೇಸಿಗೆಯ ನಡುಹಗಲುಗಳಲ್ಲಿ ಇರುವ ಉಷ್ಣಾಂಶದ ವ್ಯತ್ಯಾಸವನ್ನು ತೋರಿಸುವ ಉಷ್ಣಮಾಪಕ ಯಂತ್ರದಂತಿರುವ ಮಾನದಂಡವನ್ನಿಟ್ಟುಕೊಳ್ಳುವುದರಿಂದ ಪ್ರಯೋಜನವೇನು?

ಆದರೆ ನಾನು ಇಲ್ಲಿ ಚಲಾವಣೆಯ ಪ್ರಶ್ನೆಯನ್ನು ಚರ್ಚಿಸಬಯಸುವುದಿಲ್ಲ. ವೇತನವಿಧಾನವು ಘಟನೆಯ ಪೂರ್ವಪೀಠಿಕೆಯಲ್ಲಿ ಕೊಟ್ಟ ವಚನಕ್ಕೆ ಹೊಂದಿಕೊಂಡಿರಬೇಕೆಂದಿಷ್ಟೇ ನನ್ನ ನಮ್ರ ನಿರ್ದೇಶ. ಇದಾಗಬೇಕಾದರೆ, ಸರಕಾರದ ಶಾಖೆಗಳಲ್ಲಾದರೂ ಒಬ್ಬ ಸರಕಾರೀ ನೌಕರನ ಪರಮಾವಧಿಕ ವೇತನವು ಅದು ತನ್ನ ಯಾವನಾದರೊಬ್ಬ ನೌಕರನಿಗೆ ಕೊಟ್ಟ ಕನಿಷ್ಠಾವಧಿಕ ವೇತನಕ್ಕಿಂತ ಇಂತಿಷ್ಟು ಪಟ್ಟಿಗಿಂತ ಹೆಚ್ಚಾಗಬಾರದು ಎಂದಿರಬೇಕು. ಇಷ್ಟ ಅಂತರವನ್ನು ಹೆಚ್ಚಿಸದೆ, ನಿತ್ಯವೂ ಅದು ಕಡಿಮೆಯಾಗಲು ಪ್ರಯತ್ನಿಸುವಂತೆ ಒಂದು ಅಂತರವನ್ನು ನಾವು ನಿಷ್ಕರ್ಷಿಸುವುದಾದರೆ ಒಂದು ವೇಳೆ ಪರಮಾವಧಿಗೂ ಕನಿಷ್ಠಾವಧಿಗೂ ಇರುವ ಅಂತರ ನಾನು ಹೇಳಿದಂತೆ ಹತ್ತು ಅಥವಾ ಹನ್ನೆರಡಕ್ಕೂ ಒಂದಕ್ಕೂ ಇರುವುದಕ್ಕಿಂತ ಹೆಚ್ಚಿದ್ದರೂ ಚಿಂತೆಯಿಲ್ಲ.

ನ್ಯಾಯಾಧೀಶರ ವೇತನಗಳು ಖಂಡಿತವಾಗಿಯೂ ಅತಿರೇಕ ಅಧಿಕವಾಗಿವೆ. ಇಷ್ಟು ಸಂಬಳ ಕೊಟ್ಟರೂ ಪ್ರಸಿದ್ಧ ವಕೀಲರನ್ನು ನ್ಯಾಯಾಧೀಶರಾಗಲು ಒಪ್ಪಿಸುವುದು ಎಷ್ಟೋ ವೇಳೆ ಕಠಿನವಾಗುವುದೆಂದು ನನಗೆ ಹೇಳುವರೆಂಬುದು ಜನಗೆ ಗೊತ್ತು. ವಕೀಲರಾಗಿ ಅವರು ಹೇರಳ ಹಣವನ್ನು ಸಂಪಾದಿಸುತ್ತಾರೆ ಮತ್ತು ನ್ಯಾಯಾಧೀಶರಾದರೆ ದುಡ್ಡಿನ ಲೆಕ್ಕದಲ್ಲಿ ಅವರು ನಿಜವಾಗಿ ನಷ್ಟಪಡತಕ್ಕವರೇ.

ಹೆಚ್ಚುಕಡಿಮೆ ಸಾಮ್ಯವಾದೀ ಧ್ಯೇಯಕ್ಕೆ ಒಪ್ಪಿದೋರುವ ಘಟನಾರಚಕರು ಇದನ್ನು ಗಂಭೀರವಾಗಿ ವಿಚಾರ ಮಾಡಬೇಕು. ಬಂಡವಾಳಶಾಹಿಯ ಪದ್ಧತಿಯಲ್ಲಲ್ಲದಿದ್ದರೆ ಇನ್ನೆಲ್ಲಾದರೂ ನ್ಯಾಯ, ಸಾಮಂಜಸ್ಯ ಮತ್ತು ಅರ್ಥಶಾಸ್ತ್ರಗಳಿಗನುಗುಣವಾಗಿ ತಿಂಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಒಬ್ಬ ವಕೀಲ ತಪ್ಪದೆ ಸಂಪಾದಿಸಲು ಸಾಧ್ಯವಾಗುವಂಥ ಪ್ರಕರಣಪದ್ಧತಿ ಇರುವುದು ಶಕ್ಯವೇ! ಕೆಲ ವಕೀಲರೀಗ ಹಾಗೆ ಸಂಪಾದಿಸುತ್ತಿದ್ದಾರೆ. ವಕೀಲಿ, ವೈದ್ಯವೃತ್ತಿ ಮತ್ತು ವಾಸ್ತುಶಿಲ್ಪಗಳನ್ನು ಹಿಡಿದ ಒಬ್ಬನು ಎಷ್ಟು ಸಂಪಾದನೆ ಮಾಡಿಯಾನು? ಅವು ಮಾನ್ಯವೃತ್ತಿಗಳೆನಿಸಿದ್ದವು; ಏಕೆಂದರೆ ಹಿಂದೆ ಅವನ್ನು ಸೇವಾಭಾವದಿಂದ ಜನರು ಅವಲಂಬಿಸುತ್ತಿದ್ದರು. ಅವುಗಳನ್ನು ಹಿಡಿದವರನ್ನು ಶ್ರೀಮಂತಿಕೆಗೇರಿಸುವುದು ಅವುಗಳ ಗುರಿಯಾಗಿದ್ದಿಲ್ಲ. ಆದರೆ ಆಧುನಿಕ ನಾಗರಿಕತೆ ಅವನ್ನು ಬಹಳ ಮೋಸಗಾರಿಕೆಯ ಉದ್ಯೋಗಗಳನ್ನಾಗಿ ಮಾಡಿಬಿಟ್ಟಿದೆ. ೨೫-೩೦ ವರ್ಷಗಳ ವರೆಗೆ ಬಹಳ ಲಾಭದಿಂದ ವಕೀಲಿ ಮಾಡಿದ ಬಳಿಕ ಒಬ್ಬ ಸಮರ್ಥ ವಕೀಲನನ್ನು ನ್ಯಾಯಾಧೀಶನಾಗಲು ಕೇಳಿಕೊಳ್ಳುವುದೇ ಕಷ್ಟವಂತೆ, ಅಷ್ಟು ಧನಮೋಹ ಅವನಿಗೆ ಅಷ್ಟರಲ್ಲಿ ಹಿಡಿದು ಬಿಟ್ಟಿರುತ್ತದೆ. ಈ ಪದ್ಧತಿಯ ಘಾತಕತೆ ಎಷ್ಟಿದೆ ನೋಡಿರಿ! ಸಮರ್ಥ ವಕೀಲನೆಂದೂ ನಿವೃತ್ತನಾಗಬಯಸುವುದಿಲ್ಲ. ೬೦-೬೫ ವರ್ಷ ವಯಸ್ಸಾದ ಬಳಿಕ ನ್ಯಾಯಾಧೀಶನು ನಿವೃತ್ತನಾಗಲೇಬೇಕು. ನ್ಯಾಯಾಧೀಶಪಟ್ಟವನ್ನು ಬಿಟ್ಟುಕೊಟ್ಟಮೇಲೆ ಅವನು ತನ್ನ ಧನಮೋಹವನ್ನು ಪುನರುಜ್ಜೀವನಗೊಳಿಸಲು ಬಯಸಬಹುದು. ಅವನು ಹಾಗೆ ಮಾಡಲಾರದುದರಿಂದ ನ್ಯಾಯಾಧೀಶನ ಕೆಲಸದ ಬಗ್ಗೆ ಅವನಿಗೆ ಆಸೆಯುಂಟಾಗದಿರಲು ಇದು ಮತ್ತೊಂದು ಕಾರಣ. ಆಳವಾದ ಪಾಂಡಿತ್ಯ, ಸಮಂಜಸ ವಿಚಾರಶಕ್ತಿ, ಸ್ಪಷ್ಟತರ್ಕಬುದ್ಧಿ, ನ್ಯಾಯಪರತೆ, ಆರ್ಜವ ಮತ್ತು ನಿಷ್ಪಕ್ಷಪಾತಮನಸ್ಕತೆ ಇಷ್ಟೆಲ್ಲ ಇದ್ದರೂ ಒಬ್ಬ ನ್ಯಾಯಾಧೀಶನಿಗೆ ಅಥವಾ ವಕೀಲನಿಗೆ ಒಂದು ಗುಣ ಮಾತ್ರ ಇಲ್ಲ-ಅತಿ ದೊಡ್ಡ ಸಂಬಳ ಸಿಗುವುದೆಂಬ ವಿಚಾರವಿದ್ದಲ್ಲದೆ ಅವನು ತನ್ನ ನ್ಯಾಯಶಾಸ್ತ್ರಜ್ಞಾನದ ಪ್ರಯೋಜನವನ್ನು ಸಮಾಜಕ್ಕೆ ಕೊಡಲಾರನು. ಇದು ಅಸಮಂಜಸ ಪರಂಪರೆ ಮತ್ತು ಪದ್ಧತಿಗಳಿಂದ ಉದ್ಭೂತವಾದ ಒಂದು ಕೆಡುಕು. ಇದು ವಕೀಲರಲ್ಲಿರುವ ಅನುವಂಶಿಕ ಗುಣವಲ್ಲ. ಒಳ್ಳೆಯ ಸಂಬಳವನ್ನು ಸಂಪಾದಿಸಲು ಅವಕಾಶ ಕಲ್ಪಿಸಿಕೊಡುವುದರಿಂದ ಅದನ್ನು ತಿದ್ದಲು ಬರದು. ಉಚಿತಸೇವೆ ಸಲ್ಲಿಸುವ ಪರಂಪರೆಯನ್ನು ಹಾಕಿಕೊಡುವುದರಿಂದ ಮಾತ್ರ ಅದನ್ನು ತಿದ್ದಲು ಸಾಧ್ಯವಾದೀತು. ಸರದಾರನೊಬ್ಬನು ಕರ್ತವ್ಯನಿರ್ವಹಣಕ್ಕೆ ಕರೆದರೆ ಅದನ್ನು ಹೇಗೆ ತನಗೊದಗಿದ ಒಂದು ಗೌರವದ ಸಂಧಿ ಎಂದು ತಿಳಿದುಕೊಳ್ಳುತ್ತಿದ್ದನೋ ಹಾಗೇ ನ್ಯಾಯಾಧೀಶನಾಗಲು ಕರೆ ಬಂದರೆ ಅದನ್ನು ತಾನು ಸಲ್ಲಿಸಬೇಕಾದ ಒಂದು ಕರ್ತವ್ಯವಾದ ಋಣ ಎಂದು ವಕೀಲನು ತಿಳಿಯಬೇಕು. ಸರಕಾರ ವಕೀಲನ ಸೇವೆಯನ್ನು ಬಯಸಿದರೆ ಒಲ್ಲೆನೆನ್ನುವುದಿಲ್ಲ ಎಂಬುದು ಅವನ ಸನದಿನ ಒಂದು ಶರ್ತಾಗಬೇಕು. ವೇತನವು ಹೆಸರಿಗೆ ಮಾತ್ರ ತಿಂಗಳಿಗೆ ಒಂದು ರೂಪಾಯಿಕೊಡುವ ಮಟ್ಟದಿಂದ ಮೇಲೆ ಹೇಳಿದ ತತ್ವಗಳಿಗನುಗುಣವಾಗಿ ಸರಕಾರ ಕೊಡಬಲ್ಲ ಪರಮಾವಧಿಯವರೆಗೂ ಹೋಗಬಹುದು.

ಹೊಣೆಗಾರಿಕೆಯ ಒಂದು ಕರ್ತವ್ಯವನ್ನು ಪವಿತ್ರ ಋಣವೆಂದು ತಿಳಿಯಬೇಕಲ್ಲದೆ ಹಣದ ಲೆಕ್ಕದಲ್ಲಿ ಬೆಲೆ ಕಟ್ಟಬಾರದು.

ವರ್ಧಾ, ೭-೬-೪೯ ಕಿ. ಘ. ಮಶ್ರುವಾಲಾ

ಚಿಕ್ಕ ಕತೆ

ಮಿಲನ

ಲೇ:— ಆರ್. ವ್ಹಿ. ಪಂಡಿತ, ಬಿ. ಎ. ಬಿ. ಟಿ. ಬಂಕಿಕೊಡ್ಲು

ವಿಜಯಪುರವು ಬಲು ಸಮೃದ್ಧವಾದ ಊರು. ಅಲ್ಲಿ ಜನತೆಯು ಸದಾಸುಖಿ. ದುಃಖವೆಂಬದೇನು ಎಂದು ಆ ಊರವರಿಗೆ ಗೊತ್ತೇ ಇದ್ದಿಲ್ಲ. ಊರೊಳಗೆ ಎಂದಿಗೂ ಯಾತರದೂ ಕೊರತೆ ಇರುತ್ತಿದ್ದಿಲ್ಲ. ಜನರು ಒಬ್ಬರಿಗೊಬ್ಬರು ಸಕಾಲಕ್ಕೆ ನೆರವಾಗುತ್ತಿದ್ದರು. ಸರಳ ಸ್ವಭಾವದವರೂ ಆದರಾತಿಥ್ಯದಲ್ಲಿ ಹೆಸರಾದವರೂ ಅದ್ದರಿಂದೇನೋ ಲಕ್ಷ್ಮಿ ಮತ್ತು ಶಾರದೆಯರು ಒಂದೇ ಕಡೆಗೆ ವಾಸಿಸುತ್ತಿದ್ದರು. ಅಲ್ಲಿಯವರ ಆದಾಯಕ್ಕೆ ಅನುಸರಿಸಿ ವ್ಯಯವು ಕೂಡ ಹಾಗೇ ಇತ್ತು. ಆದರೆ ಅವರ ಪುಣ್ಯದ ಅಂಶವು ಹೆಚ್ಚು. ಅದ್ದರಿಂದ ದುಃಖವು ಕ್ವಚಿತ್ತೇ ಅವರ ಪಾಲಿಗೆ ಬರುತ್ತಿತ್ತು.

ಆದರೆ ಲುಯಿಸನು ಮಾತ್ರ ದುರ್ದೈವಿಯಾಗಿದ್ದನು. ಅವನು ಸಾಮಾನ್ಯನಿದ್ದರೂ ಸ್ವಂತ ಕಷ್ಟದಿಂದ ಸಾಕಷ್ಟು ಗಳಿಸುತ್ತಿದ್ದನು. ಅವನ ಶಕ್ತಿಪ್ರಯೋಗವನ್ನು ನೋಡಲು ದೂರ ದೂರ ದೇಶದಿಂದ ಸಾವಿರಗಟ್ಲೆ ಜನರು ತಂಡ ತಂಡವಾಗಿ ಬರುತ್ತಿದ್ದರು. ಇದರಿಂದ ಅವನಿಗೆ ವಿಪುಲ ದ್ರವ್ಯವು ಸಿಗುತ್ತಿತ್ತು. ಅವನಿಗೆ ಎಲ್ಲ ತರದ ಸುಖವು ಇತ್ತು. ಆದರೆ ಇಷ್ಟರಿಂದ ಅವನಿಗೆ ಸಮಾಧಾನವಿದ್ದಿಲ್ಲ. ಅವನು ಬಹಳ ಸುಂದರನಾದ ಯುವಕನಿದ್ದನು. ಅವನಿಗೆ ಸರಿದೋರುವ ಅರ್ಧಾಂಗಿಯು ಬೇಕಾಗಿದ್ದಳು. ಯಾರೂ ಅವನ ಮನಸ್ಸಿಗೆ ಬರಲಿಲ್ಲ. ಹೆಣ್ಣು ಹುಡುಕುವ ಪ್ರಯತ್ನವು ನಿಷ್ಫಲವಾಯಿತು. ಅವನು ಬಹಳ ಖಿನ್ನನಾದನು. ಆದರೂ ಮನುಷ್ಯನಿಗೆ ಆಶೆಯು ಇದ್ದೇ ಇರುವದು.

ಒಬ್ಬ ಸರಕಾರಿ ಅಮಲದಾರನಿಗೆ ಆ ಊರಿಗೆ ವರ್ಗವಾಯಿತು. ಅವನ ಸುಸ್ವಭಾವಕ್ಕೆ ಅವನು ಸ್ವಲ್ಪ ದಿನಗಳಲ್ಲಿಯೇ ಎಲ್ಲವರಿಗೆ ಬೇಕಾದವದಾದನು. ಅವನ ಮನೆಯಲ್ಲಿ ಕೆಲವೇ ಮಂದಿ. ಅವನ ಹೆಂಡತಿ, ಒಬ್ಬ ಹುಡುಗಿ ಮತ್ತು ಒಬ್ಬ ಹುಡುಗ. ಹುಡುಗಿಯು ಬಹಳ ಸುಂದರಳೂ ಜಾಣೆಯೂ ಇದ್ದಳು. ಅವಳ ಹೆಸರು ಮೇರಿ. ಅವಳ ಸೌಂದರ್ಯಕ್ಕೆ ಬಹುಜನ ಮರುಳಾಗಿದ್ದರು. ಅವಳು ತನ್ನವಳಾಗಬೇಕೆಂದು ಎಷ್ಟೋ ಜನರ ಮನಸ್ಸಿನಲ್ಲಿ ಬಂದಿರಬಹುದು. ಆದರೆ ಅವರನ್ನೆಲ್ಲ ಅವಳು ಲಕ್ಷಿಸುವಳೇ ?

(ಅವಳು ಲುಯಿಸನ ಕಣ್ಣಿಗೆಬಿದ್ದದಿವಸದಿಂದ) ಕರ್ತವ್ಯನಿಷ್ಠ ಲುಯಿಸನು ಕರ್ತವ್ಯ ಭ್ರಷ್ಟನಾದನು. ಅವನು ತನ್ನ ಉದ್ಯೋಗ ಮಾಡಲೊಲ್ಲ. ಅವನ ಮನಸ್ಸಿನ ಶಾಂತಿಯು ಹಾರಿತು. ಆಗ ಅವನು ಚಂಚಲನಾದನು. ಚಹಪಾರ್ಟಿ ಊಟದ ಔತಣವನ್ನಿತ್ತು ಮೇರಿಯ ಮನವೊಲಿಸುವ ಪ್ರಯತ್ನ ನಡೆಸಿದನು. ಸುಮ್ಮ ಸುಮ್ಮನೆ ಹಣವು ಮಾತ್ರ ಖರ್ಚಾಯಿತು. ಸುಂದರಳಾದ ಮೇರಿಯು ಅಷ್ಟೇ ಚತುರಳಿದ್ದಳು. ಅವನ ಹೇತುವನ್ನು ನಿಮಿಷದಲ್ಲಿ ಮನಗಂಡಳು ಮತ್ತು ತನಗೆ ಏನೂ ಗೊತ್ತಿಲ್ಲದಹಾಗೆ ವರ್ತಿಸಿದಳು. ಮೂರ್ಖನೆಂದು ಅವನನ್ನು ಸಂಬೋಧಿಸಿದಳು. ಅದ್ದರಿಂದ ಲುಯಿಸನಿಗೆ ಬಹಳ ವ್ಯಸನವಾಯಿತು. ಅವನು ಅವಳ ಆಶೆಯನ್ನು ಬಿಟ್ಟನು.

ಸುಮುಹೂರ್ತದಲ್ಲಿ ಒಬ್ಬ ಸಾಮಾನ್ಯನೊಡನೆ ಮೇರಿಯು ಲಗ್ನವಾಯಿತು. ಬೇಗನೇ ಅವಳ ಐಶ್ವರ್ಯವನ್ನೂ ಸುಖವನ್ನೂ ಹೆಚ್ಚಿಸಲು ಅವಳಿಗೆ ಒಂದು ಪುತ್ರರತ್ನವು ಜನಿಸಿತು. ಈಗ ಅವಳಿಗೇನು ಕಡಿಮೆ ? ಎಲ್ಲವೂ ನೆಟ್ಟಗೆ ನಡೆದಿತ್ತು. ಆದರೆ ಅದು ಕಾಲರಾಯನಿಗೆ ಸಹಿಸಲಾಗಲಿಲ್ಲ. ಸುಖದ ತರುವಾಯ ದುಃಖ, ದುಃಖದ ತರುವಾಯ ಸುಖ ಬರುವಂತೆ ಒಮ್ಮಿಂದೊಮ್ಮೆ ಮೇರಿಯ ಗಂಡನು ಹಾಸಿಗೆ ಹಿಡಿದನು. ಬೇನೆಯು ಎಷ್ಟು ಪ್ರಯತ್ನ ಪಟ್ಟರೂ ಗುಣವಾಗಲಿಲ್ಲ. ಡಾಕ್ಟರರು ಬಂದು ಹೋದರು. ಇಂಜಕ್ಶನ, ದೆವ್ವ, ಪ್ರಸಾದ ಎಲ್ಲ ಆದವು. ಇನ್ನಾವ ಉಪಾಯವೂ ಉಳಿಯಲಿಲ್ಲ. ಆಶೆಯು ಮಾಯವಾಯಿತು. ಮೇರಿಯು ಅಪ್ರತಿಭಳಾದಳು. "ಹೇಗಾದರೂ ಮಾಡಿ ನನ್ನ ಗಂಡನನ್ನು ಉಳಿಸಿರೊ" ಎಂದು ಬಂದಬಂದವರನ್ನು ಬೇಡಿಕೊಂಡಳು. ದೈವಗತಿಯನ್ನು ಯಾರಿಂದಲೂ ತಡೆಯಲು ಅಸಾಧ್ಯ. ಡಾಕ್ಟರರು ಕಡೆಯ ಸೂಚನೆಯನ್ನಿತ್ತರು. ವಕೀಲರು ಬಂದರು; ಮೃತ್ಯುಪತ್ರ ತಯಾರಾಯಿತು. ಎಲ್ಲ ಇಸ್ಟೇಟು ಮಗನಿಗೆ ಕೊಡಲ್ಪಟ್ಟಿತು. ಮಗನು ನಿಪುತ್ರಿಕನಾಗಿ ಸತ್ತರೆ ಅದು ಮೇರಿಗೆ ಸಿಗುವದು. ಮೇರಿಯ ಹತ್ತಿರ ಕಡೆಯ ಮಾತಾಡಿಯಾಯಿತು. ಮತ್ತು ಅವನ ಪ್ರಾಣವು ನಿಜಧಾಮಕ್ಕೆ ಹೋಯಿತು. ಮೇರಿಗೆ ಅತ್ಯಂತ ದುಃಖವಾಯಿತು. ಜೀವನವು ಅಂಧಕಾರಮಯವಾಯಿತು. ಆದರೆ ಮಗನಿಗೆ ತಾಯಿ ಎಲ್ಲಿ ಸಿಗುವಳು ? ಅವಳು ಯೋಗ್ಯದಾಳಿಗೆ ಬಂದಳು. ಮಗನ ಸಲುವಾಗಿ ಎಲ್ಲ ದುಃಖವನ್ನು ಮರೆತಳು.

ಇತ್ತ ಲುಯಿಸನು ದರಿದ್ರ ಸ್ಥಿತಿಯವನಾಗಿ ಒಂದು ಗುಡ್ಡದ ಅಡಿಯಲ್ಲಿ ಒಂದು ಗುಡಿಸಲೊಳಗೆ ಇರಹತ್ತಿದನು. ಮುಂಚಿನ ಸಾವಿರಗಟ್ಲೆ ಮಿತ್ರರು ಅಸ್ತರಾದರು. ಗೆಳೆಯರೆಲ್ಲರೂ ದುಡ್ಡಿಗೆ ಮುತ್ತುವರು. ನಿಜವಾದ ಮಿತ್ರನು ಅವನಿಗೆ ಒಬ್ಬನೂ ಇದ್ದಿಲ್ಲ. ಯಾವನೂ ಅವನ ಸಲಿಗೆಯವನಾಗಿರಲು ಒಪ್ಪಲಿಲ್ಲ. ಆದರೆ ಒಂದು ಮೂಕ ಪ್ರಾಣಿಯು ಮಾತ್ರ ಅವನ ಗಳಸ್ಯ ಕಂಠಸ್ಯ ಇತ್ತು. ಅದೊಂದು ಗಿಡುಗ. ಪ್ರತಿದಿನ ಬೇಟೆಯಾಡಿ ಯಜಮಾನನಿಗೆ ಭಕ್ಷ್ಯವನ್ನು ತಂದುಕೊಡುತ್ತಿತ್ತು. ನಿಜವಾಗಿ ಲುಯಿಸನ ಜೀವನವು ಕೇವಲ ಅದರ ಮೇಲೆ ಅವಲಂಬಿಸಿತ್ತು. ಅದ್ದರಿಂದ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಅದನ್ನು ಜೋಪಾನ ಮಾಡುತ್ತಿದ್ದನು. ಅವನು ಎಲ್ಲಿ ಹೋದರೂ ಗಿಡುಗವು ಅವನ ಜೊತೆಯಲ್ಲಿ ಇರುವದೇ. ಹೀಗೆ ಆ ಮೂಕಪ್ರಾಣಿಯ ಜತೆಯಲ್ಲಿ ಅವನು ಮೂಕ ಪಶುವಿನಂತೆ ಜೀವನವನ್ನು ಕಳೆಯುತ್ತಿದ್ದನು. ಹಲವು ವರ್ಷಗಳು ಕಳೆದವು.

ಮೇರಿಯ ಮಗನಿಗೆ ಬೇಟೆಯ ಹುಚ್ಚಿತ್ತು. ಅದಕ್ಕಾಗಿ ಅವನು ನೆರೆಯ ಗುಡ್ಡಕ್ಕೆ ಹೋಗುತ್ತಿದ್ದನು. ಅಲ್ಲಿ ಲುಯಿಸನು ತನ್ನ ಗಿಡುಗ ಪಕ್ಷಿಯ ಸಹಾಯದಿಂದ ಹಲವಾರು ಹಕ್ಕಿಗಳನ್ನು ಹಿಡಿಯುತ್ತಿದ್ದನು. ಅದನ್ನು ನೋಡಿ ಅವರಿಬ್ಬರಲ್ಲಿ ಒಳ್ಳೆಯ ಗೆಳೆತನವು ಹುಟ್ಟಿತು. ಅವನಿಗೆ ಲುಯಿಸನ ಮನೆಯ ಸ್ಥಿತಿಯು ಕಣ್ಣಿಗೆ ಬಿತ್ತು. ಅವನಿಗೆ ಆ ಪಕ್ಷಿಯು ಬೇಕಾಗಿತ್ತು. ಆದರೆ ಅದನ್ನು ಬೇಡುವದು ಹೇಗೆ ? ಲುಯಿಸನು ತನ್ನ ಜೀವನಸರ್ವಸ್ವವನ್ನು ಹೇಗೆ ತೊರೆದಾನು ?

ಅದೇ ನೆನಪು ಅವನಲ್ಲಿ ನಿಂತಿತು. ಪ್ರಯತ್ನ ಮಾಡಿದರೂ ತನ್ನ ಮನಸ್ಸನ್ನು ಬಿಗಿಹಿಡಿಯುವದು ಅವನಿಂದಾಗಲಿಲ್ಲ. ಏನು ಮಾಡುವದು? ಹುಡುಗನು ಹಾಸಿಗೆ ಹಿಡಿದನು. ತಾಯಿಯು ಬಹಳ ಶುಶ್ರೂಷೆ ಮಾಡಿದಳು. ಕಥೆಗಳನ್ನು ಹೇಳಿ ಮನೋರಂಜನೆ ಮಾಡಲು ಪ್ರಯತ್ನ ಮಾಡಿದಳು. ಅವನ ಇಚ್ಛೆಯನ್ನು ಪೂರ್ಣಗೊಳಿಸಲು ಅವನಿಗೆ ಪರಿಪರಿಯಿಂದ ಕೇಳಿ ನೋಡಿದಳು. ಆದರೆ ಅವನೆಲ್ಲಿ ಉತ್ತರವೀಯುವನು ? ಮನಸ್ಸಿನೊಳಗಿದ್ದದ್ದು ಹೇಳಲು ಅಸಾಧ್ಯವಿತ್ತು. ಅದು ಪೂರೈಸುವದು ದುಸ್ತರವೆನಿಸಿತೋ ಏನೋ ? ಔಷಧದಿಂದ ಏನೂ ಗುಣಬರಲಿಲ್ಲ. ಸರಿ ಮಾನಸಿಕ ರೋಗಕ್ಕೇನು ಔಷಧ ? ತಾಯಿಯು ಅವನ ಮನವೊಲಿಸಲು ಪ್ರಯತ್ನಿಸಿದಳು. ಅವನ ಇಚ್ಛೆಯನ್ನು ಪೂರೈಸುವೆನೆಂದು ವಚನವಿತ್ತಳು. ಆಗ ಏನೋ ಅದನ್ನು ಹೇಳಲು ಅವನು ಸಿದ್ಧನಾದನು. ಅವನು ಲುಯಿಸನ ಗಿಡುಗವನ್ನು ಬೇಡಿದನು. ಒಂದು ಕ್ಷಣ ಎಲ್ಲವೂ ಸ್ತಬ್ಧವಾಯಿತು. ತನ್ನ ಹಟಕ್ಕಾಗಿ ಅವನಿಗೆ ಬಹಳ ಕೆಡಕೆನಿಸಿತು. ಅದು ಮೇರಿಯ ಲಕ್ಷ್ಯಕ್ಕೆ ಬಾರದೇ ಹೇಗೆ ಇದ್ದೀತು ?

ಅವಳು ತನ್ನ ಸ್ವಾರ್ಥವನ್ನು ಬದಿಗೊತ್ತಿ ಗಿಡುಗಪಕ್ಷಿಯನ್ನು ತನ್ನ ಮಗನಿಗೆ ತಂದುಕೊಡಲು ಒಪ್ಪಿದಳು. ಹುಡುಗನಿಗೆ ಆನಂದವಾಯಿತು. ಅವನು ಹೊಟ್ಟೆತುಂಬ ನಕ್ಕನು. ಆದರೆ ಮೇರಿಯ ಮನಸ್ಸು ಅಸ್ಥಿರವಾಯಿತು. ತನ್ನ ಹಿಂದಿನ ವರ್ತನೆಯು ನೆನಪಾಯಿತು. ಲುಯಿಸನನ್ನು ಹೀಯಾಳಿಸಿದ್ದಕ್ಕಾಗಿ ಅವಳ ಮನಸ್ಸು ಅವನನ್ನು ಕಾಣಲೊಲ್ಲದು. ಎಂಥ ಪ್ರಸಂಗವಿದು? ಲುಯಿಸನ ಹತ್ತರ ಗಿಡುಗಪಕ್ಷಿಯನ್ನು ಬೇಡುವದು ಹೇಗೆ? ಇಲ್ಲವಾದರೆ ಮಗನನ್ನು ತೃಪ್ತಿಗೊಳಿಸುವದು ಹೇಗೆ? ಈ ಪ್ರಕಾರ ಅವಳ ಮನಸ್ಸಿನಲ್ಲಿ ವಿಚಾರಗಳು ಬರತೊಡಗಿದವು. ಆದರೆ 'ಮಗನನ್ನು ನೋಡಿ, ಅದನ್ನೆಲ್ಲ ಮರೆ' ಎಂದು ಅವಳ ವಿವೇಕವು ಹೇಳುತ್ತಿತ್ತು. ದ್ವಂದ್ವಯುದ್ಧವು ಸ್ವಲ್ಪದರಲ್ಲಿ ಮುಗಿಯಿತು. ಜಯವು ಯಾರಿಗೆ? ಕಟ್ಟಕಡೆಗೆ ಕರ್ತವ್ಯಕ್ಕೆ ಯಶವು ದೊರೆಯಿತು. ಅವಳ ಮಾತೃಹೃದಯವು ಜಾಗೃತವಾಯಿತು. ಗಿಡುಗವನ್ನು ಬೇಡಿ ತರುವದು ಎಂದು ಅವಳು ನಿಶ್ಚಯಿಸಿದಳು. ಹೀಗೆ ಮಗನಿಗೆ ಆಶ್ವಾಸನ ಕೊಟ್ಟು ಗೆಳತಿಯೊಂದಿಗೆ ಲುಯಿಸನಲ್ಲಿಗೆ ನಡೆದಳು. ಆಗ ಲುಯಿಸನು ಗುಡಿಸಲಲ್ಲೇ ಇದ್ದನು. ಇಬ್ಬರೂ ಆಗಂತುಕರನ್ನು ಕಂಡು, ಅವನು ಮುಂದೆ ಬಂದು ಸ್ವಾಗತಿಸಿದನು: ಆಗ್ರಹದಿಂದ ಅವರನ್ನು ಕರೆದೊಯ್ದನು.

'ನನ್ನ ಸಲುವಾಗಿ ಎಷ್ಟೆಲ್ಲ ತ್ರಾಸ. ಸುಮ್ಮನೆ ನಿನ್ನ ಕೆಲಸದಲ್ಲಿ ವಿಘ್ನ ತಂದೆನಲ್ಲ! ಕ್ಷಮಿಸು ನಮ್ಮನ್ನು' ಎಂದು ಮೇರಿಯು ಸುರುಮಾಡಿದಳು.

'ಎಂದಿಗೂ ಇಲ್ಲ. ನಿನ್ನ ಬರುವಿಕೆಯಿಂದ ನನಗೆ ಬಹಳ ಆನಂದವಾಯಿತು. ಇಷ್ಟು ದಿನ ದೇವರು ನನ್ನ ಮೇಲೆ ಸಿಟ್ಟಿಗೆದ್ದಿದ್ದನು. ಈಗ ಸ್ವಲ್ಪ ದಯೆ ತೋರಿಸಿದನು. ನೀನು ನನ್ನಲ್ಲಿಗೆ ಬಂದದ್ದರಿಂದ ನಾನು ಧನ್ಯನಾದೆನು' ಎಂದು ಲುಯಿಸನು ಉತ್ತರವನ್ನಿತ್ತನು.

"ಆದರೆ ನನ್ನ ಮುಂಚಿನ ವರ್ತನೆಯನ್ನು ಮರೆತೆಯಾ? ನನ್ನ ಸಲುವಾಗಿ ನಿನ್ನ ಎಲ್ಲ ಐಶ್ವರ್ಯವೂ ಹೋಮವಾಯಿತು. ನಾನು ಎಷ್ಟು ಪಾಪಿ! ಆದರೆ ಈ ಹೊತ್ತು ನಾವು ಅದನ್ನೆಲ್ಲ ಮರೆಯುವಾ. ಈ ಹೊತ್ತಿಗಾದರೂ ನಾವು ನಿನ್ನ ಅತಿಥಿಯಾಗಲು ಬಯಸುತ್ತೇವೆ. ಆದೀತೆ?" ಎಂದು ಮೇರಿಯು ಸ್ಪಷ್ಟವಾಗಿ ನುಡಿದಳು.

ಲುಯಿಸನು ಆನಂದ ವ್ಯಕ್ತಮಾಡಿದನು. ಊಟದ ವ್ಯವಸ್ಥೆ ಮಾಡಲು ಅವರ ಅಪ್ಪಣೆಯನ್ನು ಪಡೆದುಕೊಂಡನು. ಹೋಗುವ ಮೊದಲು 'ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿರಿ' ಎಂದು ಹೇಳಲು ಅವನು ಮರೆಯಲಿಲ್ಲ.

ಲುಯಿಸನು ವಿಚಾರಮಗ್ನನಾದನು. ಕಿಸೆಯಲ್ಲಿ ಒಂದು ಖೊಟ್ಟಿ ಕಾಸು ಕೂಡ ಇದ್ದಿಲ್ಲ. ಕೈಗಡತರಲು ಕೊಡುವವರಿದ್ದಿಲ್ಲ. ಮನೆಯೊಳಗಿನ ಸಾಮಾನೇನಾದರೂ ಮಾರುವದೆಂದರೆ ಮನೆಯಲ್ಲೇನುಂಟು? ಒಂದು ನಿಮಿಷ ಅವನು ತನ್ನ ದೃಷ್ಟಿಯನ್ನು ಕೋಣೆಯ ಕಡೆಗೆ ತಿರುಗಿಸಿದನು. ಅಲ್ಲಿ ಏನೂ ಇದ್ದಿಲ್ಲ. ಗಿಡುಗಪಕ್ಷಿಯು ಮಾತ್ರ ಒಂದು ಗೂಟದ ಮೇಲೆ ಕೂತಿತ್ತು. ಅವನ ದೃಷ್ಟಿಯು ಅದರ ಕಡೆಗೆ ಹೋಯಿತು. ಸ್ವಲ್ಪ ಹೊತ್ತು ಅಲ್ಲಿ ನಿಂತು ಮತ್ತೆ ಅದು ದೂರಸರಿಯಿತು. ಗಿಡುಗಪಕ್ಷಿಯ ರೆಕ್ಕೆಯ ಸಪ್ಪಳದಿಂದ ತಿರುಗಿ ಅವನ ದೃಷ್ಟಿಯು ಅದರ ಕಡೆಗೆ ಹೋಯಿತು. ಅದು ಮೂಕಪ್ರಾಣಿಯ ಸೂಚನೆ ಎಂದು ಅವನಿಗೆ ಭಾಸವಾಯಿತು. ಕಣ್ಣುಗಳಿಂದ ನೀರು ಭಸಭಸನೇ ಬರತೊಡಗಿತು. ಗಲ್ಲಗಳ ಮೇಲಿಂದ ಅವು ಉರುಳಿ ಬಿದ್ದವು. ಮನಸ್ಸು ಗಟ್ಟಿಮಾಡಿ ಎಡಗೈಯಿಂದ ಕಣ್ಣುಗಳನ್ನು ಒರಿಸಿ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಒಂದೇ ಹೊಡೆತಕ್ಕೆ ಆ ಗಿಡುಗದ ರುಂಡವನ್ನು ಹಾರಿಸಿದನು. ಬೇಗನೆ ಅದರ ಮಾಂಸದ ಪಕ್ವಾನ್ನವಾಯಿತು.

ಊಟದ ಎಲ್ಲ ವ್ಯವಸ್ಥೆಯಾಯಿತು. ಬಟ್ಟಲಗಳನ್ನಿಟ್ಟು ತಾನೇ ಲುಯಿಸನು ಅವರಿಗೆ ಬಡಿಸಿದನು. ಪಾಪ ಮೇರಿಗೆ ಏನು ಗೊತ್ತು ತನಗೆ ಬೇಕಾದ ಗಿಡುಗಪಕ್ಷಿಯ ಮಾಂಸವನ್ನು ತಾವು ಆಗ ಸೇವಿಸುತ್ತೇವೆಂದು? ಊಟವು ಮುಗಿಯಿತು. ಪ್ರಸ್ತಾವನೆಯಲ್ಲಿ ಪುತ್ರ ಪ್ರೇಮದ ಆಖ್ಯಾಯಿಕೆಯನ್ನು ಹೇಳಿ ತಾನು ಬಂದ ಕಾರಣವನ್ನು ಅಷ್ಟೇ ಹೇಳಲು ಸುರುಮಾಡಿದಳು

'ನಿನ್ನ ಲಗ್ನವೇ ಆಗಿಲ್ಲ. ಅಂದ ಮೇಲೆ ಪುತ್ರಪ್ರೇಮದ ರುಚಿ ನಿನಗೆ ಹೇಗೆ ತಿಳಿಯಬೇಕು?' ಎಂದಳು. "ನನಗೆ ಒಬ್ಬ ಮಗನಿರುವನು. ಅವನ ಇಚ್ಛೆಯನ್ನು ಪೂರೈಸುವದು ನನ್ನ ಆದ್ಯ ಕರ್ತವ್ಯವು. ಈಗ ಅವನು ಅಸ್ವಸ್ಥನಿದ್ದಾನೆ. ಅವನ ಕಾಯಿಲೆಯು ಏನು ಮಾಡಿದರೂ ಗುಣಹೊಂದುವದಿಲ್ಲ. ಅದು ನಿನ್ನಿಂದ ಗುಣವಾಗುವದು ಸಾಧ್ಯವುಂಟು. ನೀನಷ್ಟು ಸಹಾಯಮಾಡುವಿಯಾ?" ಎಂದು ಮುಂದರಿಸಿದಳು.

"ಖಾತ್ರಿಯಿಂದ—ನನ್ನಿಂದ ಅದು ಶಕ್ಯವಾದರೆ" ಎಂದನು.

"ನಿನಗೆ ಅದು ಅಸಾಧ್ಯವಿಲ್ಲ. ವಚನಕೊಡುವಿಯಾ?" ಎಂದು ಕೇಳಿದಳು.

"ಅದರಲ್ಲಿ ಸಂಶಯ ಪಡಬೇಡ. ತಗೋ ನನ್ನ ಭಾಷೆ. ಹೇಳು ನಾನು ಏನು ಮಾಡಬೇಕು?"

ಆಗ ಮೇರಿಯು ದೊಡ್ಡ ಶ್ವಾಸಬಿಟ್ಟು "ಅವನಿಗೆ ನಿನ್ನ ಗಿಡುಗವು ಬೇಕು" ಎಂದಳು.

'ಅಸಾಧ್ಯ' ಎಂದು ಹೇಳಿ ಅವನು ಮುಖವನ್ನು ತಿರುಗಿಸಿದನು.

"ಹೀಗೆ ನನ್ನ ಮೇಲೆ ಸೇಡು ತೀರಿಸಿಕೊಳ್ಳಬೇಡ. ಇದೇ ಈಗ ಒಪ್ಪಿ ನನ್ನನ್ನು ನಿರಾಶೆಗೊಳಿಸಬೇಡ. ಕ್ಷಮಿಸು. ನನ್ನ ಮಗನನ್ನು ಉಳಿಸು. ಉಪಕಾರವಾದೀತು. ಅದರ ಬದಲು ನಿನಗೆ ಬೇಕಾದಷ್ಟು ಹಣ ಕೊಡುವೆನು. ಅದು ನನ್ನ ಮಗನ ಜೀವ ಉಳಿಸುವದು. ಸಿಟ್ಟಾಗಬೇಡ."

ಲುಯಿಸನಿಗೆ ಮಾತಾಡಲು ಆಗಲಿಲ್ಲ. ಅವನು ಪೆಟ್ಟಿಗೆ ಒಳಗೆ ಹೋಗಿ ಗಿಡುಗದ ಗರಿಗಳನ್ನು ಚುಂಚನ್ನೂ ತಂದು ಅವರ ಎದುರಿಗೆ ಇಟ್ಟನು.

ತನ್ನ ಮಾತುಗಳನ್ನು ಕೇಳಿ ಲುಯಿಸನು ಗಿಡುಗವನ್ನು ತನಗೆ ಕೊಡುವನೆಂದು ಮೇರಿಯು ತಿಳಿದಿದ್ದಳು ಮತ್ತು ಅದನ್ನೇ ತರಲು ಹೋಗಿರುವನೆಂದು ತಿಳಿದು ಬರಿಗೈಯಿಂದ ಬಂದವನನ್ನು ಕಂಡು ಅವಳು "ಇದೇನು? ಗಿಡುಗ ಪಕ್ಷಿ ಎಲ್ಲಿ?" ಎಂದು ಕೇಳಿದಳು.

'ಅದರ ಮಾಂಸವನ್ನು ನಿಮಗೆ ಬಡಿಸಿದೆನು' ಎಂದನು.

ಮೇರಿಯು ನಿರುಪಾಯಳಾದಳು. ತನ್ನ ಮೂರ್ಖತನಕ್ಕಾಗಿ ಅವಳು ಬಹಳ ಪಶ್ಚಾತ್ತಾಪ ಹೊಂದಿದಳು. ಲುಯಿಸನು ಎಂಥವನೆಂದು ಅವಳಿಗೆ ಈಗ ಹೊಳೆಯಿತು. ಆದರೆ ಅದು ವಿಚಾರಮಾಡುವ ಸಮಯವಾಗಿದ್ದಿಲ್ಲ.

ತಾನು ಹೇಗೆ ಮನೆಗೆ ಹೋಗಲಿ ಮತ್ತು ಮಗನಿಗೆ ಬರಿಗೈಯನ್ನು ಹೇಗೆ ತೋರಿಸಲಿ ? ಎಂಬ ವಿಚಾರದಲ್ಲಿ ಬಿದ್ದಳು

ಮೇರಿ ಮನೆಗೆ ಮರಳಿದಳು. ಮಗನ ಕೈಗಳು ಮುಂದೆ ಬಂದವು. ಮೇರಿಯು ಅವುಗಳಲ್ಲಿ ತನ್ನ ಬರಿಕೈಗಳನ್ನು ಇಟ್ಟಳು. ಮಗನಿಗೆ ಧಕ್ಕೆತಗಲಿತು ಮತ್ತು ಅವನ ಜೀವನವು ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ತೆರಳಿತು. ಮೇರಿಗೆ ಬಹಳ ದುಃಖವಾಯಿತು. ಆದರೆ ವ್ಯರ್ಥ. ಅವಳು ಆಗ ದೊಡ್ಡ ಆಸ್ತಿಯ ಯಜಮಾನಿಯಾದಳು. ಅಣ್ಣನು ಅವಳು ಪುನರ್ವಿವಾಹವನ್ನು ಮಾಡಿಕೊಳ್ಳಬೇಕೆಂದು ಹಟ ಹಿಡಿದನು. ಎಷ್ಟು ಹೇಳಿದರೂ ಅವಳು ಒಪ್ಪಲೊಲ್ಲಳು. ಎಲ್ಲವರ ಆಗ್ರಹವು ಹೆಚ್ಚಾಯಿತು. ಆಗ ಮೇರಿಯು ಒಪ್ಪಿದಳು.

"ತನ್ನ ಲಗ್ನವು ಲುಯಿಸನೊಡನೆ ಆಗತಕ್ಕದ್ದು" ಎಂದು ಅವಳು ಹೇಳಿದಳು. ಅದನ್ನು ಕೇಳಿ ಎಲ್ಲರೂ ನಕ್ಕರು. ದರಿದ್ರನಾದ ಲುಯಿಸನು ಅವರ ಮನಸ್ಸಿಗೆ ಬರಲಿಲ್ಲ. ಆಗ "ಪುನಃ ವಿಚಾರಮಾಡಿ ಮಾತಾಡು" ಎಂದು ಅಣ್ಣನು ಅಂದನು. ಆಗ ಅವಳು ಗಿಡುಗದ ವೃತ್ತಾಂತವನ್ನು ಹೇಳಿ, "ಚಂಚಲವೃತ್ತಿಯ ಶ್ರೀಮಂತನಿಗಿಂತ ಒಮ್ಮನಸ್ಸಿನ ದರಿದ್ರನೇ ಲೇಸು" ಎಂದಳು. ಆಗ ಅವರೆಲ್ಲರು ಮೇರಿಯ ನಿರ್ಧಾರವನ್ನು ಕೇಳಿ ಸುಮ್ಮನಾದರು. ಈ ಪ್ರಕಾರ ಆ ಜೀವಜ್ಯೋತಿಗಳ ಮಿಲನವಾಯಿತು.

ಭಾರತದ ರಾಜ್ಯಘಟನೆ ಮತ್ತು ಸಂಸ್ಥಾನಗಳು

ಕಾಂಗ್ರೆಸ್ಸಿನೊಳಗಿನ ಅನೈಕ್ಯದ ಬಗ್ಗೆ ಪಂ. ಜವಾಹರಲಾಲರಿಗೆ ಚಿಂತೆ— ಚಂದ್ರನಗರ ನಿರ್ಣಯದ ಪರಿಣಾಮಗಳು

ಭಾರತದ ಘಟನಾಸಮಿತಿಯ ಕಟ್ಟಡ
—ಚಿತ್ರ: ಅನಂತ ಬಾಬು ದಿವಾಕರ

ಸಂಸ್ಥಾನಗಳ ಆದರ್ಶ ಘಟನೆ

ಭಾರತದ ಭಾವೀ ರಾಜ್ಯಘಟನೆಯ ಅನೇಕ ಮುಖ್ಯ ಅಂಶಗಳನ್ನು ನಿರ್ಣಯಿಸಿದ ನಂತರ ಕಳೆದ ವಾರ ಘಟನಾಸಮಿತಿ ಐದು ವಾರಗಳ ಬಿಡುವನ್ನು ಪಡೆಯಿತು. ಜುಲೈ ತಿಂಗಳಲ್ಲಿ ಅದು ಪುನಃ ಸೇರಿ ಉಳಿದ ಘಟನಾಂಶಗಳನ್ನು ಸ್ವೀಕರಿಸಲಿದೆ. ಅಕ್ಟೋಬರ ೨ ನೆ ದಿನ, ಗಾಂಧೀ ಜಯಂತಿಯ ಶುಭ ಮುಹೂರ್ತದಲ್ಲಿ ಹೊಸ ರಾಜ್ಯಘಟನೆಯನ್ನು ಸ್ವೀಕರಿಸಲಾಗುವುದಲ್ಲದೆ, ೧೯೫೦ ಜನೆವರಿ ೨೬ ನೆ ಅಂದರೆ ಹಿಂದಿನ ಸ್ವಾತಂತ್ರ್ಯ ದಿನದಂದು ಭಾರತವನ್ನು ಪ್ರಜಾರಾಜ್ಯ ಅಥವಾ ರಿಪಬ್ಲಿಕ್ ಎಂದು ಘೋಷಿಸಲಾಗುವದು. ಹೊಸ ಘಟನೆಯನ್ವಯ ಚುನಾವಣೆಗಳಾಗಬೇಕಾದರೆ ೧೯೫೦ ಚಳಿಗಾಲದ ವರೆಗೂ ಹೋಗಬಹುದೆಂದು ಪಂ. ಜವಾಹರಲಾಲ ನೆಹರು ಅವರು ಮೊನ್ನೆ ದಿಲ್ಲಿ ರಾಜಕೀಯ ಪರಿಷತ್ತಿನಲ್ಲಿ ಬಹಿರಂಗಪಡಿಸಿದರು. ಅಂದರೆ, ಸದ್ಯದ ಸಂಕಲ್ಪ ಫಲಿಸಿದರೆ, ೧೯೫೧ ರ ಆರಂಭದಲ್ಲಿ ಹೊಸ ರಾಜ್ಯ ಘಟನೆಯ ಹಳಿಗಳ ಮೇಲೆ ಭಾರತದ ರಾಜ್ಯಶಕಟ ನಡೆಯತೊಡಗುವದು.

ಈ ನಡುವೆ ಹೊಸ ರಾಜಕೀಯ ಕಟ್ಟಡಕ್ಕೆ ಸಂಸ್ಥಾನಗಳನ್ನು ಯಾವ ಪ್ರಕಾರ ಜೋಡಿಸಬೇಕೆಂಬ ಪ್ರಶ್ನೆಯ ಬಗ್ಗೆ ಆಳವಾದ ವಿಚಾರ ನಡೆದಿದೆ. ಪ್ರಾಂತಗಳಿಗೂ ಸಂಸ್ಥಾನಗಳಿಗೂ ಆಡಳಿತೆಯ ರೀತಿಯಲ್ಲಿ ಭೇದವಿರಬಾರದೆಂದು ಎಲ್ಲ ರಾಜ್ಯಾಪೇಕ್ಷಿಗಳೂ ಒಪ್ಪುತ್ತಾರೆ. ಆದರೆ ಭಾರತದ ಘಟನಾ ಸಮಿತಿಯೇ ಈಗಿನ ಪ್ರಾಂತಗಳ ಮೇಲೆ ಹೇರಿದಂತೆ ಸಂಸ್ಥಾನಗಳ ಮೇಲೂ ಘಟನೆಯನ್ನು ಹೇರುವದು ಶಾಸನಸಮ್ಮತವಾಗಲಾರದು. ಹಲವು ಸಂಸ್ಥಾನಗಳಲ್ಲಿ ಈಗಾಗಲೆ ಘಟನಾ ಸಮಿತಿಗಳಿವೆ. ಈ ಸ್ಥಿತಿಯಲ್ಲಿ ಸಂಸ್ಥಾನಗಳಿಗೆ ಘಟನೆಯ ಸಂಬಂಧದಲ್ಲಿ ಸೂಚನೆ ಕೊಡಬಹುದಲ್ಲದೆ ಬೇರೆ ಹಾದಿಯಿಲ್ಲ. ಇಂಥ ಮಾರ್ಗದರ್ಶನಕ್ಕಾಗಿಯೆ ಸಂಸ್ಥಾನಗಳಿಗೆ "ಆದರ್ಶರಾಜ್ಯಘಟನೆ"ಯನ್ನು ಸಿದ್ಧಪಡಿಸಲು ರಾವ್ ಸಮಿತಿ ನೇಮಿಸಲ್ಪಟ್ಟಿತ್ತು. ಅದು ಸಿದ್ಧಪಡಿಸಿದ ೧೦೭ ಕಲಮುಗಳೂ ೪ ಪರಿಶಿಷ್ಟಗಳೂ ಉಳ್ಳ ಆದರ್ಶ ಘಟನೆಯನ್ನು ಸಂಸ್ಥಾನಗಳ ಘಟನಾ ಸಮಿತಿಗಳು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಸ್ವೀಕರಿಸಬಹುದೆಂದು ನಂಬಲಾಗಿದೆ. ರಾವ್ ಸಮಿತಿಯವರು ಸಂಸ್ಥಾನಗಳಿಗಾಗಿ ಸಿದ್ಧಪಡಿಸಿದ ಘಟನೆ ಪ್ರಾಂತಗಳಿಗಾಗಿ ಘಟನಾಸಮಿತಿ ಮುನ್ನಿಸಿದ್ದಕ್ಕಿಂತ ವಿಶೇಷ ಭಿನ್ನವಾಗಿಲ್ಲ. ಅದನ್ನು ಸಂಸ್ಥಾನಗಳು ಒಪ್ಪಿಕೊಂಡರೆ ಭಾರತದ ಘಟನೆಯಲ್ಲಿ ಒಂದು ಹೆಚ್ಚಿನ ಕಲಮು ಸೇರಿಸಿ ಪ್ರಾಂತಗಳ ಘಟನೆಯೇ ಸಂಸ್ಥಾನಗಳಿಗೂ ಅನ್ವಯಿಸಬೇಕೆಂದು ವಿಧಿಸಿ, ಭೇದಗಳ ಅಂಶವನ್ನು ಪರಿಶಿಷ್ಟದಲ್ಲಿ ಕಾಣಿಸಬಹುದು.

ರಾವ್ ಸಮಿತಿಯ ಆದರ್ಶ ಘಟನೆಯಲ್ಲಿ ಸಂಸ್ಥಾನಾಧೀಶರ ಅಧಿಕಾರದ ಮೂಲವನ್ನು ನಿರ್ದೇಶಿಸಲಾಗಿದೆ. ಅಧಿಕಾರದ ಉಗಮ ಪ್ರಜೆಗಳೇ ಎಂದು ಸಾರಲಾಗಿದೆಯಲ್ಲದೆ ಭಾರತದ ಅಧ್ಯಕ್ಷನಿಂದ ತನ್ನಾಲಕ್ಕೆ! ನರೇಂದ್ರನೆಂದು ಅಂಗೀಕರಿಸಲ್ಪಟ್ಟವನೇ ನರೇಂದ್ರನೆಂದು ವಿಧಿಸಲ್ಪಟ್ಟಿದೆ. ಅವನು ಅಕೃತ್ಯ ಮಾಡಿದರೆ ಅಧ್ಯಕ್ಷನು ಅಂಗೀಕಾರವನ್ನು ಹಿಂತೆಗೆದುಕೊಳ್ಳಬಹುದು. ಸಂಸ್ಥಾನಗಳ ಶಾಸನ ಸಭೆ ಅಥವಾ ಸಭೆಗಳನ್ನು ಪ್ರಾಂತಿಕ ಸಭೆಗಳಂತೆಯೆ ರಚಿಸಲಾಗುವದು. ನರೇಂದ್ರನನ್ನು ಅವ್ಯಾಪಾರಕ್ಕಾಗಿ ವಿಚಾರಣೆಗೆ ಗುರಿಪಡಿಸುವ ಅಧಿಕಾರ ಶಾಸನಸಭೆಗಳಿಗಿಲ್ಲ. ಅಂಥ ಪ್ರಸಂಗದಲ್ಲಿ ಕೇಂದ್ರದ ಅಧ್ಯಕ್ಷನನ್ನೇ ಅಂಗೀಕಾರವನ್ನು ಹಿಂತೆಗೆದುಕೊಳ್ಳಲು ಕೇಳಿಕೊಳ್ಳಬೇಕಾಗುವದು. ನರೇಂದ್ರನ ಸಂಬಳವನ್ನು ಸಂಸ್ಥಾನವೇ ಕೊಡಬೇಕು. ಆದರೆ ಶಾಸನ ಸಭೆಗೆ ಅವರ ಪರಿಮಾಣವನ್ನು ನಿರ್ಧರಿಸುವ ಅಧಿಕಾರವಿಲ್ಲ. ಸಂಸ್ಥಾನಗಳಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲಾಗುವದಲ್ಲದೆ ಹೈಕೋರ್ಟ ನ್ಯಾಯಾಧೀಶರನ್ನು ಅಧ್ಯಕ್ಷನೂ ಉಳಿದ ನ್ಯಾಯಾಲಯಗಳ ನ್ಯಾಯಾಧೀಶರನ್ನು ನರೇಂದ್ರರೂ ನೇಮಿಸುವರು. ಹೈಕೋರ್ಟಿನ ನಿರ್ಣಯದ ವಿರುದ್ಧ ಭಾರತದ ವರಿಷ್ಠ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು. ಅಧ್ಯಕ್ಷನ ಇಚ್ಛೆಯ ಮೇರೆಗೆ ಪ್ರಾಂತಗಳಿಗೆ ಸೇರಿದ ಯಾವದೊಂದು ಭಾಗವನ್ನು ಸಂಸ್ಥಾನಗಳ ಆಡಳಿತಕ್ಕೊಳಪಡಿಸಲಿಕ್ಕೂ ಘಟನೆಯಲ್ಲಿ ಅವಕಾಶ ಮಾಡಿಕೊಡಲಾಗಿದೆಯೆಂದು ತಿಳಿಯುತ್ತದೆ. ನರೇಂದ್ರರು ಪ್ರಾಂತಿಕ ಗವರ್ನರರಂತೆ ಎಲ್ಲ ಅಂಶಗಳಲ್ಲಿಯೂ ಮಂತ್ರಿಗಳ ಮಾರ್ಗದರ್ಶನ ಪಡೆಯಬೇಕೋ ಬರಿ ಸಲಹೆ ಪಡೆದರೆ ಸಾಕೊ ಎಂಬ ಬಗ್ಗೆ ಮಾತ್ರ ಇನ್ನೂ ಚರ್ಚೆಯಿದೆ.

ಸಂಸ್ಥಾನಗಳ ಸ್ಥೈ ?

ಸಂಸ್ಥಾನಗಳ ಘಟನೆಯ ಅಂತಿಮ ರೂಪವೇನೇ ಆಗಲಿ, ಅವು ಸದ್ಯಕ್ಕೆ ಅನುಭವಿಸುತಿರುವ ಅನೇಕ ಅಧಿಕಾರಗಳಿಗೆ ಎರವಾಗುವವೆಂಬಲ್ಲಿ ಸಂದೇಹವಿಲ್ಲ. ಈ ದಿಶೆಯನ್ನು ಕೆಲವೊಂದು ಸಂಸ್ಥಾನಗಳಲ್ಲಿ ಎದ್ದಿರುವ ಹೊಸ ಶಾಸಕ ವರ್ಗಗಳು ಮೆಚ್ಚುಗೆಯಿಂದ ಸ್ವಾಗತಿಸಲಾರವೆಂಬ ಲಕ್ಷಣಗಳು ತೋರುತಿವೆ. ಪುರೋಗಾಮಿ ಸೌರಾಷ್ಟ್ರ ಒಕ್ಕೂಟವು ತನ್ನ ಘಟನೆಯನ್ನು ರಚಿಸುವ ಕಾರ್ಯವನ್ನು ಕೇಂದ್ರಕ್ಕೇ ಒಪ್ಪಿಸಿದ್ದರೂ ಮೈಸೂರಿನಂಥ ಅಭಿಮಾನಿ ಸಂಸ್ಥಾನಗಳಿಗೆ ಈ ರೀತಿ ಮೂಗು ಹಿಡಿದು ನಡೆಸಿಕೊಂಡು ಹೋಗುವದು ರುಚಿಸಿಲ್ಲ. ಹೆಚ್ಚು ಅಧಿಕಾರಗಳನ್ನು ಕೇಂದ್ರಕ್ಕೆ ಬಿಟ್ಟುಕೊಡುವ ಮಾತಂತೂ ಮೈಸೂರಿಗೆ ತುಂಬ ಕಹಿಯಾಗಿದೆಯೆಂದು ಮೊನ್ನೆ ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಪ್ರಶ್ನೋತ್ತರಗಳ ಕಾಲಕ್ಕೆ ಚೆನ್ನಾಗಿ ಬೆಳಕಿಗೆ ಬಂತು. ಸೇರ್ಪಡೆ ಕರಾರುಪತ್ರದ ತಿದ್ದುಪಡಿಯ ಬಗ್ಗೆ ಸೂಚನೆಗಳು ಬಂದಿವೆಯೋ ಎಂದೊಬ್ಬ ಸದಸ್ಯರು ಕೇಳಿದಾಗ ಉದ್ಭವಿಸಿದ ಅನೇಕ ಪ್ರಶ್ನೋತ್ತರಗಳ ಫಲವಾಗಿ ಸಂಸ್ಥಾನದ ಸರಕಾರದಲ್ಲಿ ಕೇಂದ್ರಕ್ಕೆ ಕೈಹಾಕುವ ಅಧಿಕಾರ "ಖಂಡಿತ" ಇಲ್ಲವೆಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದರು. ಆದರೆ ಹೆಚ್ಚಿಗೆ ಅಧಿಕಾರಗಳನ್ನು ಬಿಟ್ಟುಕೊಡುವ ವಿಚಾರದಲ್ಲಿ ಧೈರ್ಯದಿಂದ "ಇಲ್ಲ"ವೆನ್ನಲೂ ಅವರಿಂದಾಗಲಿಲ್ಲ. ಹಾರಿಸಿ ತೇಲಿಸಿ ಉತ್ತರಕೊಟ್ಟು ಅವರು ಪಾರಾದರು. ಹೀಗೆ ಸಂಸ್ಥಾನದ ಹೊಸ ಜನತಾ ಸರಕಾರಗಳು ನಿರುಪಾಯವಾಗಿ ಕೇಂದ್ರದ ಮಾರ್ಗದರ್ಶನವನ್ನು ಅನುಸರಿಸಬಹುದು.

ಹೃದಯಪರೀಕ್ಷೆ

ಕಲಕತ್ತೆಯ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸೋಲಿನ ನೋವನ್ನು ಕೆಲ ಕಾಂಗ್ರೆಸ್ ಮುಂದಾಳುಗಳು ಹುಸಿನಗೆಯಲ್ಲಿ ತೇಲಿಸಿಯೋ ಅಥವಾ ಅಧ್ಯಕ್ಷ ಪಟ್ಟಾಭಿಯವರಂತೆ ಅದು ಶರಚ್ಚಂದ್ರರ ವೈಯಕ್ತಿಕ ವಿಜಯ, ಕಾಂಗ್ರೆಸ್ಸು ಜಯವನ್ನು ನಿರೀಕ್ಷಿಸಿಯೇ ಇರಲಿಲ್ಲವೆಂದು ಸಮಾಧಾನ ಹೇಳಿಯೋ ತಳ್ಳಿಬಿಡಲು ಪ್ರಯತ್ನಿಸಿದರೂ ಅದರ ಗಾಯ ಹೊರತೋರಿಕೆಗಿಂತ ಹೆಚ್ಚು ಆಳಕ್ಕೆ ಕೊರೆದಿದೆಯೆಂಬಲ್ಲಿ ಸಂದೇಹವಿಲ್ಲ. ದಿಲ್ಲಿ ರಾಜಕೀಯ ಪರಿಷತ್ತಿನಲ್ಲಿ ಪಂ ಜವಾಹರಲಾಲರು ಮಾಡಿದ ಭಾಷಣ ಇದಕ್ಕೆ ನಿದರ್ಶನ. ಕಾಂಗ್ರೆಸ್ ಪ್ರಾಂತಿಕ ಸರಕಾರಗಳ ಕೃತ್ಯಗಳಿಂದ ಜನರು ಬೇಸತ್ತಿದ್ದಾರೆಂದು ಇದರ ಅರ್ಥವೆಂದು ಅವರು ಬಾಯುಬಿಟ್ಟು ಒಪ್ಪಿಕೊಂಡರು. ಕಾಂಗ್ರೆಸ್ಸಿಗರ ದುರ್ವ್ಯಾಪಾರಗಳಿಗಾಗಿ ಅವರು ವಿಷಾದಪಟ್ಟಷ್ಟಲ್ಲದೆ ಕಾಂಗ್ರೆಸ್ಸು ಜನಸಂಪರ್ಕವನ್ನು ತಪ್ಪಿಸಿಕೊಂಡದ್ದು ಇದರಿಂದ ಸಿದ್ಧವಾಗುವ ಕಾರಣ ಅದನ್ನು ಪುನರ್ಘಟಿಸಿ ಬಲಪಡಿಸಬೇಕು, ಇಲ್ಲವೆ ಅದನ್ನು ಕೀಳ್ಮೆಗಿಳಿಯಗೊಡುವ ಬದಲು ವಿಸರ್ಜಿಸಿಬಿಡುವದೇ ಲೇಸೆಂದು ಅವರು ನುಡಿದುದು ಅವರ ಮೃದು ಮನಸಿನ ಮೇಲೆ ಈ ಘಟನೆಯಿಂದಾದ ಪರಿಣಾಮವನ್ನು ತೋರಿಸುತ್ತದೆ. ಕಲಕತ್ತೆಯ ಸೋಲಿಗೆ ಮತದಾರರ ಕ್ರೋಧವಷ್ಟೇ ಅಲ್ಲದೆ ಕಾಂಗ್ರೆಸ್ಸಿನೊಳಗಿರುವ ಒಳ ಜಗಳಗಳೂ ಕಾರಣವೆಂದು ತಿಳಿಯುತ್ತದೆ. ಬಂಗಾಲ ಕಾಂಗ್ರೆಸ್ಸಿನ ಕೆಲ ಗುಂಪುಗಳು ಚುನಾವಣೆಯಲ್ಲಿ ಏನೂ ಆಸ್ಥೆ ವಹಿಸಿದ್ದಿಲ್ಲವಂತೆ. ಈ ಬಗೆಯಾಗಿ ಕರ್ತವ್ಯಭ್ರಷ್ಟರಾದವರ ವಿಚಾರಣೆ ನಡೆಸಿ ಅವರ ಮೇಲೆ ಶಿಸ್ತಿನಕ್ರಮ ಕೈಕೊಳ್ಳಲಾಗುವದೆಂದು ಶ್ರೀ ಕಳಾ ವೆಂಕಟರಾಯರು ಸಾರಿದ್ದಾರೆ. ಈ ಪ್ರಶ್ನೆ ಕಾರ್ಯಸಮಿತಿಯ ಮುಂದಿನ ಸಭೆಯಲ್ಲಿ ವಿಚಾರಿಸಲ್ಪಡುವದು.

ಮದ್ರಾಸ ಮಂತ್ರಿಗಳ ಮೇಲಿನ ಆರೋಪಗಳು

ಕಾಂಗ್ರೆಸ್ಸಿನೊಳಗಿನ ಅನೈಕ್ಯ ಗಂಭೀರಾವಸ್ಥೆಗೆ ಮುಟ್ಟಿರುವ ಇನ್ನೊಂದು ಪ್ರಾಂತವೆಂದರೆ ಮದ್ರಾಸು. ಅ. ಭಾ. ಕಾಂಗ್ರೆಸ್ಸಿನ ಜತೆಕಾರ್ಯದರ್ಶಿ ಶ್ರೀ ಶಂಕರರಾವ್ ದೇವರು ಮದ್ರಾಸಿಗೆ ಹೋಗಿ ಅಲ್ಲಿನ ಮಂತ್ರಿಗಳಲ್ಲಿ ಕೆಲವರ ಮೇಲಿನ ಆರೋಪಗಳ ವಿಚಾರಣೆ ನಡೆಸಿದ ರೀತಿ ಫಿರ್ಯಾದು ಕೊಟ್ಟವರಿಗೆ ಏನೂ ಸಮಾಧಾನವನ್ನುಂಟುಮಾಡಿಲ್ಲ. ಫಿರ್ಯಾದಿಗಳಲ್ಲಿ ಪ್ರಮುಖರಾದ ಶ್ರೀ ಕೆ. ಆರ್. ಕಾರಂತರು ಕಳೆದ ವರ್ಷವೇ ಮಂತ್ರಿಗಳ ಮೇಲೆ ಕೆಲ ಆರೋಪಗಳನ್ನು ಹೊರಿಸಿ ಆಗಿನ ಕಾಂಗ್ರೆಸ್ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರಿಗೊಂದು ಪತ್ರ ಬರೆದುದರ ಮೇಲಿಂದ ಅವರು ಸಂಬಂಧಪಟ್ಟ ಮಂತ್ರಿಗಳನ್ನು ವಿಚಾರಿಸಿದಾಗ ಅವರು ಒಂದು ಉತ್ತರ ಕೊಟ್ಟಿದ್ದರು. ಶಂಕರರಾಯರು ನಡೆಸುತಿದ್ದ ವಿಚಾರಣೆಯಲ್ಲಿ ಹೆಚ್ಚು ಪುರಾವೆಗಳನ್ನು ಒದಗಿಸಬೇಕಾದರೆ ಈ ಉತ್ತರದ ಪ್ರತಿಯನ್ನು ತಮಗೊಪ್ಪಿಸಬೇಕೆಂದೂ ಅಗ ಯಾವ ಆರೋಪಗಳನ್ನು ಅವರೊಪ್ಪಿದ್ದಾರೆ, ಯಾವುವನ್ನು ಒಪ್ಪಿಲ್ಲ ಎಂದು ನೋಡಿಕೊಂಡು ಮುಂದಿನ ವಿಚಾರ ಮಾಡಲನುಕೂಲವಾಗುವದೆಂದೂ ಶ್ರೀ ಕಾರಂತರು ಒತ್ತಾಯಪಡಿಸಿದ್ದರು. ಶ್ರೀ ದೇವರು ಅದಕ್ಕೆ ಒಪ್ಪದ್ದರಿಂದ ಫಿರ್ಯಾದಿ ಪಕ್ಷದವರು ಮುಂದೆ ಈ ವಿಚಾರಣೆಯಲ್ಲಿ ಭಾಗವಹಿಸಲೇ ಇಲ್ಲ. ಹೀಗಾಗಿ ಅವರು ಆರೋಪಿಗಳ ಪರವಾಗಿ ತೋರಿಸಲ್ಪಟ್ಟ ಕೆಲ ಸರಕಾರಿ ಕಾಗದ ಪತ್ರಗಳನ್ನು ನೋಡಿ ಹಾಗೇ ಕಾರ್ಯಸಮಿತಿಗೆ ವರದಿಮಾಡಲು ಮರಳಿದ್ದಾರೆ. ಆದರೆ ಛಲವಾದಿ ಶ್ರೀ ಕಾರಂತರು ಇದನ್ನೆಲ್ಲ ತೆಪ್ಪಗೆ ಸಹಿಸಿಕೊಂಡು ಕುಳ್ಳಿರುವಂತೆ ತೋರುವದಿಲ್ಲ. ಅವರು ಈ ಸಂಬಂಧದಲ್ಲಿ ಶ್ರೀ ದೇವರಿಗೂ ತಮಗೂ ಆದ ಪತ್ರವ್ಯವಹಾರವನ್ನು ಮದ್ರಾಸಿನಿಂದ ಪ್ರಕಟಿಸಿದ್ದಾರೆ. ಮೇಲ್ಕಾಣಿಸಿದ ಮಂತ್ರಿಗಳ ಪತ್ರವನ್ನು ಶ್ರೀ ಕಾರಂತರಿಗೆ ತೋರಿಸುವದಾಗಿ ಶ್ರೀ ದೇವರು ಹಲವು ಸಲ ಮಾತು ಕೊಟ್ಟು ಕೊನೆಗೆ ಅದರಿಂದ ನುಣುಚಿಕೊಂಡರೆಂದು ಆ ಪತ್ರವ್ಯವಹಾರಗಳಿಂದ ಅಭಿಪ್ರಾಯವುಂಟಾಗಲು ಕಾರಣವಿದೆ. ಮಂತ್ರಿಗಳು ಶ್ರೀ ಪ್ರಕಾಶಂ ಮೊದಲಾದವರ ಮೇಲೆ ಕೆಲ ಪ್ರತ್ಯಾರೋಪಗಳನ್ನು ಹೊರಿಸಿದ ಅವುಗಳನ್ನು ಸುಳ್ಳುಗಳೆಯುವ ಪುರಾವೆಗಳನ್ನು ಕೊಡಲು ತಮಗೆ ಸರಿಯಾದ ಅವಕಾಶ ಕೊಟ್ಟಿಲ್ಲವೆಂದೂ ಶ್ರೀ ಪ್ರಕಾಶಂ ಮೊದಲಾದವರು ದೂರಿದ್ದಾರೆ. ಏನಾದರೂ ಮಂತ್ರಿಗಳ ಉತ್ತರದಲ್ಲಿ ಏನೋ ಮಹತ್ವದ ಸಂಗತಿಯಿರಬೇಕೆಂದೂ ಅದನ್ನು ಬಚ್ಚಿಡಲು ಕಾಂಗ್ರೆಸ್ ವರಿಷ್ಠರು ಆತುರಪಡುತ್ತಾರೆಂದೂ ತಿಳಿದುಕೊಳ್ಳಲು ಜನರಿಗೆ ಎಡೆಮಾಡಿ ಕೊಟ್ಟಂತಾಗಿದೆ. ಶ್ರೀ ದೇವರಾದರೋ ಕಾಂಗ್ರೆಸ್ಸಿಗರು ತಮ್ಮೊಳಗಿನ ಕಚ್ಚಾಟವನ್ನು ಹೀಗೆ ಬಹಿರಂಗವಾಗಿ ಪ್ರದರ್ಶಿಸಬಾರದೆಂದುಪದೇಶಿಸಿದರು. ಆದರೆ ಅವರ ವಿಚಾರಣೆಯಿಂದ ಅಸಂತುಷ್ಟರಾದವರು ಈಗ ನಿಷ್ಪಕ್ಷಪಾತಿ ವಿಚಾರಣಾಮಂಡಲವನ್ನೇ ನೇಮಿಸಬೇಕೆಂದು ಕೇಳುತಿದ್ದಾರೆ. ಇನ್ನು ಕೆಲವು ದಿನ ಕಾದು ಮುಂದಿನ ಕ್ರಮ ತೆಗೆದುಕೊಳ್ಳುವೆವೆಂದು ಅವರು ಹೇಳಿಯೂ ಬಿಟ್ಟಿದ್ದಾರೆ.

ಚಂದ್ರನಗರದ ನಿರ್ಣಯ

ಅಕ್ಷರಶಃ ಪ್ರಚಂಡ ಬಹುಮತದಿಂದ (೭೪೬೩ ವಿರುದ್ಧ ೧೧೪) ಚಂದ್ರನಗರವು ಫ್ರೆಂಚರು ಕೊಡಮಾಡಿದ ಫ್ರೆಂಚ್ ಒಕ್ಕೂಟದೊಳಗಿನ ಸ್ವಾಯತ್ತತೆಯ ಆಮಿಷವನ್ನು ನಿರಾಕರಿಸಿ ಭಾರತದಲ್ಲಿ ಲೀನವಾಗುವ ನಿಶ್ಚಯ ಮಾಡಿದ್ದು ಈ ವಾರದ ಮಹತ್ವದ ಒಳ್ಳೆಯ ಸುದ್ದಿ. ಇನ್ನುಳಿದ ನಾಲ್ಕು ದಕ್ಷಿಣ ಭಾರತದ ಫ್ರೆಂಚ ವಸತಿಗಳಲ್ಲಿ ನಾಳೆ ಡಿಸೆಂಬರದಲ್ಲಿ ಜನಮತಗಣನೆಯಾಗಲಿದೆ. ಅಲ್ಲಿನ ಜನರು ಫ್ರೆಂಚ ಸಾಮ್ರಾಜ್ಯದಲ್ಲೇ ಉಳಿಯಲು ಆತುರರಾಗಿದ್ದಾರೆಂದು ಫ್ರೆಂಚ ಸರಕಾರವೀಗ ನಟಿಸುತಿದ್ದರೂ ಚಂದ್ರನಗರದ ನಿಸ್ಸಂದಿಗ್ಧ ನಿರ್ಣಯದ ನಂತರ ಪಾಂಡಿಚೇರಿ, ಮಾಹೆ, ಕರೈಕಲ್, ಯುನನ್ ವಸತಿಗಳು ಈ ಸಂಕೇತವನ್ನನುಸರಿಸದಿರವೆಂದು ಧೈರ್ಯವಾಗಿ ಹೇಳಬಹುದು. ಇಂಥ ಪರಿಣಾಮವನ್ನು ತಪ್ಪಿಸಲು ಫ್ರೆಂಚ್ ಅಧಿಕಾರಿಗಳು ಕೈಲಾದುದನ್ನೆಲ್ಲ ಮಾಡುತಿದ್ದಾರೆ. ಮಾಹೆಯಲ್ಲಿ ಭಾರತದಲ್ಲಿ ಲೀನವಾಗಬೇಕೆಂಬ ರಾಜಕೀಯ ಪಕ್ಷಗಳ ಮೇಲೆ ಪೋಲೀಸು ಮತ್ತು ಅವರಿಂದ ಪ್ರಚೋದಿತರಾದ ಪುಂಡರ ಅತ್ಯಾಚಾರ ಪ್ರಾರಂಭವಾಗಿದೆಯೆಂದು ದೂರು ಬಂದಿದೆ. ಅದರೂ ಪಾಂಡಿಚೇರಿಯ ಅರವಿಂದಾಶ್ರಮದವರು ಕಳೆದ ವರ್ಷ ಫ್ರೆಂಚ ಒಕ್ಕೂಟದಲ್ಲಿ ಉಳಿಯಲು ಅನುಕೂಲರಾಗಿದ್ದರೂ ಈಗ ಸ್ವತಃ ಅರವಿಂದರೇ ಭಾರತದಲ್ಲಿ ಲೀನವಾಗಲು ಜನತೆಗೆ ಸೂಚಿಸುವ ಹೇಳಿಕೆ ಹೊರಡಿಸಿರುವದು ಗಾಳಿ ಯಾವ ದಿಕ್ಕಿಗೆ ಬೀಸುತಿದೆಯೆಂದು ತೋರಿಸುತ್ತದೆ. ಮೇಲಾಗಿ ಜನಮತಗಣನೆಯ ಕಾಲಕ್ಕೆ ನೇಮಿಸತಕ್ಕ ತಟಸ್ಥ ನಿರೀಕ್ಷಕರನ್ನು ಫ್ರೆಂಚ ಮತ್ತು ಭಾರತ ಸರಕಾರಗಳೆರಡೂ ಒಪ್ಪಬೇಕೆಂದು ಈಗ ಫ್ರೆಂಚರು ಒಪ್ಪಿರುವದು ಫ್ರೆಂಚ ಸರಕಾರಕ್ಕೆ ಭಾರತದ ಈ ನಾಲ್ಕು ಚಿಲ್ಲರೆ ವಸತಿಗಳಿಗಿಂತ ಈ ದೇಶದ ಸೌಹಾರ್ದವೇ ಹೆಚ್ಚು ಬೆಲೆ ಬಾಳುವದೆನಿಸಿದೆಯೆಂಬದರ ದ್ಯೋತಕ. ಫ್ರೆಂಚ ಭಾರತದ ಸಮಸ್ಯೆಯ ಪರಿಹಾರದ ನಂತರ ಉಳಿಯುವದೆಂದರೆ ಪೋರ್ತುಗೀಜರ ವಶದಲ್ಲಿರುವ ಗೋವಾ, ದೀವ, ದಮನ ವಸತಿಗಳ ಭವಿತವ್ಯದ್ದು. ಅದು ಫ್ರೆಂಚ ಭಾರತ ಸಮಸ್ಯೆಗಿಂತ ಹೆಚ್ಚು ಜಟಿಲವೆಂದು ಈಗ ತೋರಿಬಂದರೂ ಪೋರ್ತುಗೀಜರು ಏಕಾಕಿಗಳಾದಾಗ ಅದನ್ನು ಬಿಡಿಸುವದು ಅಷ್ಟು ಕಷ್ಟವಾಗದು. ಆದ್ದರಿಂದಲೇ ಫ್ರೆಂಚ ಭಾರತದ ಸಮಸ್ಯೆ ತೀರಿದ ನಂತರವೇ ಭಾರತ ಸರಕಾರ ಪೋರ್ತುಗೀಜ ಭಾರತದ ಪ್ರಶ್ನೆಯನ್ನು ಕೈಗೆ ತೆಗೆದುಕೊಳ್ಳಲಿದೆಯೆಂದು ಅಧಿಕೃತ ವರ್ಗಗಳ ನಂಬಿಕೆ.

ಬಾಳೆಯ ಬೆಳೆ

ಬರೆದವರು: ರಾಮಕೃಷ್ಣ ಹೆಗಡೆ ದೊಡ್ಡಮನೆ

"ಹಿತ್ತಲಿನ ಹುಣಸೆಗೆ ಹುಳಿ ಕಡಿಮೆ" ಎನ್ನುವ ಗಾದೆಯ ಮಾತಿನಂತೆ ಸುಲಭಪ್ರಾಪ್ಯವಾದ ವಸ್ತುವಿನ ಯೋಗ್ಯವಾದ ಬೆಲೆಯನ್ನು ನಾವು ಬಹುತರವಾಗಿ ಅರಿಯುವದಿಲ್ಲ. ದೂರದ ವಸ್ತುವಿಗೆ ಕೈಚಾಚುವದು ಮಾನವನ ಹುಟ್ಟುಗುಣ. ಅಪ್ರಾಪ್ಯಕ್ಕಾಗಿ ದುಃಖವನ್ನಾದರೂ ಸಹಿಸಿಯಾನು, ಆದರೆ ಇದ್ದುದ್ದನ್ನೇ ಸರಿಯಾಗಿ ಉಪಯೋಗಿಸಿ ಸಂತೃಪ್ತಿಪಟ್ಟುಕೊಳ್ಳಲಾರ.

ನಾನು ಹೇಳ ಹೊರಟ ಬಾಳೆಯ ಹಾಡೂ ಇಂತಹದೇ. ಬಾಳೆಯ ನಿಜವಾದ ಬೆಲೆಯನ್ನು ಅರಿತವರು ಬಹಳ ಕಡಿಮೆ. ಇದಕ್ಕೆ ಬಾಳೆಯು ಸದಾ ಸರ್ವದಾ ಲಭ್ಯವಾಗುವ ಅಪರಾಧವೇ ಕಾರಣವಾಗಿರಬೇಕು. ರುಚಿಯಲ್ಲಾಗಲಿ, ಗುಣದಲ್ಲಾಗಲಿ ವೈವಿಧ್ಯದಲ್ಲಾಗಲಿ, ಇದು ಬೇರೆ ಯಾವ ಹಣ್ಣಿಗೂ ಕಡಿಮೆಯಿಲ್ಲ. ಅಷ್ಟೇಕೆ, ನಿಜವಾಗಿ ಹೇಳಬೇಕಾದರೆ ಸರ್ವೋತ್ತಮವೇ ಸರಿ. ಆದರೆ ಜನರು ಮಾತ್ರ ವರ್ಷಕ್ಕೆ ಕೆಲವಾರು ತಿಂಗಳು ಸಿಗುವ ಮಾವು ಪೇರಳೆ ನೇರಳೆಗಳನ್ನೋ ಇಲ್ಲವೆ ವಿಲಾಯತಿಯ ಆರ್ಕರ್ಷಕವಾಗಿದ ಪರಂಗಿ, ಆರೆಂಜ, ಎಪ್ಪಲ ದ್ರಾಕ್ಷೆಗಳನ್ನೋ ಹೊಗಳಿ ಹಾಡುತ್ತಾರೆ.

ಫಲರಾಜ

ಭಗವಾನ್ ಶ್ರೀಕೃಷ್ಣನು ಗೀತೆಯ ಹತ್ತನೆಯ ಅಧ್ಯಾಯದಲ್ಲಿ "ಹಣ್ಣುಗಳಲ್ಲಿ ಬಾಳೆ ನಾನು" ಎಂದು ವಿಸ್ತಾರಭಯದಿಂದ ಹೇಳದಿದ್ದರೂ ಇಲ್ಲವೆ ಹೇಳಲು ಮರೆತಿದ್ದರೂ, ದೇವರ ನೈವೇದ್ಯಕ್ಕೆ ಉಳಿದ ಎಲ್ಲಾ ಹಣ್ಣುಗಳನ್ನು ಬಿಟ್ಟು ಬಾಳೆಯ ಹಣ್ಣನ್ನೇ ಅರ್ಪಿಸುವ ನಮ್ಮ ರೂಢಿಯೊಂದೇ ಬಾಳೆಯು ಪ್ರಧಾನ ಫಲವೆಂಬುದನ್ನು ಸಿದ್ಧಪಡಿಸಲು ಸಾಕು. ಇದಂತೂ ರೂಢಿಯ ಮಾತಾಯಿತು. ಇನ್ನು ಆಧುನಿಕ ದೃಷ್ಟಿಯಿಂದ ನೋಡಿದರೂ ಅಷ್ಟೆ. ದೇಹದ ಬೆಳವಣಿಗೆಗೆ ಬೇಕಾಗುವ ಎಲ್ಲಾ ಮುಖ್ಯವಾದ ಪೋಷಣದ್ರವ್ಯಗಳೂ ಇದರಲ್ಲಿವೆ. ಅಷ್ಟೇ ಅಲ್ಲ, ವಿಪುಲವಾಗಿವೆ. ಬೇರೆ ಹಣ್ಣುಗಳಲ್ಲಿ ಇಂಥ ಒಂದೆರಡು ಬಗೆಯ ದ್ರವ್ಯಗಳಿದ್ದರೆ ಬಹಳವಾಯಿತು. ಬಾಳೆಯ ಹಣ್ಣಿನಲ್ಲಿ ವಿಟಾಮಿನ್ ಎ. ಬಿ. ಸಿ. ಡಿ ಮತ್ತು ಇ ಹಾಗೂ ಪ್ರೊಟೀನ್, ಫಾಸ್ಫೋರಸ, ಸುಣ್ಣ ಮತ್ತು ಲೋಹಗಳು ದೊಡ್ಡ ಪ್ರಮಾಣದಿಂದ ದೊರೆಯುವವು. ಇದರ ಹೊರತಾಗಿ ಹಣ್ಣಿಗೆ ಸಹಜವಾದ "ಸಿಹಿ" (Sugar) ಯಂತೂ ಇದ್ದೇ ಇದೆ. "ಹಸಿದು ಹಲಸು, ಉಂಡು ಬಾಳೆ" ಎನ್ನುವಂತೆ ಊಟದ ಜೊತೆಗಾಗಲಿ, ತದನಂತರವಾಗಲಿ ಬಾಳೆಯ ಹಣ್ಣಿನ ಮಿತವಾದ ಸೇವನೆಯು ಆರೋಗ್ಯಕ್ಕೆ ಬಹಳ ಹಿತಕಾರಿಯಾದದ್ದು. ಕೂತು ಕೆಲಸ ಮಾಡುವವರಿಗೆ ತುಸು ಹಾಲಿನೊಂದಿಗೆ ತಕ್ಕಷ್ಟು ಬಾಳೆಯ ಹಣ್ಣು ಪರ್ಯಾಪ್ತ ಆಹಾರವಾಗಬಹುದು. ಮೇಲೆ ಹೇಳಿದಂತೆ ಇದರಲ್ಲಿ ಎಲ್ಲಾ ಪೋಷಣದ್ರವ್ಯ ಇರುವದರಿಂದ ಬಾಳೆಯ ಹಣ್ಣಿನ ಸೇವನೆಯು ನಮ್ಮ ಆಹಾರವನ್ನು ಸಮಧಾತು (Balanced diet) ವನ್ನಾಗಿ ಮಾಡಲು ಸಹಾಯಕವಾಗುವದು. ನಮ್ಮ ನಿತ್ಯದ ಆಹಾರದಲ್ಲಿ ಕೊರತೆಯಾಗುವ ದ್ರವ್ಯಗಳನ್ನು ಇದು ತುಂಬುವದು. ಇದರಲ್ಲಿ ಹಾಲಿನಲ್ಲಿ ದೊರೆಯುವ ಮತ್ತು ತತ್ತಿಯಲ್ಲಿರುವ ಗುಣಗಳೂ ಕೂಡಿರುವದರಿಂದ ನಿರಾಮಿಷರಿಗೂ ಮತ್ತು ಹಾಲನ್ನು ಹೇಸುವವರಿಗೂ ಇಲ್ಲವೆ ಹಾಲು ದೊರೆಯದ ಬಡವರಿಗೂ ಅನುಕೂಲವಾದುದು. ಅತಿಸಾರಕ್ಕೂ ಅಗ್ನಿಮಾಂದ್ಯಕ್ಕೂ ಇದು ಔಷಧ. ಮಲಬದ್ಧತೆಗೆ ಇದು ಮದ್ದು. ದಪ್ಪಗಿರುವವರನ್ನು ತೆಳ್ಳಗೆ, ತೆಳ್ಳಗಿರುವವರನ್ನು ದಪ್ಪಗೆ ಮಾಡುವ ಸಾಮರ್ಥ್ಯ ಇದರಲ್ಲಿದೆ. ವರ್ಷದ ಎಲ್ಲಾ ಋತುಗಳಲ್ಲೂ ಬೆಳೆಯುವ ಈ ಹಣ್ಣು ಸಾಮಾನ್ಯವಾಗಿ ಭಾರತದ ಎಲ್ಲಾ ಕಡೆಗಳಲ್ಲೂ ಸಿಗುವದು.

ಇತಿಹಾಸ

ಭಾರತದ ವಿಶೇಷ ಫಲವಾದ ಬಾಳೆಗೆ ಉದ್ದವಾದ ಇತಿಹಾಸವಿದೆ. ಕ್ರಿ. ಪೂ. ೩೨೭ ರಲ್ಲಿ ಸಿಕಂದರನಿಗೆ ಸಿಂಧದ ಕಂದರದಲ್ಲಿ ಬಾಳೆಯ ಮರಗಳು ಕಂಡಿದ್ದವಂತೆ. ನಂತರ ಅರಬರು ಇದನ್ನು ಪಾಲಿಸ್ತೈನ್, ಈಜಿಪ್ತ ಮೊದಲಾದೆಡೆ ಒಯ್ದರು. ಆದರೆ ಇದರ ಬಾಹುಲ್ಯ ಇಂದಿಗೂ ಭಾರತದಲ್ಲೇ ಉಳಿದಿದೆ. ಭಾರತದಲ್ಲಾದರೂ ಮದ್ರಾಸಕ್ಕೆ ಪ್ರಥಮ ಸ್ಥಾನ. ಮದ್ರಾಸ ಪ್ರಾಂತದಲ್ಲಿ ಎಲ್ಲಕ್ಕಿಂತ ಹೆಚ್ಚು ಅಂದರೆ ೧,೩೮,೦೦೦ ಎಕರೆ ನೆಲದಲ್ಲಿ ಇದನ್ನು ಬೆಳೆಯಲಾಗುತ್ತಿದೆ. ನಂತರ ಬರುವದು ಬಂಗಾಲ. ಇಲ್ಲಿ ೪೪,೦೦೦ ಎಕರೆ ಭೂಮಿಯನ್ನು ಈ ಬೆಳೆ ಆಕ್ರಮಿಸಿದೆ. ಇವಲ್ಲದೆ ಆಸಾಮ, ಓಡಿಸಾ, ಬಿಹಾರ ಮುಂಬಯಿಯ ಕರಾವಳಿ ಪ್ರದೇಶಗಳಲ್ಲೂ ಇದು ವಿಪುಲವಾಗಿ ಬೆಳೆಯುತ್ತದೆ.

ಬಾಳೆಯ ಎಲ್ಲಕ್ಕೂ ದೊಡ್ಡ ವಿಶೇಷತೆಯೇನಂದರೆ ಅದು ಕಡಿಮೆ ಖರ್ಚಿನಿಂದ ಅದರೆ ಹೆಚ್ಚು ಪ್ರಮಾಣದಿಂದ ಉತ್ಪನ್ನವಾಗುವ ಫಲ. ಇದಕ್ಕೆ ಶ್ರಮವೂ ಹೆಚ್ಚಿಗೆ ಬೇಕಾಗಿಲ್ಲ. ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳಲ್ಲಿ ಅಡಿಕೆಯ ತೋಟದಲ್ಲೇ ಬಾಳೆಯನ್ನು ಬೆಳೆಯಲಾಗುತ್ತಿದೆ. ಒಮ್ಮೆ ತೋಟಿಗನು ಸಸಿಯನ್ನು ನೆಟ್ಟನೆಂದರೆ, ತಿರುಗಿ ಬೆಳೆದ ಕೊನೆಯನ್ನು ಕೊಯ್ಯಲು ಕತ್ತಿ ತೆಗೆದುಕೊಂಡೇ ಅವನು ಅತ್ತ ಹೊರಳುವದು. ಅದಕ್ಕೆ ಗೊಬ್ಬರವಾಗಲಿ ಉಳಿದಾವ ವಿಶೇಷ ಆರೈಕೆಯಾಗಲಿ ಬೇಕಾಗಿಲ್ಲ.

ಉಳಿದ ಬೆಳೆಗಳೊಡನೆ ತುಲನೆ ಮಾಡಿದರೆ ಕೆಲರಿ (Calorie) ಗಳ ಲೆಕ್ಕದಿಂದ ಬಾಳೆಯ ಬೆಳೆಯೇ ಸರ್ವಪ್ರಥಮವಾದುದು. ಸಾಮಾನ್ಯವಾಗಿ ಒಂದು ಎಕರೆ ಜಮೀನಿನಲ್ಲಿ ಬೆಳೆಯುವ ಬಾಳೆಯ ಕೆಲರಿಗಳು ೫೦,೦೦,೦೦೦ಕ್ಕಿಂತಲೂ ಮಿಕ್ಕಿರುತ್ತವೆ. ಇದರಲ್ಲಿ ಎರಡನೇ ನಂಬರ ಗೆಣಸಿನದು. ಅಷ್ಟೇ ನೆಲದಲ್ಲಿ ಉತ್ಪನ್ನವಾಗುವ ಗೆಣಸಿನಲ್ಲಿ ನಮಗೆ ೩೮,೮೦,೦೦೦ ಕೆಲರಿಗಳು ಸಿಗುತ್ತವೆ. ಅದೇ ಅಕ್ಕಿಯಲ್ಲಿ ೧೨,೮೦,೦೦೦ ಮತ್ತು ಗೋದಿಯಲ್ಲಿ ೧೨,೬೦,೦೦೦ ಮಾತ್ರ ದೊರೆಯುತ್ತದೆ. ಒಂದು ಎಕರೆ ಭೂಮಿಯಲ್ಲಿ ಉತ್ಪನ್ನವಾಗುವ ಬಾಳೆಯಲ್ಲಿ ಅಷ್ಟೇ ಜಾಗದಲ್ಲಿ ಬೆಳೆಯುವ ಅಕ್ಕಿ, ಗೋದಿ, ಬಟಾಟೆ, ಗೆಣಸು ಮೊದಲಾದವುಗಳಿಂದ ದೊರೆಯುವದಕ್ಕಿಂತ ಹೆಚ್ಚು ಪ್ರೊಟೀನ್ ಮತ್ತು ಕಾರ್ಬೋಹೈಡ್ರೇಟುಗಳು ದೊರೆಯುತ್ತವೆ. ಸರಿಯಾಗಿ ಬೆಳೆದರೆ ಒಂದು ಎಕರೆಯಲ್ಲಿ ಒಂದು ವರುಷಕ್ಕೆ ಸಾಮಾನ್ಯವಾಗಿ ೬೦,೦೦೦ ಪೌಂಡ ಬಾಳೆಯ ಹಣ್ಣು ಉತ್ಪನ್ನವಾಗುತ್ತದೆ.

ವೈವಿಧ್ಯ

ನಮ್ಮೀ ವಿಶಾಲ ದೇಶದಲ್ಲಿ ಒಂದೇ ವಸ್ತುವೂ ಹವಾಮಾನಕ್ಕೆ ತಕ್ಕಂತೆ ವಿಭಿನ್ನ ರೂಪ ಧಾರಣೆ ಮಾಡಿಕೊಂಡು ಕಂಗೊಳಿಸುವದೇನೂ ಅಚ್ಚರಿಯಲ್ಲ. ಆದರೆ ಬಾಳೆಯಲ್ಲಿ ತೋರುವ ವಿವಿಧತೆಯು ಬಹುತರ ಉಳಿದಾವ ವಸ್ತುವಿನಲ್ಲೂ ಕಂಡುಬರಲಿಕ್ಕಿಲ್ಲ. ಆಸಾಮದ "ಚಂಪಾ" ಜಾತಿಯ ಬಾಳೆಯು ಒಂದೂವರೆ ಇಂಚಿನಷ್ಟು ಚಿಕ್ಕದು! ಎಲ್ಲಾ ಜಾತಿಯ ಬಾಳೆಗಳೂ ಹಣ್ಣು ಮಾಡಿ ತಿನ್ನಲು ಬಾರವು. ಕೆಲವು ಕಾಯಿಯಿದ್ದಾಗಲೇ ಉಪಯೋಗಿಸಲ್ಪಡುವವು. ಮದ್ರಾಸದಲ್ಲಿ "ಪಾವನ" ಜಾತಿಯ ಬಾಳೆಯು ಹೆಸರಾದದ್ದಾದರೆ ಮಲಬಾರಿನ "ನೇಂದ್ರನ್" ಮತ್ತು ಬಂಗಾಲದ "ಸಾಬರಿ" ಜಾತಿಯ ಬಾಳೆಯು ಅದಕ್ಕೆ ಸರಿಜೋಡಿಯಾದದ್ದು. ಉತ್ತರ ಕನ್ನಡದಲ್ಲಿ "ರಸಬಾಳೆ" ಯು ರುಚಿಯಲ್ಲಿ ಉತ್ಕೃಷ್ಟವಾದುದಾದರೂ ಬಾಯಲ್ಲಿಟ್ಟವೆಂದರೆ ನೀರಾಗುವ "ನೀರು ಬಾಳೆ"ಯು ಅದಕ್ಕೆ ಹಿಂದೆ ಬೀಳಲಾರದು. ಇದಲ್ಲದೆ ಹಪ್ಪಳಕ್ಕೆ "ಕರಿಬಾಳೆ" ಪಲ್ಲೆಯಕ್ಕೆ "ಚಂದ್ರಬಾಳೆ" ಮೊದಲಾದ ನಿರ್ದಿಷ್ಟ ಜಾತಿಗಳು ನಿರ್ದಿಷ್ಟ ಉಪಯೋಗಕ್ಕೆ ಮೀಸಲಾಗಿವೆ.

ಸರ್ವೋಪಯೋಗಿ

"ಇದ್ದರೂ ಸಾವಿರ, ಬಿದ್ದರೂ ಸಾವಿರ" ಎಂದು ಆನೆಯ ಸಂಬಂಧವಾಗಿ ಜನರು ಹೇಳುವದುಂಟು. ಅದರಂತೆ ಬಾಳೆಯೂ. ಬಾಳೆ ಮರದ ಬುಡದಿಂದ ತುದಿಯ ವರೆಗಿನ ಯಾವದೊಂದು ಚಿಕ್ಕ ಭಾಗವೂ ವ್ಯರ್ಥವಾಗುವದಿಲ್ಲ. ಬಾಳೆಯ ಕಾಯಿ-ಹಣ್ಣುಗಳನ್ನು ಬಿಡಿ, ಬಾಳೆಯ ಎಲೆಯು ಊಟಕ್ಕೂ ದೊನ್ನೆ (ದ್ರೋಣ) ಕ್ಕೂ ಉಪಯೋಗವಾಗುವದಲ್ಲದೆ ತೋಟಿಗರು ಅದನ್ನು ತೋಟದಲ್ಲಿ ಕಳೆಯಾಗದಿರಲು ಬಣ್ಣವನ್ನು ಮುಚ್ಚಲಿಕ್ಕೂ ಬಡವರು ಗುಡಿಸಲನ್ನು ಹೊಚ್ಚಲಿಕ್ಕೂ ಉಪಯೋಗಿಸುವರು. ಇದಕ್ಕೂ ಮಿಕ್ಕಿದರೆ ಅದು ದನಗಳಿಗೆ ಮೇವೂ ಅಹುದು. ಇನ್ನು ಬಾಳೆಯ ಗೊನೆಯಿಂದ ಉದ್ದವಾಗಿ ಜೋತಾಡುವ ಕುಂಡಿಗೆಯೇನು ನಿರುಪಯೋಗಿಯೆಂದು ತಿಳಿದಿರುವಿರಾ? ನಿಶ್ಚಯವಾಗಿಯೂ ಇಲ್ಲ. ಅದನ್ನು ಸುಲಿದು ಅದರ ಒಳಗಿನ ತಿರುಳಿನಿಂದ ಮಾಡಿದ ಪಲ್ಲೆಯ ಸವಿಯನ್ನು ಏನೆಂದು ಹೇಳಲಿ! ಅದೇ ಸುಲಿದ ಸಿಪ್ಪೆಗಳನ್ನು ಒಂದೆರಡು ಕಬ್ಬಿಣದ ತುಂಡುಗಳೊಡನೆ ನೀರಿನಲ್ಲಿ ಹಾಕಿ ಬಿಸಿಲಿನಲ್ಲಿಡಿ. ಕೆಲವು ದಿನಗಳ ಮೇಲೆ ನೀವು ಅದನ್ನು ಪುನಃ ನೋಡಿದಾಗ ನಿಮಗಲ್ಲಿ ಕಪ್ಪಗಿನ ಮಸಿಯು ಕಂಡುಬರುವದು. ಇದನ್ನು ಮಸಿಗೆ ಬಳಿಯಲೂ, ಪಾಟಿ ಕಿರ್ದಿ ಬರೆಯಲೂ ಉಪಯೋಗಿಸುತ್ತಾರೆ. ತೋಟಿಗರು ಬಾಳೆಯ ಕಂಬವನ್ನು ಸುಲಿದು ಒಣಗಿಸಿ ಅಡಿಕೆಗೆ ಕೊಟ್ಟೆ ಕಟ್ಟಲು ಉಪಯೋಗಿಸಿದರೆ ಅದರ ಒಳಗೆ ಹೊರಡುವ "ದಿಂಡ"ನ್ನು ಬೇಯಿಸಿ ಊಟಕ್ಕೆ ಒಂದು ಒಳ್ಳೆಯ ಪದಾರ್ಥವನ್ನಾಗಿ ಉಪಯೋಗಿಸುತ್ತಾರೆ. ಇನ್ನು ಬಾಳೆಯ ಕಾಯಿಯನ್ನು ತೆಗೆದುಕೊಳ್ಳಿ. ಕಾಯಿಯನ್ನೂ ಹಣ್ಣು ಮಾಡದೇ ಅನೇಕ ವಿಧವಾಗಿ ಉಪಯೋಗಿಸಬಹುದು. ಬಾಳೆಕಾಯಿಯ ಹದದಿಂದ ಮಾಡಿದ ಪಲ್ಲೆಯು 'ಬಟಾಟೆ ಭಾಜಿ'ಗೆ ಸಾಟಿಯಲ್ಲ! ಕಾಯಿಯಿಂದ ಹಪ್ಪಳ. ಅಪರಾಹ್ನದ ಚಹಾದ ಜೊತೆಗೆ ನೀವು ಎಲ್ಲದಕ್ಕಿಂತ ಹೆಚ್ಚಿಗೆ ಮೆಚ್ಚುವದು ಬಾಳೆಯ "ಬಾಳ್ಕ" ವನ್ನೇ. ಬಡಬಗ್ಗರು ಬಾಳೆಕಾಯಿಯನ್ನು ಒಣಗಿಸಿ ಹಿಟ್ಟು ಮಾಡಿ ಉಪಯೋಗಿಸುವದುಂಟು. ಮತ್ತು ಅದರ ಸಿಪ್ಪೆಯ "ಗೊಜ್ಜು"ನ್ನೂ ಮಾಡುತ್ತಾರೆ. ಹಣ್ಣಿನದೂ ಮೆತ್ತಗೆ ಮೆಲ್ಲುವದರ ಹೊರತಾಗಿ "ಸೀಕರಣೆ" (ರಸಾಯನ) ಆದಿಗಾಗಿ ಉಪಯೋಗವಾಗುತ್ತದೆ. ಹಣ್ಣನ್ನು ಒಣಗಿಸಿ ಮಾಡಿದ "ಸುಕೇಳಿ"ಯು ಪ್ರವಾಸದಲ್ಲಿ ಬಹು ಒಳ್ಳೆಯದಾದ ಆಹಾರ ಮತ್ತು ಬೇನೆಗೆ ಬಿದ್ದು ಎದ್ದವನಿಗೆ "ಟಾನಿಕ".

ಬಾಳೆಯು ಸಾಮಾನ್ಯವಾಗಿ ಬೆಳೆದಲ್ಲೇ ಹೆಚ್ಚು ಖರ್ಚಾಗುತ್ತದೆ. ಬಾಳೆಯ ಹಣ್ಣನ್ನು ತಿನ್ನುವದರಲ್ಲಿ ಶೂರರು ಮದ್ರಾಸ ಪ್ರಾಂತದವರೇ. ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯು ವರ್ಷ ಒಂದಕ್ಕೆ ೫೧೬ ಪೌಂಡು ಬಾಳೆಯನ್ನು ಉಪಯೋಗಿಸುತ್ತಾನೆ. ಅದೇ ಬಂಗಾಲದಲ್ಲಿ ತಲೆಗೆ ೨೬ ಪೌಂಡಿನಂತೆ ಖರ್ಚಾಗುತ್ತದೆ. ಎಲ್ಲಕ್ಕಿಂತ ಕಡಿಮೆ ಸಂಯುಕ್ತ ಪ್ರಾಂತದಲ್ಲಿ. ಅಲ್ಲಿ ತಲೆಗೆ ಕೇವಲ ೧೩ ಪೌಂಡು ಮಾತ್ರ. ಇಷ್ಟು ದೊಡ್ಡ ಭೇದಕ್ಕೆ ಹವಾಮಾನದಷ್ಟೇ ವಾಹನ ಸೌಕರ್ಯದ ಅನಾನುಕೂಲತೆಯೂ ಕಾರಣ.

ನಮ್ಮ ದೇಶದಲ್ಲಿಂದು ಅನ್ನದ ಕೊರತೆ ಬಹಳವಾಗಿದೆ. ಬಂಗಾಲವನ್ನು ಪೂರೈಸಲು, ಔದ್ಯೋಗಿಕ ವಿಕಾಸಕ್ಕಾಗಿ ವೆಚ್ಚ ಮಾಡಬೇಕಾದ ಧನವನ್ನು ವೆಚ್ಚ ಮಾಡುವ ಪ್ರಸಂಗ ಸರಕಾರಕ್ಕೆ ಬಂದಿದೆ. ಕಳೆದ ೪-೬ ವರ್ಷಗಳಿಂದ ಸರಕಾರದ ಪತಿಯಿಂದ "ಹೆಚ್ಚಿಗೆ ಬೆಳೆಯಿರಿ" ಪ್ರಚಾರವು ಎಡೆಬಿಡದೆ ನಡೆದಿದ್ದರೂ ಹೇಳಿಕೊಳ್ಳುವ ಪ್ರಯೋಜನವೇನೂ ಕಂಡುಬರುತ್ತಿಲ್ಲ. ಈಗಂತೂ ನಮ್ಮ ಸರಕಾರವು ೧೯೫೧ ರೊಳಗಾಗಿ ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಲು ಕೃತನಿಶ್ಚಯಿಯಾಗಿದೆ. ಹೀಗಿರುವಾಗ ನಾವು ಧಾನ್ಯದವಸಗಳನ್ನು ಹೆಚ್ಚಾಗಿ ಬೆಳೆಯುವದರ ಜೊತೆಗೆ ಅವುಗಳಲ್ಲಿಯ ದ್ರವ್ಯಗಳನ್ನೊಳಗೊಂಡಿರುವ ಉಳಿದ ಆಹಾರ ಪದಾರ್ಥಗಳನ್ನೂ ಬೆಳೆಯುವದರತ್ತ ಗಮನ ಕೊಡಬೇಕು. ಇಂತಹ ಪದಾರ್ಥಗಳಲ್ಲಿ ಬಾಳೆ, ಗೆಣಸು, ಬಟಾಟೆ ಮೊದಲಾದವುಗಳು ಬರುತ್ತವೆ. ಮೇಲೆ ವಿವರಿಸಿದಂತೆ ಬಾಳೆಯು ಸುಲಭವಾಗಿ ಹೆಚ್ಚು ಪ್ರಮಾಣದಿಂದ ಬೆಳೆಯುತ್ತದೆ. ಬಾಳೆಯ ಬೆಲೆಯನ್ನು ನಾವು ಇನ್ನಾದರೂ ಅರಿಯಬೇಕು. ತೋಟಿಗರು ಬಾಳೆಯನ್ನು ಹೆಚ್ಚು ಬೆಳೆಯುವದರ ಜೊತೆಗೆ ಪಟ್ಟಣಿಗರೂ ತಮ್ಮ ನಿತ್ಯದ ಆಹಾರದಲ್ಲಿ ಬಾಳೆಯನ್ನೂ ಒಂದು ಅವಶ್ಯಕ ಅಂಗವಾಗಿ ತಿಳಿಯಬೇಕು. ಅದ್ದರಿಂದ ಜನರ ಆರೋಗ್ಯವೂ ಸುಧಾರಿಸುವದಲ್ಲದೆ ದೇಶದ ಆಹಾರ ತುಟಾಗ್ರತೆಯೂ ಕಡಿಮೆಯಾಗುವದು.

ಸ್ಟರ್ಲಿಂಗ್ ಶಿಲ್ಕುಗಳ ಮಾತುಕತೆ

ಬಿಡಿಸಬೇಕಾದ ಸಮಸ್ಯೆಗಳು

ಸ್ಟರ್ಲಿಂಗ್ ಶಿಲ್ಕಿನ ಪ್ರಶ್ನೆ ಈ ತಿಂಗಳ ಅಂತ್ಯದಲ್ಲಿ ಪುನಃ ಬ್ರಿಟನ್-ಭಾರತಗಳ ನಡುವೆ ರಭಸದ ಕಣ್ಣುಚ್ಚಾಲೆಯ ವಸ್ತುವಾಗಲಿದೆ. ಭಾರತದ ರಿಝರ್ವ ಬ್ಯಾಂಕಿನ ಗವರ್ನರರಾಗಿ ಈಚೆಗಿನ ವರೆಗೆ ಈ ದೇಶದ ಆರ್ಥಿಕ ಏರುತಗ್ಗುಗಳನ್ನು ಕಣ್ಣಿಟ್ಟು ನೋಡುತ್ತ ಬಂದಿದ್ದ ಸರ್ ಚಿಂತಾಮಣಿ ದೇಶಮುಖರು ಭಾರತದ ಪರವಾಗಿ ಈಗಾಗಲೆ ಬ್ರಿಟನ್ನಿಗೆ ಹೋಗಿ ಬ್ರಿಟಿಶ ಬೊಕ್ಕಸದ ಅಧಿಕಾರಿಗಳೊಡನೆ ಚರ್ಚೆಯನ್ನು ಪ್ರಾರಂಭಿಸಿದ್ದಾರೆ. ಅರ್ಥಮಂತ್ರಿ ಡಾ. ಜಾನ ಮತ್ತಾಯರೂ ಈ ಚರ್ಚೆಯಲ್ಲಿ ಭಾಗ ವಹಿಸಲು ಹೋಗುವವರಿದ್ದಾರೆ.

ಬದಲಾದ ಸ್ಥಿತಿ

ಭಾರತದ ಆರ್ಥಿಕ ಸ್ಥಿತಿಯ ಮೇಲೆ ಈ ಚರ್ಚೆಗಳ ಪರಿಣಾಮ ತೀವ್ರವಾಗಿ ಬೀಳಲಿರುವ ಕಾರಣ ಅದರಲ್ಲಡಕವಾದ ಸಮಸ್ಯೆಗಳನ್ನು ಅರಿತುಕೊಳ್ಳಲು ನಾವೆಲ್ಲರೂ ಪ್ರಯತ್ನಿಸಬೇಕು. ಕಳೆದ ವರ್ಷ ಆಗಿನ ಅರ್ಥಮಂತ್ರಿ ಸರ್ ಷಣ್ಮುಖಂ ಚೆಟ್ಟಿಯವರು ಮಾಡಿಕೊಂಡು ಬಂದ ಒಪ್ಪಂದದ ಬಗ್ಗೆ ಯಾರಿಗೂ ಅಷ್ಟು ಸಂತೋಷವಾಗಿರದಿದ್ದರೂ ಆ ಕಾಲದಲ್ಲಿ ನಮ್ಮ ಆರ್ಥಿಕ ದಿಗಂತ ಅಷ್ಟು ಕಪ್ಪಾಗಿ ಕಾಣುತಿದ್ದಿಲ್ಲವಾಗಿ ಅದರ ಬಗ್ಗೆ ಯಾರೂ ಹೆಚ್ಚು ಕೂಗೆಬ್ಬಿಸಿದ್ದಿಲ್ಲ. ಮೇಲಾಗಿ ಆಗ ಬ್ರಿಟನ್ನಿನ ಹಣಕಾಸಿನ ಸ್ಥಿತಿ ತುಂಬ ಕನಿಕರದ್ದಾಗಿತ್ತು. ಅದು ಆರ್ಥಿಕ ಮೃತ್ಯುವಿನ ವಿರುದ್ಧ ತುಟಿಬಿಗಿದು ಹೋರಾಡುತಿತ್ತು. ಆ ಸ್ಥಿತಿಯಲ್ಲಿ ಬ್ರಿಟನ್ನನ್ನು ತೀರ ಒತ್ತಾಯಕ್ಕೆ ಗುರಿಪಡಿಸುವದು ಬಿದ್ದವನನ್ನು ಒದ್ದಂತೆ ಎಂದು ಬಗೆಯಲಾಯಿತು. ಆದುದರಿಂದ ೧೯೪೮ ಜುಲೈ ೧ ಕ್ಕೆ, ನಮ್ಮ ನಂ ೧. ಅಂದರೆ ಚಾಲ್ತಿ ಲೆಕ್ಕದಲ್ಲಿ ಹಿಂದೆ ಉಪಯೋಗಿಸದೆ ಉಳಿದಿದ್ದ ೮ ಕೋಟಿ ಮತ್ತು ಮುಂದಿನ ಮೂರು ವರ್ಷಗಳ ಬಗ್ಗೆ ೮ ಕೋಟಿ ಹೀಗೆ ೧೬ ಕೋಟಿ ಪೌಂಡುಗಳು ಜಮಾ ಆಗುವಂತೆ ವ್ಯವಸ್ಥೆಯಾದದ್ದನ್ನು ನೋಡಿ ನಾವು ಸಮಾಧಾನಪಟ್ಟುಕೊಂಡಿದ್ದೆವು. ಆದರೆ ಇಂದು ಪರಿಸ್ಥಿತಿ ತದ್ವಿರುದ್ಧವಾಗಿದೆ. ಬ್ರಿಟಿಶ ಆರ್ಥಿಕ ಪುನರುಜ್ಜೀವನ ರಭಸದಿಂದಾಗಿದೆ. ನಾವು ಮಾತ್ರ ಹಲಬಗೆಯ ಆರ್ಥಿಕ ಸಂಕಟಗಳಿಗೊಳಗಾಗಿದ್ದೇವೆ. ಈ ವರ್ಷದಲ್ಲಿ ಹಳೆಯ ೮ ಕೋಟಿ ಪೌಂಡುಗಳನ್ನಲ್ಲದೆ ಹೊಸ ಲೆಕ್ಕದಲ್ಲಿ ಒಪ್ಪಂದಕ್ಕಿಂತ ೪.೨ ಕೋಟಿ ಪೌಂಡುಗಳನ್ನು ಹೆಚ್ಚಾಗಿ ತೆಗೆದುಕೊಂಡುಬಿಟ್ಟಿದ್ದೇವೆ. ಹೀಗೆ ೧೯೫೧ ರ ವರೆಗೆ ೩ ವರ್ಷಗಳಲ್ಲಿ ನಮಗೆ ಕೊಡಲಿದ್ದ ಹಣದಲ್ಲಿ ಮುಕ್ಕಾಲಂಶಕ್ಕಿಂತಲೂ ಹೆಚ್ಚಿಗೆ ಒಂದೇ ವರ್ಷದಲ್ಲಿ ತೆಗೆದುಕೊಂಡುಬಿಟ್ಟಿದ್ದಲ್ಲದೆ, ಇನ್ನೂ ನಮಗೆ ಹೆಚ್ಚು ಹಣ ಬೇಕಾಗಿದೆ.

ವಿದೇಶ ವ್ಯಾಪಾರದ ಪ್ರತಿಕೂಲ ಶಿಲ್ಕು

ಭಾರತದ ವಿಭಜನೆಯಿಂದ ನಮ್ಮ ವಿದೇಶ ವ್ಯಾಪಾರದ ಮೇಲೆ ಎಣಿಸಿದ್ದಕ್ಕಿಂತ ಹೆಚ್ಚು ಘೋರ ಪರಿಣಾಮವಾಗಿದೆಯೆಂದು ನಾವು ಇದೀಗ ಒಪ್ಪಿಕೊಳ್ಳಲೇಬೇಕಾಗಿದೆ. ಆಹಾರದ ಉಳಿತಾಯದ ಪ್ರದೇಶಗಳು ಪಾಕಿಸ್ತಾನದಲ್ಲಿ ಉಳಿದುಹೋಗಿ ನಮ್ಮ ಆಹಾರ ಕೊರತೆಯನ್ನು ನೀಗಿಸಿಕೊಳ್ಳಲು ತರಿಸಬೇಕಾದ ಆಹಾರದ ಪರಿಮಾಣ ಹೆಚ್ಚಾದುದರಿಂದ ಸ್ಥಿತಿ ಇನ್ನೂ ಬಿಗಿಯಾಗಿದೆ. ಸಾಲದ್ದಕ್ಕೆ ಹತ್ತಿ ಮತ್ತು ಸಣಬು ಬೆಳೆಯುವ ಪ್ರದೇಶಗಳೂ ಪಾಕಿಸ್ತಾನಕ್ಕೇ ಸೇರಿರುವದರಿಂದ ಆ ಬಗ್ಗೆ ವರ್ಷಕ್ಕೆ ೧೦೦-೧೨೦ ಕೋಟಿ ರೂಪಾಯಿ ಪಾಕಿಸ್ತಾನಕ್ಕೆ ತೆರುತಿದ್ದೇವೆ. ಹೊರಗಿನಿಂದ ತರಿಸಿದ ಆಹಾರ ಮತ್ತು ಈ ಸರಕೆಲ್ಲ ಸೇರಿ ನಮಗೆ ೧೯೪೮-೪೯ ರಲ್ಲಿ ವಿದೇಶ ವ್ಯಾಪಾರದಲ್ಲಿ ೧೬೦ ಕೋಟಿ ರೂಪಾಯಿಗಳ ಕೊರತೆ ಬಿದ್ದಿದೆ; ಅಂದರೆ ನಮ್ಮ ನಿರ್ಯಾತದ ಮೊತ್ತಕ್ಕಿಂತ ಆಯಾತದ ಮೊತ್ತ ಅಷ್ಟು ಮಟ್ಟಿಗೆ ಹೆಚ್ಚಾಗಿದೆಯೆಂದು ಬಲ್ಲವರು ಲೆಕ್ಕ ಹಾಕಿದ್ದಾರೆ. ಮಾತ್ರವಲ್ಲ, ನಮ್ಮ ಆಹಾರ ಪರಿಸ್ಥಿತಿ ಸುಧಾರಿಸುವ ವರೆಗೆ ಈ ಕೊರತೆ ಇನ್ನಷ್ಟು ಹೆಚ್ಚಿಕೊಂಡು ನಮ್ಮನ್ನು ಭಯಂಕರ ಗಂಡಾಂತರದಲ್ಲಿ ನೂಕಿಬಿಡಬಹುದು.

ಬ್ರಿಟನ್ನಿನ ಹೊಣೆ

ಈ ರೀತಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸಿದ ವಿಭಜನೆಗೆ ಬ್ರಿಟಿಶ ಸರಕಾರವೇ ಹೊಣೆಯೆಂಬ ಮಾತನ್ನು ಅದು ಕೂಡ ಅಲ್ಲಗಳೆಯಲಾರದು. ಅದರಿಂದ ನಮ್ಮನ್ನು ಈ ಬಿಕ್ಕಟ್ಟಿನಿಂದ ಪಾರುಮಾಡಲು ನೆರವು ನೀಡುವ ನೈತಿಕ ಹೊಣೆಯೂ ಅದರ ಮೇಲಿದೆ. ಮೇಲಾಗಿ, ಬ್ರಿಟನ್ನು ಬಿಕ್ಕಟ್ಟಿನಲ್ಲಿದ್ದಾಗ ನಾವು ಆಯಾತದ ಮೇಲೆ ಬಿಗಿಯಾದ ನಿಯಂತ್ರಣವನ್ನು ಹಾಕಿದ್ದರೆ ಈ ರೀತಿ ನಮ್ಮ ಲೆಕ್ಕದಲ್ಲಿದ್ದ ಶಿಲ್ಕು ಕರಗುತಿದ್ದಿಲ್ಲ. ಆದರೆ ಹಾಗೆ ಮಾಡಿದ್ದರೆ ಬ್ರಿಟಿಶ ನಿರ್ಯಾತ ಪ್ರಯತ್ನಕ್ಕೆ ಧಕ್ಕೆ ತಗಲುತಿತ್ತು. ಹಾಗಾಗಗೊಡಬಾರದೆಂದು ಬ್ರಿಟಿಶ ಸರಕಾರ ಅಪೇಕ್ಷಿಸಿದ್ದರಿಂದ

— ೧೧ ನೆಯ ಪುಟಕ್ಕೆ

ವಿಚಾರದ್ವಂದ್ವ

ಈ ತಲೆಕಟ್ಟಿನ ಕೆಳಗೆ ಜನಾಭಿಪ್ರಾಯವನ್ನು ವಾರವಾರವೂ ಪ್ರಕಟಿಸಬೇಕೆಂದಿದ್ದೇವೆ. ಕೇವಲ ಸ್ಥಾನಿಕ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

★

ಮಂತ್ರಿಮಂಡಲದಲ್ಲಿ ಬಿಕ್ಕಟ್ಟು

ಇಂದೀಗ ಭಾರತದ ಹಲವಾರು ಪ್ರಾಂತೀಯ ಮಂತ್ರಿಮಂಡಲಗಳಲ್ಲಿ ಬಿಕ್ಕಟ್ಟು ತೋರಿಬಂದಿರುತ್ತದೆ. ಇದರಿಂದ ಜನತೆಗೆ ತುಂಬಾ ನಷ್ಟವಾಗಿದೆ. ನಮ್ಮ ಮಂತ್ರಿಗಳು ಹಾಗೂ ಸರಕಾರವು ಮಾಡುವ ದೇಶಸೇವಾ ಕಾರ್ಯವು ಈ ಕಲಹ ಕಚ್ಚಾಟಗಳದೆಸೆಯಿಂದ ತೀರಾ ಕುಂಠಿತವಾಗಿದೆ. ಇಂತಹ ಬಿಕ್ಕಟ್ಟಿನ ನಿವಾರಣೋಪಾಯಕ್ಕಾಗಿ ವರಿಷ್ಠರು ತಲೆತುರಿಸುತ್ತಿದ್ದಾರೆ, ಈ ಬಿಕ್ಕಟ್ಟಿನ ವಿಷಯದಲ್ಲಿ ಹಲವರು ಹಲವು ತರದ ಅಭಿಪ್ರಾಯ ಕೊಡುತ್ತಿದ್ದಾರೆ. ಒಂದು ಕಡೆಯಿಂದ ಆಡಳಿತೆಯ ದೃಷ್ಟಿಯಿಂದ ಮಿಲಿಟರಿ ಕ್ಷೇತ್ರಕ್ಕನುಗುಣವಾಗಿ ಭಾರತವನ್ನು ನಾಲ್ಕು ಐದು ಭಾಗಗಳಾಗಿವಿಂಗಡಿಸಿಅಖಿಲ ಭಾರತವನ್ನು ಒಂದೇ ಸರಕಾರದ, ಒಂದೇ ಮಂತ್ರಿಮಂಡಲದ ಕೈಕೆಳಗೆ ತಂದರೆ ಈ ಬಿಕ್ಕಟ್ಟು ಹೋಗಬಹುದೆಂಬ ಏಕತಂತ್ರ ಸರಕಾರದ ಅಭಿಪ್ರಾಯ ಕೊಡುತ್ತಿದ್ದಾರೆ ಕೆಲವರು. ಪ್ರಾಂತೀಯ ಮಂತ್ರಿಮಂಡಲವನ್ನು ರಚಿಸುವಾಗ ಪ್ರಾಂತೀಯ ಮುಖ್ಯಮಂತ್ರಿ ಸ್ವತಂತ್ರವಾಗಿ ಅಲ್ಲ, ಗವರ್ನರರ ಸೂಚನೆಯ ಮೇರೆಗೆ ತನ್ನಮಂತ್ರಿಮಂಡಲ ರಚಿಸಬೇಕೆಂದು ಘಟನಾಸಮಿತಿಯು ಅಭಿಪ್ರಾಯಪಟ್ಟಿದೆ. ಆದರೆ ಇವುಗಳೆಂದೆಲ್ಲಾ ಗುಣಕ್ಕಿಂತ ಹೆಚ್ಚು ದೋಷಗಳೇ ಸಂಭವಿಸಬಹುದೆಂದು ನನ್ನ ಮತ. ನಾವು ದೋಷವನ್ನು ತೆಗೆದೊಗೆಯಬೇಕಾದರೆ ಅದರ ಮೂಲ ಕಾರಣವಾವುದು ಎಂದು ನೋಡಿ ಆ ಕಾರಣವನ್ನು ತೆಗೆಯಬೇಕು. ನಾನನ್ನುವುದಾದರೆ ಈಗಿನ ಪ್ರಾಂತೀಯ ಮುಖ್ಯಮಂತ್ರಿಗಳನ್ನು ಚುನಾವಣೆ ಮಾಡುವ ಕ್ರಮವೇ ಸರಿಯಲ್ಲ. ಆ ಕ್ರಮವೇ ಇಂತಹ ಬಿಕ್ಕಟ್ಟಿಗೆ ಕಾರಣ. ಈಗ ಮತದಾರರಲ್ಲಿ ಅರ್ಧಾಂಶಕ್ಕಿಂತ ಹೆಚ್ಚಿನವರ ಮತ ಪಡೆದವನು ಚುನಾವಣೆಯಲ್ಲಿ ಜಯಿಸುತ್ತಾನೆ. "ಅ" ಮತ್ತು "ಬ" ಗಳು ಉಮೇದ್ವಾರರು; ೨೦೦ ಮಂದಿ ಮತದಾರರು ಎಂದಿಗಲಿ. ಈಗ ೧೦೧ ಮತ ಸಿಕ್ಕಿ "ಅ" ನು ಮುಖ್ಯ ಮಂತ್ರಿಯಾಗುತ್ತಾನೆ. "ಬ" ಗೆ ೯೯ ಮತಗಳು. ಇದರಿಂದ ಏನು ಅರ್ಥವಾಗುದೆಂದರೆ "ಬ"ನು ಕೂಡಾ "ಅ"ಗೆಸಾಧಾರಣ ಸಮಾನ. ಆದರೆ ಚುನಾವಣೆಯಲ್ಲಿ "ಬ" ನು ಸಂಪೂರ್ಣ ಸೋಲುತ್ತಾನೆ. ಈಗ "ಅ" ಗೆ "ಬ" ಗಿಂತ ಎರಡೇ ಮತ ಹೆಚ್ಚು. ಇದರಿಂದ ಈ ಎರಡು ಜನರು "ಬ" ನ ಪಕ್ಷ ಹಿಡಿದರೆಂದಾದರೆ ಅನಂತರ "ಅ" ನ ಪಕ್ಷದಲ್ಲಿ ೯೯ ಜನರಾಗುತ್ತಾರೆ. ಆಗ ಏನಾದರೂ ನೆವ ಹೂಡಿ ಅವಿಶ್ವಾಸ ಠರಾವು ಪಾಸುಮಾಡಿದರೆ "ಅ" ನ ಮಂತ್ರಿಮಂಡಲ ಬೀಳುತ್ತದೆ; ಚುನಾವಣೆ ನಡೆದು ೧೦೧ ಮತ ಪಡೆದು "ಬ" ನು ಮುಖ್ಯ ಮಂತ್ರಿಯಾಗುತ್ತಾನೆ. ಈ ರೀತಿ ಈಗಿನ ಕ್ರಮದಲ್ಲಿ ಮುಖ್ಯಮಂತ್ರಿಗಳ ನಿರ್ಣಯವು ಯಾರಾದರೂ ಒಬ್ಬಿಬ್ಬರ ಮೇಲೆಯೇ ಹೊಂದಿಕೊಳ್ಳುವ ಸಂದರ್ಭವೂ ಬರುತ್ತದೆ. ಈ ಪರಿಸ್ಥಿತಿಯಲ್ಲಿ ಒಬ್ಬನು ಮುಖ್ಯಮಂತ್ರಿಯಾದರೂ ಅವನಿಗೆ ಯಾವಾಗ ತನ್ನ ಮಂತ್ರಿಮಂಡಲ ಉರುಳಿ ಬೀಳುವುದೋ ಎಂಬ ಹೆದರಿಕೆಯು ಇದ್ದೇ ಇರುತ್ತದೆ. ಅವನು ನೀರ ಮೇಲಿನ ಎಲೆಯಂತೆ ಅಲ್ಲಾಡುತ್ತಿರುತ್ತಾನೆ. ತನ್ನ ಜನರು ತನ್ನ ಪಕ್ಷದಿಂದ ಜಾರಿಹೋಗದಂತೆ ಬೇಕಾದ ಉಪಾಯ ಹೂಡುತ್ತಾ ಅವರಿಗೆ "ಖಾಶಿ ಕುಡಿಸು"ತ್ತಾ ಇರಬೇಕಾಗುತ್ತದೆ. ಮುಖ್ಯಮಂತ್ರಿಯಾದ ಅವನಿಗೆ ತನ್ನ ಪ್ರಾಂತದತ್ತ ನೋಡಲಿಕ್ಕಾದರೂ ವೇಳೆಯುದೆಯೇ? ಸ್ಪರ್ಧೆಯಲ್ಲಿ ಸೋತವನು ಬರೇ ಎರಡು ಮತಕ್ಕೆ ಸೋತಿದ್ದಾನೆ. ಇದರಿಂದ ಅವನ ಆಸೆ ಇನ್ನೂ ಹೆಚ್ಚಾಗುತ್ತದೆ; ಹೇಗೂ ಮಾಡಿ ತನ್ನ ಹಿರಿಮೆಯನ್ನುಪ್ರಕಟಿಸಿ ಎರಡು ಮತ ಹೆಚ್ಚು ಪಡೆಯುವ ತಯಾರಿ ಮಾಡುತ್ತಾನೆ. ಹೀಗೆ ಕಚ್ಚಾಟಗಳು ಪ್ರಾರಂಭವಾಗುತ್ತವೆ. ಭಾರತದ ಎಲ್ಲಾ ಮಂತ್ರಿಮಂಡಲಗಳೂ ಈ ಪರಿಸ್ಥಿತಿಗೆ ಮುಟ್ಟದರೆ! ....

ಅದಕ್ಕೊಂದುಪಾಯವಿದೆ. ಮುಖ್ಯಮಂತ್ರಿಯಾಗತಕ್ಕವನು ಒಟ್ಟು ೨/೩ ಅಂಶ ಮತ ಪಡೆಯಬೇಕು ಎಂದು ನಿರ್ಣಯ ಮಾಡುವುದು. ಆಗ ಗೆದ್ದವನಿಗೆ ವಿರೋಧಿಗಳು ಕಡಿಮೆಯಿದ್ದು ಅವನು ನಿರ್ಭಯನಾಗುತ್ತಾನೆ; ಮಾತ್ರವಲ್ಲ ಸೋತವನು ಗೆದ್ದವನಿಗಿಂತ ಬಹಳ ಕೆಳಗಿರುತ್ತಾನೆ. ಇದರಿಂದ ಅವನು "ಅದು ಹುಳಿಯಾದ ಹಣ್ಣು, ನನಗೆ ಬೇಡ" ಎಂದು ನಿರಾಶೆಹೊಂದಿದ ನರಿಯಂತೆ ಹಿಂದಿರುಗುತ್ತಾನೆ; ಯಾವ ಕಚ್ಚಾಟಕ್ಕೂ ತೊಡಗುವುದಿಲ್ಲ. ಸಂದರ್ಭನುಸಾರ ೨/೩ ಅಂಶ ಮತ ಯಾರಿಗೂ ಸಿಕ್ಕದಾದರೆ ಅರ್ಧ ಅಂಶಕ್ಕಿಂತ ಹೆಚ್ಚು ಮತ ಸಿಕ್ಕಬೇಕು; ಅಷ್ಟು ಸಿಕ್ಕದ ಸಂದರ್ಭದಲ್ಲಿ ಹೆಚ್ಚು ಮತ ಸಿಕ್ಕಿದವನೇ ಮುಖ್ಯ ಮಂತ್ರಿಯಾಗಬೇಕು; ಅಲ್ಲವಾದರೆ ಕೇಂದ್ರ ಸರಕಾರವೇ ಈ ಮುಖ್ಯಮಂತ್ರಿಯನ್ನು ಚುನಾಯಿಸಬೇಕು. ಹೀಗೆ ಮಾಡಿದರೆ ನಮ್ಮ ಮಂತ್ರಿಮಂಡಲಗಳು ಶಾಶ್ವತವಾಗಿ ನಿಲ್ಲಬಲ್ಲುವು.

ಅಡ್ಕನಡ್ಕ "ಮರಕ್ಕಿಣಿ"
ತಾ।। ೧೩—೬—೪೯

(ಶ್ರೀ "ಮರಕ್ಕಿಣಿ"ಯವರ ಸೂಚನೆಯ ಕೊನೆಯಭಾಗ ಮೊದಲ ಭಾಗವನ್ನು ವ್ಯಾಘಾತಿಸುತ್ತದೆ. ಅಧಿಕಾರಾರೂಢ ಪಕ್ಷದಲ್ಲಿ ಮುಂದಾಳಿನ ಆಯ್ಕೆ ತೀರ ಇಕ್ಕಟ್ಟಿನ ಬಹುಮತದಿಂದಾದರೆ ಬಿಕ್ಕಟ್ಟುಗಳೊದಗುವ ಸಂಭವ ಹೆಚ್ಚೆಂಬದು ನಿಜ. ಆದರೆ ೨/೩ ಅಂಶ ಬಹುಮತ ದೊರೆಯದಿದ್ದಲ್ಲಿ ಅವರು ಹೇಳಿದ ವಿಕಲ್ಪೋಪಾಯಗಳಿಂದ ಪುನಃ ಯಥಾಸ್ಥಿತಿಯೆ ಉಳಿದೀತು. ಅಧಿಕಾರಸ್ಥ ಪಕ್ಷದ ಮುಂದಾಳಿನ ಆಯ್ಕೆಗೆ ಕಾಲಾವಧಿಯನ್ನು ಹಾಕುವದರಿಂದ ಕೆಲಮಟ್ಟಿಗೆ ಪರಿಸ್ಥಿತಿ ಸುಧಾರಿಸಬಹುದೆಂದು ತೋರುತ್ತದೆ—ಸಂ.)

× × ×

ಉಂಚಳ್ಳಿಯ ಜೋಗ

ಕಾರವಾರ ಜಿಲ್ಹೆಯ ಸಿದ್ದಾಪುರ ತಾಲೂಕಿನಲ್ಲಿ ಉಂಚಳ್ಳಿ ಎಂಬದೊಂದು ಊರು ಇದೆ. ಈ ಊರಿಂದ ಎರಡು ಮೈಲು ಅಂತರದ ಮೇಲೆ ಅಘನಾಶಿನೀ ನದಿಯಿಂದುಂಟಾದ ಧಬಧಬೆ ಇರುತ್ತದೆ. ಇದಕ್ಕೆ ಉಂಚಳ್ಳಿಯ ಜೋಗ ಎನ್ನುವರು. ಜಗತ್ತಿನ ಅತಿ ರಮಣೀಯವಾದ ಸ್ಥಳಗಳಲ್ಲಿ ಇದು ಒಂದು. ಇದರಲ್ಲಿ ಅನೇಕ ಸಣ್ಣ ಸಣ್ಣ ತಡಸಲುಗಳುಂಟು. ಎಲ್ಲಕ್ಕೂ ದೊಡ್ಡದೆಂದರೆ ನಾನೂರಾ ಐವತ್ತು ಫೂಟು ಎತ್ತರದಿಂದ ಆಧಾರ ತಪ್ಪಿ ಕೆಳಗೆ ಬೀಳುತ್ತದೆ. ಇದರ ಕೊಳ್ಳದಲ್ಲಿ ಎಲ್ಲಿ ನೋಡಿದರೂ ಶಿಲಾಮಯ. ಎರಡೂ ದಂಡೆಗಳಲ್ಲಿಯ ಅಡವಿಯನ್ನು ನೋಡಿದರೆ ಎಂಥ ಕಲ್ಲೆದೆಯ ಮನುಷ್ಯನಿಗಾದರೂ ಭಯಾಶ್ಚರ್ಯಗಳೆರಡೂ ಏಕಕಾಲಕ್ಕೆ ಉಂಟಾಗದಿರದು. ಈ ನೀರು ಬಿದ್ದು ಮಣ್ಣು ಕಲ್ಲುಗಳನ್ನು ಕೊರೆದು ಉಂಟಾದ ಮಡುವಿನಲ್ಲಿಯ ನೀರು ಕೆಂಪು, ಹಸಿರು, ಹಳದಿ, ನೀಲಿ ಮುಂತಾದ ತರತರದ ಬಣ್ಣಗಳಿಂದ ಶೋಭಿಸುವದೆಂದರೆ ಓದುಗರು ನಂಬಲಿಕ್ಕಿಲ್ಲ. ಆದರೆ ಒಮ್ಮೆ ಬಂದು ಇದನ್ನು ನೋಡಿದರೆ ಎಲ್ಲವೂ ಮನದಟ್ಟಾಗುವದು.

ಇದಲ್ಲದೆ ಇಲ್ಲಿ ಬಂಗಾರ, ಕಬ್ಬಿಣ, ಕಲ್ಲಿದ್ದಲಿ ಮ್ಯಾಂಗನೀಜ, ಮೊದಲಾದವುಗಳ ಖನಿಗಳೂ ಇರುವವೆಂದು ಈಗೆರಡು ವರ್ಷಗಳ ಹಿಂದೆ ಸರಕಾರದವರು ಮಾಡಿದ ಇಲ್ಲಿಯ ಕಲ್ಲುಮಣ್ಣುಗಳ ತಪಾಸಿನಿಂದ ತಿಳಿದಿರುತ್ತದೆ. ಮುಂಬೈಯ ಪ್ರಸಿದ್ಧ ಕಾರ್ಯಕರ್ತರಾದ ಕಾಕಾ ಕಾಲೇಲಕರರೂ ಈ ಜಲಪಾತವನ್ನು ಸಂದರ್ಶಿಸಿ ಬಾಯ್ತುಂಬ ಹೊಗಳಿದರು. ಈಗ ಕೆಲವು ವರ್ಷಗಳ ಹಿಂದೆ ಟಾಟಾ ಕಂಪನಿಯವರು ಇದನ್ನು ತಮಗೆ ಬಿಟ್ಟುಕೊಡಬೇಕೆಂದು ಸರಕಾರಕ್ಕೆ ಕೇಳಿದ್ದುಂಟು. ಇಷ್ಟೊಂದು ಖನಿಜ ಸಂಪತ್ತಿನಿಂದಲೂ ಸೃಷ್ಟಿಸೌಕರ್ಯದಿಂದಲೂ ಮೆರೆಯುವ ಈ ಸ್ಥಳಕ್ಕೆ ಹೋಗಲಿಕ್ಕೆ ಒಂದು ರಸ್ತೆಯಿಲ್ಲ, ವಾಹನಸೌಕರ್ಯವಿಲ್ಲ. ಉಂಚಳ್ಳಿಯಿಂದ ೨ ಮೈಲು ಅಡವಿಯಲ್ಲಿ ಕಾಲುದಾರಿಯಲ್ಲಿ ಹೋಗಬೇಕಾಗುವದು. ಈ ಸ್ಥಳವನ್ನು ನೋಡುವವರು ಸಿರ್ಸಿಯಿಂದ ೧೦ ಮೈಲುಗಳ ಮೇಲೆ ಕುಮಟಾ ರಸ್ತೆಯಲ್ಲಿರುವ ಹಾನವಂಸಿಯಲ್ಲಿ ಅಡ್ಡರಸ್ತೆಹಿಡಿದು ಮುಂದೆ ೧೪ ಮೈಲು ಅಂದರೆ ಉಂಚಳ್ಳಿಯವರೆಗೆ ಸ್ಯಾಕಲ ಅಥವಾ ಎತ್ತಿನ ಗಾಡಿಯ ಮೇಲೆ ಹೋಗಬಹುದು. ಮುಂದೆ ೨ ಮೈಲು ಕಾಲು ನಡಿಗೆಯಿಂದ ದಟ್ಟವಾದ ಅಡವಿಯಲ್ಲಿ ಕ್ರೂರ ಪಶುಗಳ ಕಾಟವನ್ನು ತಪ್ಪಿಸಿಕೊಂಡು ಹೋಗುವದೆಂದರೆ ಸಾಮಾನ್ಯ ಕೆಲಸವಲ್ಲ. ಎಂಥ ಗಟ್ಟಿಗರಿಗಾದರೂ ಭಯವಾಗದಿರದು.

ಇದನ್ನು ನೋಡಲಿಕ್ಕೆ ಪ್ರತಿವರ್ಷ ಸಾವಿರಗಟ್ಟಲೆ ಜನರು ದೂರದೂರಗಳಿಂದ ಬಂದು ಹೋಗುವರು. ಆದರೆ ಈ ಸ್ಥಳವು ಹೀಗೆ ಕಾಡು ಸ್ಥಿತಿಯಲ್ಲಿರುವದು ನಮ್ಮ, ಅಲ್ಲ, ಇಡೀ ಕಾರವಾರ ಜಿಲ್ಹೆಯ ದೌರ್ಭಾಗ್ಯವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಅದಲ್ಲದೆ ಇದರ ಸುತ್ತು ಮುತ್ತಲಿನ ನೂರಿನ್ನೂರು ಊರುಗಳ ಪರಿಸ್ಥಿತಿಯು ಅವರ್ಣನೀಯವಾಗಿದೆ. ಇವರ ಕೊಡುಕೊಳ್ಳುವ ಯಾವತ್ತೂ ವ್ಯವಹಾರವೆಲ್ಲ ಸಿರ್ಸಿಯಿಂದಲೇ. ಸಿರ್ಸಿಗೆ ಹೋಗುವ ರಸ್ತೆಯಲ್ಲಿ ಎಷ್ಟೋ ಹಳ್ಳಗಳು ಹತ್ತುತ್ತವೆ. ಅವುಗಳಲ್ಲಿ ಎಲ್ಲಕ್ಕೂ ದೊಡ್ಡದೆಂದರೆ ರೇವಣಕಟ್ಟೆಹಳ್ಳ. ಒಂದೆರಡು ದಿನ ಮಳೆಬಿತ್ತೆಂದರೆ ತೀರಿತು. ಈ ಹಳ್ಳದಲ್ಲಿ ನೀರು ಏರಿ ಓಡಾಟವು ಕಟ್ಟಾಗುವದು. ಈಗ ಈಊರುಗಳಿಂದ ಸಿರ್ಸಿಗೆ ಗಾಡಿಯಬಾಡಿಗೆ ೧ ಚೀಲಕ್ಕೆ ೫ ರೂಪಾಯಿ ಇರುತ್ತದೆ. ಮಳೆಗಾಲದಲ್ಲಿ ಇಲ್ಲಿಯ ಜನರು ಅಂದಮಾನದ್ವೀಪದಲ್ಲಿಯ ಕೈದಿಗಳಂತೆ ಕಾಲವನ್ನು ಕಳೆಯಬೇಕಾಗುವದು. ಸಿದ್ದಾಪುರ ದಾರಿಯಲ್ಲಿ ಮಾಣೀ ಹೊಳೆ, ಕುಮಟಾರಸ್ತೆಯಲ್ಲಿ ದೋಣಿಹೊಳೆ, ಸಿರ್ಸಿ ರಸ್ತೆಯಲ್ಲಿ ರೇವಣಕಟ್ಟೆಹೊಳೆ, ಹೀಗೆ ಎತ್ತ ನೋಡಿದರೂ ಹೊಳೆಗಳುಂಟು. ಇಲ್ಲಿ ವಾಹನಸೌಕರ್ಯವಿಲ್ಲ. ದವಾಖಾನೆಯಿಲ್ಲ, ವ್ಯವಸ್ಥೆಯಿಂದ ಕಲಿಸುವ ಶಾಲೆಗಳಿಲ್ಲ. (ಇಲ್ಲಿ ನಾಲ್ಕು ಆರು ಮೈಲುಗಳಿಗೊಂದು ಶಾಲೆ ಇರುವದು. ಇವುಗಳಲ್ಲಿ ಕನ್ನಡ ನಾಲ್ಕನೇ ಇಯತ್ತೆಯ ವರೆಗೆ ಮಾತ್ರ ಕಲಿಸುತ್ತಾರೆ.) ಇಲ್ಲಿಯ ಜನರ ದುರ್ಗತಿಯನ್ನು ಕಂಡು ಮರುಗದ ಮನುಜನಾರು? ಇದು ಅಡವಿಯ ಪ್ರದೇಶವೆಂದು ಮೊದಲೇ ಹೇಳಿದ್ದೇನೆ. ಅದರಲ್ಲಿಯೂ ವನ್ಯ ಪ್ರಾಣಿಗಳ ಕಾಟ. ಇವುಗಳಿಂದ ಇಲ್ಲಿಯ ಬೆಳೆಗಳ ಬಹಳಷ್ಟು ಭಾಗ ಹಾಳಾಗುವದು. ಬೆಳೆಯು ಸರಿಯಾಗಿ ಬಾರದು. ಆದರೆ ಆಯುಷ್ಯ ತೀರಿದ ಮನುಷ್ಯನ ಸಂಗಡ ದೋಣಿಯನ್ನು ಹತ್ತಿದರೆ ಆಯುಷ್ಯವುಳ್ಳವನೂ ನೀರಿನಲ್ಲಿ ಮುಳುಗುವಂತೆ ಬಹಳ ಬೆಳೆ ಬೆಳೆಸುವ ಪ್ರದೇಶದಂತೆ ಇಲ್ಲಿಯೂ ಒತ್ತಾಯದ ಲೆವೀ ವಸೂಲು ಮಾಡಹತ್ತಿದ್ದಾರೆ. ಇಲ್ಲಿಯ ಜನರಿಗೆ ಇನ್ನೂ ಸರಿಯಾಗಿ ಸೀದಾ ಕೊಡದ್ದರಿಂದ ಎಷ್ಟೋ ಬಡ ಜನರು ಗಾಬರಿಯಾಗಿದ್ದಾರೆ. ಆದರೆ ಇನ್ನಾದರೂ ಸರಕಾರವು ಈ ಹಳ್ಳಿಗಳ ಕುಂದು ಕೊರತೆಗಳನ್ನು (ಹೊಳೆಯ ಸೇತು, ರಸ್ತೆ, ಶಾಲೆ, ವಾಹನಸೌಕರ್ಯ, ಅಹಾರ ಧಾನ್ಯ) ಹೋಗಲಾಡಿಸಿ ಇವರನ್ನು ಉದ್ಧರಿಸುವದಾಗಿ ಆಶಿಸುತ್ತೇನೆ.

— ನಾರಾಯಣ ರಾಮಚಂದ್ರ ಭಟ್ಟ
ಉಂಚಳ್ಳಿಚಾರ

ರೀಡರರ ನಿಯಮನ

ಧಾರವಾಡದ ಕನ್ನಡಸಂಶೋಧನ ಸಂಸ್ಥೆಯಲ್ಲೀಗ ಸಮಾಜಶಾಸ್ತ್ರ ಭಾಷಾಶಾಸ್ತ್ರ ಭೂಗರ್ಭಶಾಸ್ತ್ರ ಮತ್ತು ಸಾಹಿತ್ಯ ಇವುಗಳ ಬಗ್ಗೆ ನಾಲ್ಕು ಜನ "ರೀಡರ" ರನ್ನು ನಿಯಮಿಸುವವರಿದ್ದಾರೆಂದು ಕೇಳುತ್ತೇನೆ. ಸ್ವತಂತ್ರ ಹಿಂದುಸ್ತಾನವು ತನ್ನ ಪ್ರಾಚೀನ ಜ್ಞಾನಗಾಂಭೀರ್ಯದಿಂದ ಪುನಃ ತಲೆಯೆತ್ತಿ ಜಗತ್ತಿನಲ್ಲಿ ಮಾನ್ಯತೆಯನ್ನು ಪಡೆಯಬೇಕಾದ ಈ ಕಾಲದಲ್ಲಿ ದಲಿತತ್ವ, ಸ್ತ್ರೀತ್ವ, ಸುಲಭಲಬ್ಧ ಪದವೀಧರತ್ವ ಇವುಗಳ ಮೇಲಿಂದ ಅನುಭವವಿಲ್ಲದ, ಕಾರ್ಯದಲ್ಲಿ ತಮ್ಮ ಯೋಗ್ಯತೆಯನ್ನು ಸಿದ್ಧಮಾಡಿ ತೋರಿಸದ ಅಲ್ಪಜ್ಞರನ್ನು ನಿಯಮಿಸುವುದು ಪ್ರಜೆಗಳು ಸರಕಾರಕ್ಕೆ ಕೊಟ್ಟ ಕರವನ್ನು ದುರುಪಯೋಗಮಾಡಿದಂತೆಯೇ ಸೈ. ಯೋಗ್ಯತಾಸಂಪಾದನೆಗೆ ಸಮಾನವಕಾಶ ಅಥವಾ ವಿಶೇಷ ಸೌಕರ್ಯಗಳನ್ನು ಹಿಂದೆ ಬಿದ್ದವರೆಂದುಕೊಳ್ಳುವ ಅಲ್ಪಸಂಸ್ಕೃತವರ್ಗದವರಿಗೆ ಕೊಡುವುದು ತಾತ್ಕಾಲಿಕವಾಗಿಯುಕ್ತವೆನಿಸಬಹುದಾದರೂ ಜನರ, ಪ್ರಸ್ತುತ ವಿದ್ಯಾರ್ಥಿಗಳ, ಜಿಜ್ಞಾಸುಗಳ ಮಾರ್ಗದರ್ಶನದ ಹೊಣೆಯಿರುವ "ರೀಡರ" ರ ಕೆಲಸದಲ್ಲಿ ನಿಯುಕ್ತರಾಗತಕ್ಕವರು ಆಯಾ ವಿಷಯಗಳಲ್ಲಿ ಲಬ್ಧಪ್ರತಿಷ್ಠ ಪ್ರಾಜ್ಞರೂ ಹಿಂದುಸ್ತಾನದ ಪ್ರಾಚೀನ ಮತ್ತು ಅರ್ವಾಚೀನ ವಾಙ್ಮಯದ ಗರಡಿಯಲ್ಲಿ ನುರಿತವರೂ ಆಗಿದ್ದರೆ ಮಾತ್ರ ಸಾರ್ಥಕವಾದೀತು. ಯೋಗ್ಯತೆಯನ್ನು ಮುಂದೆ ಸಂಪಾದಿಸಿಕೊಂಡಾರೆಂಬ ಪ್ರತ್ಯಾಶೆಯಿಂದ ಸದ್ಯಃ ಅಂಥ ಹೊಣೆಯುಳ್ಳ ಸ್ಥಳಗಳಿಗೆ ಕೇವಲ ಡಿಗ್ರಿ, ಸರ್ಟಿಫಿಕೇಟುಗಳ(ಅವೀಗ ಬಹಳ ಅಗ್ಗವಾಗ ಹತ್ತಿರುವುದರಿಂದ) ಮತ್ತು ಎಳಮೆಯ ಆಧಾರದ ಮೇಲೆ ಈಗ ತಾನೇ ಕಾಲೇಜಿನಿಂದ ಹೊರಬಿದ್ದ ಅನನುಭವಿಗಳನ್ನುನಿಯಮಿಸಬಾರದೆಂದು ಸಂಬಂಧಪಟ್ಟನಿಯೋಜಕರಿಗೆ ನನ್ನ ನಮ್ರ ವಿನಂತಿ.

ಹುಬ್ಬಳ್ಳಿ, —ಸಾಹಿತ್ಯಸೇವಕ
೨೦-೬-೪೯

ಕಟಮಯ ಕಥೆ

ರಿಗೆ ಆಶ್ರಯವಿತ್ತ ಪರಂಪರೆ

ನ ಸುಪ್ರಸಿದ್ಧ
ಲಾಸೆಯಿಂದ
ಅಲ್ಲಲ್ಲಿ ವಸತಿ
ಮೊದಲಾದ
ವ್ಯಾಪಾರಿ
ಂದ್ರನಗರದಲ್ಲಿ
ವೇ ಕಾರಣ
ಮೊದಲಾದ
ರೋಪಿಯನ್
ದೊರೆತಷ್ಟೇ
ಫ್ರೆಂಚರಿಗೂ
ತು; ಮತ್ತು
ಂದು ಕೋಟೆ
ಆರ್ಲಿ
ರಲ್ಲಿ
ತ ಫ್ರೆಂಚ
ಅದರ ೧೧ಲ
ಇತಿಹಾಸದಲ್ಲಿ
ದೊರೆ
ಡ್ಯೂಪ್ಲೆಯ
ಆಗ ಅದು
ಪ್ರಿಯವನ್ನು
ವಾಗಿ ರೂಪು
ಗಳೂ ಅಲ್ಲಿ
ವು. ೭೨ ಹಡ
ಪಲಕುಗಳನ್ನು
ಒಯ್ಯಲು
ಆದರೆ ಡ್ಯೂಪ್ಲೆ
ಸಿದ ನಂತರ,
ಸಿಕೊಡಗಿತು.
ಪಾರಿಧರ್ಮ
ಯನ್ ರಾಷ್ಟ್ರ
ಗರದ ಕ್ಷೀಣ
ಅಸ್ತ್ರಕ್ಕೆ
ಲ್ಪ ಪೂರ್ವ
ಬ್ರಿಟಿಶ
ಚಂದ್ರ
ಫ್ರೆಂಚರೂ
ಬಲಪಡಿಸ
ರಾಜದ್ದೌಲನು
ಗಮನ
ವನ್ನು ಹಣಿದು
ಕ್ರಮಿಸಿದನು;
ದ್ರವ್ಯವನ್ನೂ
ತ್ತಿ ಸುಲಿಗೆ
ಫ್ರೆಂಚರಿಗೂ
ಭವಾಯಿತು.
ಸ್ಥಾನದಲ್ಲಿದ್ದ
ಕಲಕತ್ತೆಯ
ಪ್ಪಂದ ಮಾಡಿ
ಸಿರಾಜುದ್ದೌ
ಲು ಆತುರ
ಫ್ರೆಂಚರು
ರಲು
ವನು
ಅದನ್ನು
ಸಂರಕ್ಷಕ
ಕಲಕತ್ತೆಗೆ
ನ್ನು ಸುಲಿಗೆ
ಪೌಂಡು
ಅಪಹರಿಸಿ

ಮುಂದೆ ೧೭೮೩ ರಲ್ಲಿ ಪ್ಯಾರಿಸಿನಲ್ಲಾದ ಒಪ್ಪಂದದಂತೆ ಚಂದ್ರನಗರ ತಿರುಗಿ ಫ್ರೆಂಚರಿಗೆ ಒಪ್ಪಿಸಲ್ಪಟ್ಟಿತು. ಅಷ್ಟರಲ್ಲಿ ಪ್ಲಾಸಿ ಕದನದಿಂದ ಬಂಗಾಲದ ನವಾಬನ ಇತಿಶ್ರೀಯಾಗಿತ್ತು. ಆದರೂ ಚಂದ್ರನಗರದಲ್ಲಿ ಸಾಮರಿಕ ಸನ್ನಾಹಗಳಾಗದಂತೆ ಬ್ರಿಟಿಶರು ಅದರ ಸುತ್ತ ಇದ್ದ ಕಂದಕವನ್ನು ಮುಚ್ಚಿಸಿದ ನಂತರವೇ ಅದನ್ನು ತಿರುಗಿಕೊಟ್ಟರು.

೧೭೯೩ ರಲ್ಲಿ ಯುರೋಪಿನಲ್ಲಿ ಪುನಃ ಯುದ್ಧ ಪ್ರಾರಂಭವಾದಾಗ ತಿರುಗಿ ಬ್ರಿಟಿಶರು ಚಂದ್ರನಗರವನ್ನು ಮುತ್ತಿದರು. ಗವರ್ನರನು ತಲೆತಪ್ಪಿಸಿಕೊಂಡು ಓಡಿಹೋದನು. ಅವನ ಸಹಾಯಕನು ನಗರವನ್ನು ಶರಣಾಗತಿಯನ್ನೊಪ್ಪಿಸಿದನು. ೧೮೦೨ ರಲ್ಲಿ ಪುನಃ ಅದು ಫ್ರೆಂಚರಿಗೆ ಒಪ್ಪಿಸಲ್ಪಟ್ಟಿತು.

"ಭೋಟೀ ಕ್ರಾಂತಿ"

ಫ್ರೆಂಚ ಕ್ರಾಂತಿಯ ಕಾಲಕ್ಕೆ ನಡೆದ ಘಟನೆಗಳು ಚಂದ್ರನಗರದ ಇತಿಹಾಸದಲ್ಲಿ ದಲ್ಲಿ ಅತ್ಯಂತ ಸ್ವಾರಸ್ಯದ ಅಧ್ಯಾಯಿಕೆಯಾಗಿವೆ. ಫ್ರಾನ್ಸಿನಲ್ಲಿ ಕ್ರಾಂತಿಯಾದೊಡನೆ ಚಂದ್ರನಗರದಲ್ಲಿ ಅದರ ತತ್ಪ್ರತಿಯಾಗಿ "ಭೋಟೀ ಕ್ರಾಂತಿ"ಯಾಯಿತು! ಫ್ರೆಂಚ ವಸತಿಗಾರರು ಗೊಂದಲ ಹಾಕಿದರು; ಗವರ್ನರನು ಓಡಿಹೋದನು. ಅವನನ್ನು ಹೆಡಮುರಿಗೆ ಬಿಗಿದು ನಗರಕ್ಕೆ ತಂದು ವರ್ಸೇಲಿ ಮೆರವಣಿಗೆಯಂಥದೇ ಒಂದು ಮೆರವಣಿಗೆ ತೆಗೆದುದಾಯಿತು. ಆ ಮೇಲೆ ಅವನನ್ನು ಫ್ರೆಂಚ್ ಅರಸುಮನೆತನದವರನ್ನು ಮಾಡಿದಂತೆ, ಫ್ರಾನ್ಸ್ ದ್ವೀಪಕ್ಕೆ ನಿರ್ವಾಸಿತನನ್ನಾಗಿ ಕಳಿಸಲಾಯಿತು. ಆದರೆ ಕಲಕತ್ತೆಯನ್ನು ದಾಟುವ ಮೊದಲೇ ಬ್ರಿಟಿಶ ಗವರ್ನರ ಜನರಲ್ ಕಾರ್ನವಾಲೀಸನು ಅವನನ್ನು ಬಿಡುಗಡೆ ಮಾಡಿಸಿದನು.

೧೮೦೩ ರಲ್ಲಿ ಪುನಃ ಅದು ಬ್ರಿಟಿಶರ ವಶವಾಗಿ ೧೮೧೪ ರಲ್ಲಿ ತಿರುಗಿ ಕೊಡಲ್ಪಟ್ಟರೂ ಮುಂದೆ ಸ್ವಲ್ಪ ಕಾಲದಲ್ಲೇ ನೆಪೋಲಿಯನ್ನನ ಯುದ್ಧ ಪ್ರಾರಂಭವಾದಾಗ ಮತ್ತೆ ಕಸಿದುಕೊಳ್ಳಲ್ಪಟ್ಟಿತು. ನೆಪೋಲಿಯನ್ನನು ದ್ವೀಪಾಂತರಕ್ಕೆ ಕಳಿಸಲ್ಪಟ್ಟ ಮೇಲೆ ೧೮೧೬ ರಲ್ಲಿ ಮತ್ತೆ ಫ್ರೆಂಚರ ವಶವಾದ ಚಂದ್ರನಗರ ಈಗಿನ ವರೆಗೂ ಅವರ ಕೈಯಲ್ಲಿ ಇದೆ.

ಬ್ರಿಟಿಶರ ಕೃಪೆಯಿಂದಲೇ ಬಾಳು

ಚಂದ್ರನಗರದ ಸಮೀಪದಲ್ಲಿಯೇ ವಸತಿ ಮಾಡಿಕೊಂಡಿದ್ದ ಡಚ್ಚರೂ ಡೇನರೂ ಇದೇ ಬಗೆಯಾದ ಸಂಕಟಗಳಿಗೆ ಗುರಿಯಾಗಿ ಕೊನೆಗೆ ಅಲ್ಲಿಂದ ಪೂರ್ತಿ ಕಾಲುಕಿತ್ತರು. ಚಂದ್ರನಗರದಲ್ಲಿ ಫ್ರೆಂಚರು ಮಾತ್ರ ಉಳಿದರು. ಅವರು ಅದನ್ನು ಶಾಂತವಾದ ಫ್ರೆಂಚ ವಸಾಹತಾಗಿ ರೂಪಿಸಿದರು. ಬ್ರಿಟಿಶರ ದಯೆಯಿಂದಲೇ ಅವರು ಅಲ್ಲಿ ಉಳಿದು, ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಕೊಂಡಿದ್ದರು.

ಭಾರತದ ಸ್ವಾತಂತ್ರ್ಯ ಚಳವಳಿ ಬಂಗಾಲದಲ್ಲಿ ಕ್ರಾಂತಿಕಾರಿ ರೂಪದಲ್ಲಿ ಪ್ರಕಟವಾದಾಗ ಅನೇಕ ಕ್ರಾಂತಿನಾಯಕರು ಚಂದ್ರನಗರವನ್ನು ಆಶ್ರಯಿಸಲೆಳಸಿದರು. ಅರವಿಂದ ಘೋಷ, ರಾಸಬಿಹಾರಿ ಬಸು ಮೊದಲಾದವರು ಅಲ್ಲಿ ಶರಣು ಪಡೆಯಲು ಪ್ರಯತ್ನಿಸಿದ್ದರೂ ಬ್ರಿಟಿಶರ ಒತ್ತಾಯದ ಮುಂದೆ ಫ್ರೆಂಚರದೇನೂ ನಡೆಯದುದರಿಂದ ಶಾಶ್ವತವಾಗಿ ಅಲ್ಲಿ ಕ್ರಾಂತಿಕಾರರಿಗೆ ಆಶ್ರಯ ದೊರೆಯದಾಯಿತು. ಚಿಟಗಾಂಗ ಒಳಸಂಚಿನಲ್ಲಿ ಸೇರಿದ ಕ್ರಾಂತಿಕಾರರು ಕೆಲವರು ಅಲ್ಲಿ ಆಶ್ರಯ ಪಡೆದಾಗ ಬ್ರಿಟಿಶ ಪೋಲೀಸ ಕಮೀಶನರನು ಫ್ರೆಂಚರನ್ನು ಲೆಕ್ಕಿಸದೆ ಅಲ್ಲಿ ಪ್ರವೇಶಿಸಿ ಕ್ರಾಂತಿಕಾರರನ್ನು ಹುಡುಕಿ ಕೊಂಡೊಯ್ದನು. ಆದರೂ ಈ ಮಹಾ ದೇಶಭಕ್ತರಿಗೆ ಕೆಲಕಾಲವಾದರೂ ಆಶ್ರಯವಿತ್ತುದಕ್ಕೆ ಚಂದ್ರನಗರ ಹೆಮ್ಮೆಪಡುತಿದೆ.

ಭಾರತದಿಂದ ಬ್ರಿಟಿಶರು ಕಾಲ್ದೆಗೆದ ಮೇಲೆ ಚಂದ್ರನಗರ ನಾಗರಿಕರ ಒಂದು ದೊಡ್ಡ ಸಮೂಹವು ಹೋಗಿ ಸರಕಾರಿ ಭವನವನ್ನು ಮುತ್ತಿ "ಸ್ವಾತಂತ್ರ್ಯ" ವನ್ನು ಬೇಡಿತು. ಪಶ್ಚಿಮ ಬಂಗಾಲದ ಆಗಿನ ಮಂತ್ರಿಗಳ ಮಧ್ಯಸ್ಥಿಕೆಯ ನಂತರ ನಗರವನ್ನು ಫ್ರೆಂಚ ಆಡಳಿತವಲ್ಲಿ 'ಸ್ವತಂತ್ರ' ನಗರವೆಂದು ಸಾರಲಾಯಿತು. ಶ್ರೀ ದೇವೇಂದ್ರ ದಾಸರು ಆಡಳಿತದ ಮುಖ್ಯರಾಗಿ ಆರಿಸಲ್ಪಟ್ಟರು. ಈಗ ಅವರ ಕಾಂಗ್ರೆಸ್ ಕರ್ಮ ಪರಿಷತ್ತಿನ ಒತ್ತಾಯದ ಮೇಲೆಯೆ ಜನಮತಗಣನೆಯಾಗಿದ್ದು ನಗರವನ್ನು ತಮ್ಮ ವಶದಲ್ಲಿಟ್ಟುಕೊಳ್ಳಲು ಫ್ರೆಂಚರು ತೋರಿಸಿದ ನಾನಾ ಆಮಿಷಗಳನ್ನು ತಿರಸ್ಕರಿಸಿ ಚಂದ್ರನಗರವು ಮಾತೃಭೂಮಿಯಲ್ಲಿ ಸೇರಲು ನಿರ್ಧರಿಸಿದೆ.

ಮೂಲೆ ಮೂಲೆಗಳಿಂದ

ಫ್ರೆಂಚರ ಉಪನಿವೇಶವಾಗಿರುವ ಚಂದ್ರನಗರವು ಫ್ರೆಂಚರ ಅಧೀನದಲ್ಲಿ ಉಳಿಯಬೇಕೋ ಬೇಡವೋ ಎಂಬ ಬಗ್ಗೆ ನಡೆದ ಮತಗಣನೆಯಲ್ಲಿ [illegible] ಜನರು ಮತದಾನ ಮಾಡಿದರು. ಅವರಲ್ಲಿ ಕೇವಲ [illegible] ಮತಗಳು ಮೊದಲಿನ ವಿಕಲ್ಪಕ್ಕೂ [illegible] ಮತಗಳು ಎರಡನೆಯ ವಿಕಲ್ಪಕ್ಕೂ ಅನುಕೂಲವಾಗಿವೆ; [illegible] ಮತಪತ್ರಗಳು ರದ್ದಾಗಿವೆ. ಹೀಗೆ ಬಹುಮತದಿಂದ ಚಂದ್ರನಗರ ಹಿಂದುಸ್ಥಾನದ ಒಕ್ಕೂಟಕ್ಕೆ ಸೇರಲು ನಿಶ್ಚಯಿಸಿದ್ದನ್ನು ಮುಖ್ಯ ಮಂತ್ರಿ ಪಂ. ಜವಾಹರಲಾಲರಿಗೆ ತಂತಿಯಿಂದ ತಿಳಿಸಲಾಗಿದೆ.

ಬ್ರಿಟಿಶ್ ಸಂರಕ್ಷಣ ಮಂತ್ರಿಗಳಾದ ಅಲೆಗ್ಸಾಂಡರರು ಹಾಂಕಾಂಗಿನಿಂದ ಮರಳಿ ಬಂದಂದಿನಿಂದ ಬ್ರಿಟಿಶ್ ಸರಕಾರವು ಹಾಂಕಾಂಗಿನ ಸಂರಕ್ಷಣೆಯ ಪ್ರಶ್ನೆಯನ್ನು ವಿಚಾರಿಸುತ್ತಿದೆ. ಪ್ಯಾರಿಸ್ಸಿನಲ್ಲಿ ಬೆವಿನ್ನರು ಅಮೇರಿಕದ ವಿದೇಶಮಂತ್ರಿ ಅಚೆಸನ್ನರನ್ನು ಕಂಡು ಕಮ್ಯುನಿಸ್ಟರು ಹಾಂಕಾಂಗಿನ ಮೇಲೆ ದಾಳಿ ಮಾಡಿದರೆ ಅಮೇರಿಕ ಯಾವ ರೀತಿಯಿಂದ ಸಹಾಯ ಮಾಡಬಹುದೆಂಬುದರ ಬಗ್ಗೆ ಕೇಳಿರುವುದಾಗಿ ತಿಳಿದುಬಂದಿದೆ. ಲಂಡನ್ ವಾಶಿಂಗ್‌ಟನ್ನುಗಳಲ್ಲಿ ನಡೆದ ಪತ್ರವ್ಯವಹಾರದಿಂದ ಅಮೇರಿಕದ ಧೋರಣವೇನೆಂಬುದು ಖಂಡಿತವಾಗಿ ಹೊರಬಿದ್ದಿಲ್ಲ.

ಪಾಕಿಸ್ತಾನದ ವಿಮಾನವು ಜೂನ್ ೧೨ ರಲ್ಲಿ ಗಡಿದಾಟಿ ಅಫಗಾನಿಸ್ತಾನದಲ್ಲಿ ಹಾರಿ ಬಂದು ಬಾಂಬು ಹಾಕಿದ್ದರ ಸಂಬಂಧವಾಗಿ ಅಫಗಾನಿಸ್ತಾನದ ವಿದೇಶ ಖಾತೆಯು ಕಾಬೂಲಿನಲ್ಲಿರುವ ಪಾಕಿಸ್ತಾನೀ ರಾಯಭಾರಿಗೆ ಉಗ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾನೆ. ಅಫಗಾನಿನ ಕೆಂಕಣ ಹಳ್ಳಿಗಳ ಕಡೆಗೆ ಹಾರುತ್ತ ನಡೆದಾಗ ವಿಮಾನದ ಮೇಲೆ ಗುಂಡು ಹಾರಿಸಲಾಯಿತೆಂದು ಅಫಗಾನ್ ವಾರ್ತಾ ಸಂಸ್ಥೆ ವರದಿ ಮಾಡಿದೆ.

[illegible]

ಜೆಕೊಸ್ಲೋವೇಕಿಯದ [illegible]

ಬ್ರಿಟೀ ಸೈನಿಕ [illegible]

ಇರಾನೀ ದೊರೆ [illegible]

ಬ್ರಿಟನ್ನಿನ [illegible]

ದಕ್ಷಿಣ ಆಫ್ರಿಕೆದ [illegible]

ಪಶ್ಚಿಮ [illegible]

ಮೊದಲನೆಯ ಕುಟುಂಬ ಚಿತ್ರ: ರಾಜಕುಮಾರಿ ಎಲಿಜಬೆತ್, ಅವಳ ಗಂಡ ಡ್ಯೂಕ್ ಆಫ್ ಎಡಿನ್‌ಬರ್ಗ್ ಮತ್ತು ರಾಜಕುಮಾರ ಚಾರ್ಲ್ಸ್ ಬಕಿಂಗ್‌ಹ್ಯಾಂ ಅರಮನೆಯಲ್ಲಿ.

ಉಪರಂಗ

ಶ ಹೀ ದ್

...ಹೀದ್" ಫಿಲ್ಮಿಸ್ತಾನದವರಿಂದ ತಯಾರಿ ...೯೪೨ ನೆಯ ರಾಜಕೀಯ ಅಂದೋ ...ನ್ನು ಚಿತ್ರಿಸಲು ಪ್ರಯತ್ನಿಸಿದ ಚಲ ...ರಾಮ ಈ ಚಿತ್ರದ ನಾಯಕ; ...ದಿನವಲ್ಲಿಯೇ ಜವಾಹರನಾಗುವ ಇಚ್ಛೆ ...ತೋರ್ಪಡಿಸುತ್ತಾನೆ. ಅವನ ಗೆಳೆಯ ...ದ ಪೋಲೀಸ ಅಧಿಕಾರಿಯಾಗುವ ...ಶ್ರೆಯನ್ನು ತೋರ್ಪಡಿಸುತ್ತಾನೆ. ಗೆಳತಿ ...ತ ರಾಮನು ಜವಾಹರನಾದರೆ ತಾನು ...ಳಾಗುವದಾಗಿ ಹೇಳುತ್ತಾಳೆ. ಚಿಕ್ಕಂದಿನ ಈ ಆಶೆ ಆಕಾಂಕ್ಷೆಗಳಲ್ಲಿ ರಾಮ ಮತ್ತು ...ದನ ಅತ್ಯುತ್ತರಗಳು ಫಲಿಸುತ್ತವೆ. ...ಗೆ ಆ ಸೌಭಾಗ್ಯ ದೊರೆಯಬಹುದಾದ ...ಸಿದಲ್ಲಿಯೇ ದೈವದ ದುರ್ವಿಪಾಕದಿಂದ ...ಂದು ಘಟನೆಯಿಂದ ಬಾಳು ಬೇರೆ ದಾರಿ ...ಹಿಡಿಯುತ್ತದೆ.

...ಮನ ತಂದೆ ದ್ವಾರಕಾದಾಸರು ರಾವಬಹಾ... ಬಿರುದಾಂಕಿತರು; ತಾವು ದೆಪ್ಯೂಟಿ ...ದಿತ್ತು. ಅವನ ಪಾದಧೂಳಿಯನ್ನು ತೆಗೆದು ಕೊಂಡು ಮರುದಿನ ಮನೆಗೆ ಬರುವಷ್ಟರಲ್ಲಿ ವಿನೋದ ಅವಳನ್ನು ಹಂಗಿಸುವನು. ಗುಂಡು ದೊರೆತ ಬೆದರಿಕೆಯಿಂದಲೂ ಶೀಲಳು ವಿನೋದ ನನ್ನು ಮದುವೆಯಾಗಲು ಒಪ್ಪುವದಿಲ್ಲ. ಬಂಧಿತನಾದ ಅಣ್ಣ ಗೋಪಾಲನು ಮರಣ ದಂಡನೆಗೆ ಗುರಿಯಾಗುವದನ್ನು ತಪ್ಪಿಸಲು ಅನಿವಾರ್ಯವಾಗಿ ವಿನೋದನೊಡನೆ ವಿವಾಹ ವಾಗಲು ಸಮ್ಮತಿಸುವಳು. ಪರಿಣಾಮವಾಗಿ ಬಿಡುಗಡೆ ಹೊಂದಿದ ಅಣ್ಣ ಗೋಪಾಲನು ತಂಗಿಯ ವರ್ತನೆಯು ನಾಚಿಗೆಗೇಡಾದದ್ದೆಂದು ಹೇಳಿ ಹೊರಟು ಹೋಗುವನು. ಶೀಲಳಿಗೆ ಅತೀವ ವೇದನೆಯಾಗುವದು.

ಮನೆಯಿಂದ ಹೊರಬಿದ್ದ ರಾಮನು, ಶೀಲ ಳಿಂದ ಬೀಳ್ಕೊಂಡವನಾಗಿ ಸ್ವಾಮೀಜಿಯ ನೇತೃತ್ವದಲ್ಲಿ ಅಂದೋಲನದ ನಾಯಕನಾಗು ವನು. ಮಧ್ಯೆ-ಮಧ್ಯೆ ಶೀಲಳಿಗೆ ಭೆಟ್ಟಿಯಾಗು ತ್ತಿರುವನು. ತೀರ ಮೊದಲನೆಯ ಸಲ

...ರ್ಕ್ಕೆ ಫಿಲಮ್ಸಿನವರ "ಪತಂಗ" ದಲ್ಲಿ ಶ್ಯಾಮ್ ಮತ್ತು ನಿಗರ್. ನಾಯಿಕೆಯನ್ನು ಒಲಿಸಿ ...ವ ಪ್ರೇಮಮಂತ್ರವನ್ನು ನಾಯಕ ಕಿವಿಯಲ್ಲಿ ಊದುತ್ತಿದ್ದಾನೆ !

...ನರಬಿದ್ದು ತಮ್ಮ ಮಗನು ರಾಜಕೀಯ ...ರುವದು ಅವರಿಗೆ ಸರಿಬೀಳುವದಿಲ್ಲ. ತಂದೆ ...ಚ್ಛೆಯ ವಿರುದ್ಧವಾಗಿ ರಾಮನು ತರುಣರ ...ನ್ನು ಕಟ್ಟಿಕೊಂಡು ಉಗಿಬಂಡಿಯ ...ಯಲ್ಲಿ ತೊಡಗಿದಾಗ ಕೈಗೆ ಗುಂಡಿನ ...ವಾಗುವದು. ಅದೇ ಗಾಡಿಯಲ್ಲಿ ಪ್ರವಾಸ ...ತ್ತಿದ್ದ ಶೀಲಳ ನೆರವಿನಿಂದ ರಾಮನು ...ಗುವನು. ಅದರೆ ಶೀಲಳು ಚಿಕ್ಕಂದಿನ ...ಟದ ಅನಂತರ ಬಹುದಿನಗಳ ಮೇಲೆ ...ದುದರಿಂದ ಅವನಿಗೆ ಅವಳ ...ತು. ಸಿಕ್ಕಲಿಲ್ಲ.

...ಘಟನೆ ಜರುಗಿದ ಮರುದಿನ ಶೀಲ, ತಂದೆ, ವಿನೋದ ಮತ್ತು ಅವನ ತಂದೆ ದ್ವಾರಕಾದಾಸರ ಸ್ನೇಹಿತರೆಲ್ಲರೂ ಅವರ ...ಬರುವರು. ರಾಮನ ತಾಯಿಗೆ ಗುಂಡಿ ...ಂದ ಗಾಯಗೊಂಡ ರಾಮನನ್ನು ಅವ ...ಗೆ ಹೇಗೆ ತರುವದೆಂದು, ದುಃಖವಾಗು ...ಗ ಡಾಕ್ಟರ ಪದವಿಯನ್ನು ಗಳಿಸಿದ ... ಉಪಾಯಾಂತರದಿಂದ ರಾಮನ ...ಯನ್ನು ಪ್ರವೇಶಿಸಿ ಅವನನ್ನು ಒಪ್ಪಿಸಿ ...ನ್ ಪಾದಿಗುಂಡನ್ನು ಹೊರಗೆ ತೆಗೆ ...ನು. ಅಷ್ಟರಲ್ಲಿ ಅತಿಥಿಗಳೆಲ್ಲರೂ ಅವನ ...ನ್ನು ಪ್ರವೇಶಿಸಿ ಮಾತನಾಡಿಸ ...ಸುವನು. ವಿನೋದ ಪೋಲಿಸ್ ಅಧಿ ...ನಾದುದರಿಂದ ಅಪರೇಶನ್ನಿನಿಂದ ಹೊರಗೆ ...ಗುಂಡಿನ ಕಡೆಗೆ ಸಹಜವಾಗಿ ಅವನ ...ಹೋಗಿ ಅದನ್ನು ತೆಗೆದುಕೊಳ್ಳುವನು. ...ಘಟನೆಯಿಂದ ರಾಮನು ಮನೆಯನ್ನು ...ಬೇಕಾಗುವದು; ಶೀಲಳ ಮನೆಗೆ ...ಗುವನು. ವಿನೋದನ, ತಂದೆ ವಿನೋದ ...ಶೀಲ ಇವರ ಮದುವೆಗೆ ಬರಲು ...ತ್ರ ಬರಿತ್ತಾದರಿಂದ ಅಪರೇಶನ್ನಿನ ...ದಲ್ಲಿ ಶೀಲಳ ತ್ತ ವಾಗ್ದಾನವನ್ನು ... ಮಾಡಿದೆಂದು ರಾಮ ಅಲ್ಲಿಂದ ...ಬಿಡುವನು. ಶೀಲಳು ಅವನನ್ನು ...ತೋಟಕ್ಕೆ ಕರೆತಂದು ಅಲ್ಲಿ ಉಪಚರಿಸಿ ...ನ್ನೇ ಮದುವೆಯಾಗುವದಾಗಿ ವಚನ

ಗೋಪಾಲನಿಂದ ವಿವಾಹದ ಸಂಗತಿಯನ್ನು ಅರಿತ ರಾಮನು ವಿನೋದನ ಕೊಲೆಗಾಗಿ ಧಾವಿಸಿದಾಗ ಶೀಲಳ ಪತಿಯೆಂಬ ಕರುಣೆ ಯಿಂದ ಹಾಗೆಯೇ ಮರಳುತ್ತಿರುವಾಗ, ಅವನ ವಾಸಸ್ಥಳದ ಗುಪ್ತ ಪತ್ರೆ ವಿನೋದನಿಗೆ ದೊರಕುವದು. ವಿನೋದನು ಇದರ ಲಾಭ ಪಡೆದು ಅವರ ಗುಪ್ತಸ್ಥಳದ ಮೇಲೆ ದಾಳಿ ಮಾಡುವನು. ಆದರೆ- ಸಿಕ್ಕಿಬಿದ್ದು, ರಾಮನ ಕೃಪೆಯಿಂದ ಪಾರಾಗುವನು. ವಿನೋದ ಇದರ ದುರ್ಲಾಭ ಪಡೆದು ಗೋಪಾಲ ಮತ್ತು ಸ್ವಾಮೀಜಿಯನ್ನು ಬಂಧಿಸುವನು. ಅವರ ಬಿಡುಗಡೆಗಾಗಿ ರಾಮ ಶೀಲಳನ್ನು ವಿವಾಹದ ನಂತರ ಮೊದಲನೆಯ ಸಲ ಭೆಟ್ಟಿಯಾಗಿ ಅವಳ ವರ್ತನೆಯನ್ನು ಟೀಕಿಸಿ ಇವರೀರ್ವರ ಬಿಡು ಗಡೆಗೆ ಪ್ರಯತ್ನಿಸಬೇಕೆಂದು ಕೇಳಿಕೊಳ್ಳು ವನು.

ಸ್ವಾಮೀಜಿ ಮತ್ತು ಗೋಪಾಲರ ಬಿಡುಗಡೆ ಯಾಗುವದು. ಆದರೆ ಶೀಲಳೊಡನೆ ಪ್ರೇಮಾ ಲಾಪಗಳಲ್ಲಿ ತೊಡಗಿದ ರಾಮನು ವಿನೋದನ ಕೈಯಲ್ಲಿ ಸಿಕ್ಕಿ ಬೀಳುವನು. ಗಾಡಿಯ ಲೂಟಿಯ ಅರೋಪಕ್ಕಾಗಿ ಅವನಿಗೆ ಮರಣ ದಂಡನೆಯಾಗುವದು. ರಾಮನ ತಂದೆ ರಾವ ಬಹಾದ್ದೂರ್ ದ್ವಾರಕಾದಾಸರು ಅಕಸ್ಮಾತ್ತಾಗಿ ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತು ರಾಮನ ಪರವಾಗಿ ವಾದಿಸುವರು. ಆದರೂ ಉಪ ಯೋಗಬೀಳದೆ ರಾಮನನ್ನು ಗಲ್ಲಿಗೇರಿಸು ವರು. ರಾಮನ ಅಂತ್ಯಯಾತ್ರೆ ನಡೆದಾಗ ಶೀಲಳೂ ಇಹಲೋಕ ತ್ಯಜಿಸುವಳು. ಈರ್ವರೂ ದೇಶಕ್ಕಾಗಿ ತ್ಯಾಗಮಾಡಿ ಹುತಾತ್ಮರಾದರು.

ಇದಿಷ್ಟು ಚಿತ್ರದ ಕತೆ. ದಿಗ್ದರ್ಶಕ ಚಿತ್ರ ದಲ್ಲಿ ಆದರ್ಶವನ್ನು ಸಾಧಿಸಬೇಕೆಂದು ಇಟ್ಟು ಕೊಂಡಿದ್ದರೂ ಸಾಧ್ಯವಾಗಿಲ್ಲ. ಕಥಾನಕದ ನಾಯಕ ರಾಮ ವೀರಕೃತಿಗಳಿಗಿಂತ ಪ್ರೇಮಾ ಲಾಪಗಳಲ್ಲಿ ತೊಡಗಿರುವದನ್ನೇ ಎರಡನೆಯ ಭಾಗದಲ್ಲಿ ಚಿತ್ರಿಸಲಾಗಿದೆ. ಮೇಲಾಗಿ ನಾವೂನ್ನ ತಿಳುವಳಿಕೆಯ ಪ್ರಕಾರ ೧೯೪೨ ರ ಅಂದೋಲನ ದಲ್ಲಿ ಮೇಲಿನಂತಹ ಅಪಾದನೆಗೆ ಗಲ್ಲಿಗೇರಿ ಸಿದ್ದಿಲ್ಲ. ದಿಗ್ದರ್ಶಕರು ರಾಮನು ದೇಶಕಾರ್ಯ ನೆರ ವೇರಿಸುತ್ತಿರುವಾಗ (ಕರ್ನಾಟಕದಲ್ಲಿಯ ಮಹ ದೇವಪ್ಪ ಮೈಲಾರರಂತೆ) ಹುತಾತ್ಮನಾದ ದೃಶ್ಯವನ್ನು ಚಿತ್ರಿಸಿದ್ದರೆ ಕಳೆಕಟ್ಟುತ್ತಿತ್ತು. ರಾಮನ ತಂದೆ ದ್ವಾರಕಾದಾಸರು ಅಕಸ್ಮಾ ತ್ತಾಗಿ ಕೆಲಸ ಬಿಟ್ಟರೂ ಮಗನ ಪರವಾಗಿ ವಾದಿಸುವ ಮಬ್ಬಿನಲ್ಲಿ ನಿಯಮಗಳನ್ನು ಲೆಕ್ಕಿ ಸದೆ ಚೀರಾಡುವಂತೆ ಚಿತ್ರಿಸಿದುದೂ ನ್ಯಾಯಾ ಲಯದ ಗೌರವಕ್ಕೆ ಕುಂದು ತಂದಿದೆ.

ದೇಶಪ್ರೇಮವನ್ನು ಬೆರಸಿ ಶೃಂಗಾರಕಥೆ ಯನ್ನು ಉದಾತ್ತಗೊಳಿಸುವಂತೆ ನಟಿಸುವ ಕಥಾಸಂವಿಧಾನದ ವಂಚನೆ ಇಲ್ಲಿ ಮಗುವಿಗೂ ತಿಳಿಯಲು ಸಾಧ್ಯವಾಗುವಷ್ಟು ಸ್ಪಷ್ಟವಿದೆ. ಬಾಕ್ಸ್ ಆಫೀಸನ್ನು ತುಂಬಿಸುವ ಬೀಜಮಂತ್ರ ದಂತಿರುವ ಅಗ್ಗದ ಶೃಂಗಾರವನ್ನು ಮಿತಿ ಯೊಳಗಿಡುವ ಧೈರ್ಯಬಂದ ಹೊರತು ಉದಾತ್ತ ಚರಿತಸಂಪನ್ನ ಕಥಾನಾಯಕರನ್ನುಳ್ಳ ಚಿತ್ರ ಗಳನ್ನು ಹೊರಗೆಡಹಲು ಸಾಧ್ಯವಿಲ್ಲ ಎಂದು ನಿರ್ಮಾಪಕರು ಈ ಅನುಭವದಿಂದ ಪಾಠ ಕಲಿಯಬೇಕು. ಅನವಶ್ಯಕವಾಗಿ ಸಂವಿ ಧಾನದಲ್ಲಿ ತೊಡಕುಗಳನ್ನುಂಟುಮಾಡಿ ಕರು ಣಾಜನಕತೆಯನ್ನು ಚಿತ್ರಿಸಹೊರಡುವ ರಚನಾ ದೌರ್ಬಲ್ಯ ಕಥಾವಸ್ತುವಿಗೆ ದುರಂತವನ್ನು ತಂದೊಡ್ಡುವ ಅವಿವೇಕಬದ್ಧ ಪರಿಣಾಮಕ್ಕೆಡೆ ಗೊಟ್ಟಿದೆ. ರಾಮನ ಉದಾತ್ತತೆಗೆ ಪರಪತ್ನೀ ಪ್ರೇಮಸಲ್ಲಾಪ ಮತ್ತು ಪರವಧ ಪ್ರಯತ್ನ ಗಳ ಕಲಂಕ ಬಂದಿದೆ. ಶೀಲಳದು ಎಲ್ಲೆಲ್ಲೂ Condescending Attitude-ದಿಮ್ಮನಿಂದ ತೋರುವ ಉದಾರತೆಯಾಗಿದೆ ಯಲ್ಲದೆ ದೇಶಪ್ರೇಮದ ಸ್ವಯಂಪ್ರಬುದ್ಧ ದಿವ್ಯಸ್ಫೂರ್ತಿಯ ಸ್ವತಂತ್ರ ಕಾರ್ಯಪ್ರವೃತ್ತಿ ಯಲ್ಲ. ಅವಳ ಪರೋಪಕಾರ ಬುದ್ಧಿಯಾ ದರೂ ಅವಳ ಅಣ್ಣ ಕಂಡಂತೆ ವೀರೋಚಿತ ವಲ್ಲ; ಮುಗ್ಧವಂತಿಕೆಯದಲ್ಲ; ಒಬ್ಬರ ಉಪ ಕಾರಕ್ಕಾಗಿ ಮತ್ತೊಬ್ಬರನ್ನು ವಂಚಿಸುವ ಮಾಯೆ.

ದ್ವಾರಕಾದಾಸರ ಪಾತ್ರವಹಿಸಿದ ಚಂದ್ರ ಮೋಹನನ ಅಭಿನಯ ಉತ್ತಮದರ್ಜೆಯ ದಾಗಿದೆ. ರಾಮನ ಪಾತ್ರವಹಿಸಿದ ದಿಲೀಪ ಕುಮಾರ, ಶೀಲಳ ಪಾತ್ರವಹಿಸಿದ ಕಾಮಿನಿ ಕೌಶಲರ ಅಭಿನಯ ಕೌಶಲ್ಯಪೂರ್ಣವಾದು ದಲ್ಲ. ಕಾಮಿನಿಕೌಶಲ ಕೆಲ ಸಂದರ್ಭಗಳಲ್ಲಿ ತಪ್ಪಿದುದೂ ಉಂಟು. ಲೀಲಾ ಚಿಟ್ನೀಸ ಮತ್ತು ವಿ. ಎಚ್. ದೇಸಾಯಿಯವರ ಅಭಿನ ಯವು ಸಾಧಾರಣವಿದೆ. ಚಿತ್ರದ ಛಾಯಾಗ್ರಹಣ ಮತ್ತು ಸಂಗೀತಗಳು ಅಷ್ಟಕ್ಕಷ್ಟೇ. ೧೯೪೨ ನೆಯ ರಾಜಕೀಯ ಆಂದೋಲನವನ್ನು ಚಿತ್ರಿ ಸುವ ಚಲಚ್ಚಿತ್ರಗಳಲ್ಲಿ ಮೊದಲನೆಯದಾದ "ಶಹೀದ್" ಯಶಸ್ವಿಯಾಗಿಲ್ಲ.

ವಿಶೇಷ ಲೇಖ

ಚಂದ್ರನಗರದ ಸಂ...

ಕ್ರಾಂತಿ...

ಕಳೆದ ರವಿವಾರ (ತಾ. ೧೯) ದಿನ ಚಂದ್ರನಗರದಲ್ಲಿ ಜನಮತಗಣನೆ ನಡೆದು ಅದು ಭಾರತದಲ್ಲಿ ಲೀನವಾಗ ಬೇಕೆಂದು ನಿರ್ಣಯವಾಯಿತು. ೧೯ ನೆ ಶತಮಾನದ ಪ್ರಾರಂಭದಿಂದ ಬ್ರಿಟಿಶ ರಾಜ್ಯದ ಸಾಗರದ ನಡುವೆ ಒಂದು ಫ್ರೆಂಚ್ ದ್ವೀಪದಂತಿದ್ದ ಚಂದ್ರನಗರ ಸ್ವತಂತ್ರ ಭಾರತದಲ್ಲಿ ಐಕ್ಯಗೊಳ್ಳಲು ನಿರ್ಧರಿಸಿ ತನ್ನ ಯಥಾರ್ಥವಾದ ಸ್ಥಾನ ವನ್ನು ಪಡೆಯಲಿದೆ. ಫ್ರೆಂಚ ಪಾರ್ಲ ಮೆಂಟು ಈ ಬಗ್ಗೆ ಒಂದು ಮಸೂದೆ ಪಾಸು ಮಾಡುವದೇ ಈ ಸಂಬಂಧದಲ್ಲಿ ಇನ್ನುಳಿದ ಒಂದೇ ವಿಧಿ. ಅದಾದರೆ ಸಸ್ಯಶ್ಯಾಮಲ ಬಂಗಾಲದಲ್ಲಿ ಚಂದ್ರ ನಗರ ಪುನಃ ಮೈಗೂಡಿಸುವದು.

೧೭ ನೆ ಶತಮಾನದಲ್ಲಿ

ಒಂದು ಕಾಲದಲ್ಲಿ ಭಾರತದ ಸ್ವಾಮ್ಯ ಕ್ಕಾಗಿ ಬ್ರಿಟಿಶರೊಡನೆ ಸೆಣಸಿ ಮುಂದೆ ಕಾಲ್ತೆ ಗೆದ ಫ್ರೆಂಚರು ಕೊನೆಗೆ ಈ ದೇಶದಲ್ಲಿ ಉಳಿಸಿ ಕೊಂಡ ಐದು ವಸತಿಗಳಲ್ಲಿ ಚಂದ್ರನಗರ ವೊಂದು. ಸುತ್ತಲೂ ಹುಗಲಿ ಜಿಲ್ಹೆಯಿಂದ ಆವರಿಸಲ್ಪಟ್ಟ ಈ ಪುಟ್ಟ ೫೫,೦೦೦ ಜನ ವಸತಿಯ ಪಟ್ಟಣ ಕಲಕತ್ತೆಯಿಂದ ೨೧ ಮೈಲು ಮೇಲ್ಗಡೆ ಹುಗಲಿ ನದಿಯ ದಂಡೆ ಯಲ್ಲಿದೆ. ಅದರ ವಿಸ್ತಾರ ಮೂರು ಚದರ ಮೈಲು. ಈ ಚಿಕ್ಕ ಮಹತ್ವವಿಲ್ಲದ ಸ್ಥಳದಲ್ಲಿ ಫ್ರೆಂಚರು ಮೊಟ್ಟಮೊದಲು, ಹದಿನೇಳನೆ ಶತಕದಲ್ಲಿ, ಒಂದು ಕಾಲೂರಿದ್ದು ಅಕ ಸ್ಮಾತ್ತಾಗಿ. ಬಂಗಾಲ ಅಖಾತದಲ್ಲಿ ಎತ್ತಲೋ ಸಾಗಿದ್ದ ಒಂದು ಫ್ರೆಂಚ ಹಡಗು ಬಿರು ಗಾಳಿಗೆ ಸಿಲುಕಿ ಓಡಿಸಾದ ಕಡಲ ತಡಿಗೆ ಬಂದಾಗ ಡಚ್ ಹಡಗುಗಳು ಅದನ್ನು ಸೆರೆ ಹಿಡಿದು ಹುಗಲೀ ತೀರದ ತಮ್ಮ ಆಗಿನ ಡಚ್ ವಸತಿಯಾಗಿದ್ದ ಚಿನಸುರಾಕ್ಕೆ

ಒಯ್ದವು. ಬಂಗಾಲ... ರೀತ್ಯೆಯ ವಸ... ಮೊದಲೇ ಆ ಪ್ರಾಂ... ಹೂಡಿದ್ದ ಬ್ರಿಟಿಶ, ಯುರೋಪಿಯನ್ ಗಳಂತೆ ಫ್ರೆಂಚರು... ತಳವೂರಲು ಈ... ವಾಯಿತು. ಕಲಕ... ಸ್ಥಳಗಳಲ್ಲಿ ಇತರ... ಸಾಹಸಿಗಳಿಗೆ ಮೊದ... ಸುಲಭವಾಗಿ ಚಂದ್ರನ... ವಸತಿ ಮಾಡಲು ಅಪ್ಪ... ಇತರರಂತೆ ಇವರೂ ಕಟ್ಟಿಸಿಕೊಂಡು ಅದ... ಯನ್ಸ್ ಎಂದು ಹೆಸ...

ಡ್ಯೂಪ್ಲೆಯ...

೧೬೮೮ ರಲ್ಲಿ ಆ... ವಸತಿಯಾಗಿದ್ದರೂ... ವರ್ಷಗಳ ಸಂಕಟ... ಅದಕ್ಕೆ ಮೊದ... ತದ್ದು ಫ್ರೆಂಚ್ ... ಕಾಲದಲ್ಲಿ, ೧೭೩... ಅಭೂತಪೂರ್ವವಾ... ರೊಂದಿ ವ್ಯಾಪಾರ... ಗೊಂಡಿತು. ಹಣ... ರಾಶಿರಾಶಿಯಾಗಿ ಹ... ಗುಗಳನ್ನು ಅಲ್ಲಿಂದ ... ಸುರತ, ಜೆಡ್ಡಾ ಮ... ಉಪಯೋಗಿಸಲಾಗು... ಯನ್ನು ಅಲ್ಲಿಂದ ... ಆದರ ಮಹಿಮೆ ... ಫ್ರೆಂಚ್ ವ್ಯಾಪಾರಿ... ಬಾಹಿರತೆಯೂ ಯು... ಗಳ ಅಂತಃಕಲಹವೂ ದಶೆಗೆ ಕಾರಣವಾದವು...

ಭಾರತದ ಭಾಗ... ಕಾರಣವಾದ ಪ್ಲಾಸಿ... ದಲ್ಲಿ ಯುರೋಪಿನಲ್ಲಿ... ರಿಗೂ ಮನಸ್ತಾಪ... ನಗರದ ಕೋಟೆ... ಕಲಕತ್ತೆಯದನ್ನು ತೊಡಗಿದರು. ನವ... ಇದಕ್ಕೆ ಆಕ್ಷೇಪವೆ... ದೊರೆಯದಿರಲು, ... ಮುಂದೆ ಕಲಕತ್ತೆಂ... ಮತ್ತು ಫ್ರೆಂಚರಿ... ವಸೂಲು ಮಾಡಿದ...

ಕ್ಲೈವನ ಆಕ್ರಮ...

ಅಷ್ಟರಲ್ಲಿ ಯುರ... ಇಂಗ್ಲೀಷರಿಗೂ ಕ... ಆಗ ಕಲಕತ್ತೆಗಿಂತ... ಚಂದ್ರನಗರದ ಗ... ಬ್ರಿಟಿಶ ಅಧಿಕಾರಿಗ... ಕೊಳ್ಳಲೆಳಸಿದನು. ... ಲನ ಮೇಲೆ ಸೇಡು... ರಾಗಿದ್ದ ಬ್ರಿಟಿಶರು... ಸಹಾಯ ... ಚಂದ್ರನಗರ... ಏರಿಹೋಗಿ ಕಪ್ಪ... ವಶಪಡಿಸಿಕೊಂಡು ಸೈನಿಕರನ್ನು ಹೆಡವ... ತಂದನು. ಆಗ ಚ... ಮಾಡಿ ಬ್ರಿಟಿಶರು ಗಳಷ್ಟು ಬೆಲೆಯ... ಕೊಂಡೊಯ್ದರು.



ಡ್ಯೂಕ್ ಅಫ್ ಎಡಿನ್‌ಬರ್ಗ್ ಇಂಡಿಯಾ ಸ್ಟ್ಯಾಂಡಿಗೆ ಭೆಟ್ಟಿಕೊಟ್ಟಾಗ: ಇಂಡಿಯಾ ಸ್ಟ್ಯಾಂಡು ಇತ್ತೀಚಿಗೆ ಲಂಡನ್ನಿನಲ್ಲಿ ತೆರೆದ ಔದ್ಯಮಿಕ ಸಂತೆಯ ಒಂದಡೆಯಿತ್ತು. ಅದರ ಪ್ರದರ್ಶನೀಯ ವಸ್ತುಗಳಲ್ಲಿ ಅವನು ಬಹಳ ಆಸಕ್ತಿವಹಿಸಿದನು.

ಹೊಸ ಪುಸ್ತಕಗಳು

ಸಾಹಿತ್ಯ ಕಲೆಗಳ ಬಗ್ಗೆ ಲೇಖನಗಳು

ಸಾಹಿತ್ಯ ಕಲೆಗಳ ಬಗ್ಗೆ 'ಕನ್ನಡ ನುಡಿ'ಯಲ್ಲಿ ಅಚ್ಚಾದ ಬರಹಗಳನ್ನು ಸಂಕಲಿಸಿ ಅಚ್ಚು ಹಾಕುವ ಕೆಲಸವನ್ನು ಕನ್ನಡ ಸಾಹಿತ್ಯ ಪರಿಷತ್ತೀಗ ಮಾಡಿದೆ. ೮೯ ಪುಟಗಳನ್ನು ವ್ಯಾಪಿಸಿರುವ ಕಾವ್ಯವಸ್ತು, ಪ್ರಗತಿಶೀಲ ಲೇಖನ, ಕವಿಯ ಗುರಿ, ಪತ್ರಿಕಾಧರ್ಮ, ಗೋರಿಕ್ ಸಂದರ್ಶನ ಎಂಬ ವಸ್ತುಗಳನ್ನು ವಿವೇಚಿಸಿರುವ ಲೇಖನಗಳು ಹತ್ತೇ ಅಣೆಗಳಿಗೆ ದೊರಕುವಂತಾಗಿದೆ. ಅದರ ಉಪಯುಕ್ತತೆಯನ್ನು ಮಾಡಿಕೊಂಬವರು ಅರಿಯದಿರರು.

ಕಾವ್ಯ ವಸ್ತು

ಅ. ಭಾ. ಆಕಾಶವಾಣಿಯ ಆಶ್ರಯದಲ್ಲಿ ಮದ್ರಾಸಿನಿಂದ ಬಿತ್ತರಿಸಿದ ಸಂವಾದ ಕಾವ್ಯವಸ್ತು ಹೇಗಿರಬೇಕು, ಯಾವುದಿರಬೇಕು ಎಂಬ ಚರ್ಚೆಯ ರೂಪದಲ್ಲಿದೆ. ಅದರಲ್ಲಿ ಆಂಧ್ರ ಸಾಹಿತ್ಯ ವಿದ್ವಾಂಸರೆನಿಸಿದ ಶ್ರೀಗಳಾದ ರಾಯಪ್ರೋಲು ಸುಬ್ಬರಾವು, ಜಮ್ಮಲಮಡಕ ಮಾಧವರಾಯ ಶರ್ಮ, ಅಬ್ಬೂರಿ ರಾಮಕೃಷ್ಣರಾವು, ಗಡಿಯಾರಂ ವೆಂಕಟಶೇಷಶಾಸ್ತ್ರಿ, ಇಂದ್ರಕಂಟಿ ಹನುಮಚ್ಛಾಸ್ತ್ರಿ, ಪಿಲಕಾ ಗಣಪತಿ ಶಾಸ್ತ್ರಿ ಮತ್ತು ವೆಂಕಟಕೃಷ್ಣರಾವು ಇವರು ಭಾಗವಹಿಸಿದ್ದರು. ಈ ವಿದಗ್ಧರ ಚರ್ಚೆಯಲ್ಲಿ— ಕಾವ್ಯಕ್ಕೆ ರಸವೇ ಗುರಿಯಾದುದರಿಂದ ಉದ್ದಿಷ್ಟ ರಸಪರ್ಯವಸಾಯಿಯಾಗಲು ಯುಕ್ತವೆನಿಸುವ ಕಾರಣಸಾಮಗ್ರಿ ವಸ್ತುವಿನಲ್ಲಿರಬೇಕು, ಆದುದರಿಂದ ವಸ್ತುವಿನ ಆಯ್ಕೆಯಾಗಬೇಕು, ಆಯ್ದ ವಸ್ತುವಿನಲ್ಲಿ ಕವಿ ಭಾವಾರೋಪ ಮಾಡಬೇಕು, ಅಂಥ ಭಾವಾರೋಪದಿಂದ ಆಸ್ವಾದ್ಯತೆಯುಂಟಾಗಬೇಕು; ಆಸ್ವಾದ್ಯತೆ ಅಥವಾ ರಸವಾನ್ಯತೆ ಸರ್ವಪ್ರಾಣಿಸಂತಾನಕ್ಕೆ ಇಷ್ಟ ಅಥವಾ ಹಿತವಾದ ಆನಂದಕ್ಕೆ ಕಾರಣವಾಗುತ್ತದೆ— ಎಂಬ ಅಂಶ ಪ್ರತಿಪಾದಿತವಾಗಿದೆ. "ಪ್ರಯೋಜನಕ್ಕೆ ತಕ್ಕಂತೆ ಸಲಕರಣೆಯಿರಬೇಕು... ಕವಿಯ ಭಾವನಾರೋಪಣದಿಂದ ವಸ್ತುವಿಗೆ ಕಾವ್ಯತ್ವ ಬರುತ್ತದೆ... ವಿಶಾಲ ದೃಷ್ಟಿಯಿಂದ ನೋಡಿದರೆ ಹಿತವೇ ಆನಂದ... ಕವಿತೆಯ ಬಣ್ಣವೇ ಅಲ್ಲ ನಮಗೆ ಬೇಕಾದುದು, ಕಾವ್ಯವಸ್ತುವಿನ ಬಣ್ಣ. ಕವಿ ಗಂಡು ಹೆಣ್ಣಿನ ಶೃಂಗಾರ ವಿಹಾರವನ್ನು ಬಣ್ಣಿಸಿದರೆ ಲೋಕಕ್ಕೆ ಆಸ್ವಾದ್ಯವಾಗಬಹುದು. ಆದರೆ ಆ ಸವಿಯಿಂದ ಉದ್ರಿಕ್ತವಾದ ಹೃದಯ ಹಾಗೇ ಅಣಗಿ ಇರದು. ಆದ್ದರಿಂದಲೇ ಕವಿ ಆ ಗಂಡು ಹೆಣ್ಣಿಗೆ ನಾಮರೂಪಾದಿಗಳನ್ನು ನಿರ್ಮಿಸಿ ವ್ಯಕ್ತಿತ್ವವನ್ನು ಕೊಡುತ್ತಾನೆ. ತನ್ನ ಕಾಲಕ್ಕೆ ಸಮಾಜದಲ್ಲಿ ಪಕ್ವವೆನಿಸಿದ ಅನುಭವದಿಂದ ಅದನ್ನು ಸಿಂಗರಿಸುತ್ತಾನೆ. ಆ ಆಸ್ವಾದನೆಯಿಂದ ಲೋಕವು ಹಿತಾಹಿತವನ್ನು ಊಹಿಸಿ ಮುಂಬರಿಯುತ್ತದೆ. ಹೀಗೆ— ನೀತಿ ಬೇಡ ಎಂದರೂ ಅನಿವಾರ್ಯವಾಗಿ ವಿಧಿಯಾಗಿ ನೀತಿಯ ಪ್ರಭಾವ ವಸ್ತುವಿನಲ್ಲೇ ರೂಪುಗೊಳ್ಳುತ್ತದೆ... ದುಷ್ಟವಾದರೆ ಕಾವ್ಯವಲ್ಲ; ಕಾವ್ಯವಾದರೆ ದುಷ್ಟವಲ್ಲ. ರಸವಂತವಾದ ಕಾವ್ಯಗಳೆಲ್ಲ ಅದುಷ್ಟವಾಗಿ ಉಪಯುಕ್ತವಾಗುತ್ತವೆ... ಸಂಪೂರ್ಣ ವರ್ಗಗತವಾದ ವಸ್ತುವಾಗಲಿ, ಕೇವಲ ವ್ಯಕ್ತಿಗತ ವಸ್ತುವಾಗಲಿ ಎಲ್ಲೂ ಇಲ್ಲ. ಕೇವಲ ಕವಿಗೆ ಮಾತ್ರವೇ ಅರ್ಥವಾಗುವುದು ಉನ್ಮತ್ತ ಪ್ರಲಾಪವಾದೀತೆ ವಿನಾ ಕವಿತ್ವವಾಗಲಾರದು. ವ್ಯಾವಹಾರಿಕ ಜಗತ್ತು ವಸ್ತುತಃ ಸುಖಮಯವೂ ಅಲ್ಲ, ದುಃಖಮಯವೂ ಅಲ್ಲ... ಈ ಪ್ರತಿಪಾದನೆಯನ್ನು ಮನಸ್ಸಿನಲ್ಲಿಟ್ಟುಕೊಂಡೇ ಭರತಾಚಾರ್ಯ ಯಾವ ಪ್ರತ್ಯೇಕ ವಿಶೇಷಣವನ್ನೂ ಸೇರಿಸದೆ 'ಲೋಕವೃತ್ತಾನುಕರಣಂ ನಾಟ್ಯಂ' ಎಂದಿದ್ದಾರೆ"— ಎಂಬ ರಾಯಪ್ರೋಲು ಅವರ ಸಿದ್ಧಾಂತದಿಂದ ಮುಕ್ತಾಯವಾಗಿದೆ.

ಪ್ರಗತಿಶೀಲ ಲೇಖನ

ಸಾಹಿತ್ಯವಿಷಯದಲ್ಲಿ ಇಂಥ ವಿದ್ವತ್ಪೂರ್ಣವಾದ ಚರ್ಚೆ ನಡೆಸುವ ಸಾಮರ್ಥ್ಯ ಕನ್ನಡ ಸಾಹಿತ್ಯಸೇವಕ ವರ್ಗದಲ್ಲಿ ಇಂದು ಕಂಡು ಬಂದಿಲ್ಲ ಅಥವಾ ಪ್ರದರ್ಶಿತವಾಗಿಲ್ಲ. ಮೇಲಿನ ಚರ್ಚೆ ನಿಜವಾದ ಪಕ್ವಬುದ್ಧಿಯ, ಅನುಭವಸಮೃದ್ಧ ಹೃದಯದ ಕಾವ್ಯಾದಿ ಕಲಾಕೋವಿದರಿಂದ ನಡೆದದ್ದು ಎಂಬುದು ಅವಲೋಕನ ಮಾತ್ರದಿಂದ ತಿಳಿದುಹೋಗುವುದು. ಇಂಥ ಸಂಗ್ರಹ ಎಷ್ಟಿದ್ದರೂ ಸ್ವಾಗತಾರ್ಹವೇ.

ಪ್ರಗತಿಶೀಲ ಲೇಖನದ ಬಗ್ಗೆ ಹೇಳುವಾಗ ಶ್ರೀ ಸಜ್ಜಾದ್ ಜಾಹಿರರು ತಮ್ಮ ಆಂಧ್ರ ಪ್ರಾಂತ ಪ್ರಗತಿಶೀಲ ಲೇಖಕರ ಸಮ್ಮೇಳನದ ಪ್ರಾರಂಭ ಭಾಷಣದಲ್ಲಿ, "ಪ್ರಗತಿಪರರು ಒರಟು ಭಾಷೆಯನ್ನು ಬಳಸುತ್ತಾರೆಂದೂ ನಾಜೂಕಾದ ಮೃದುಮಧುರ ಭಾಷೆಗೆ ವಿರೋಧಿಗಳೆಂದೂ ಕೆಲವರು ಆಕ್ಷೇಪಿಸುತ್ತಿದ್ದಾರೆ... ನಮಗೆ ವಿಷಯಪ್ರಧಾನ, ಭಾಷೆಗೆ ಎರಡನೆಯ ಸ್ಥಾನ... ನಿಕೃಷ್ಟ ಜೀವನ ನಡೆಸುವ ಬಡವ ಚೊಕ್ಕಟವಾಗಿಲ್ಲದಿರುವುದರಿಂದ ಭಾಗ್ಯವಂತನಿಗೆ ಅಸಭ್ಯವಾಗಿ ಕಾಣ ಬರುತ್ತಿರಬಹುದು. ಅದು ದೃಷ್ಟಿಭೇದ... ಹೀಗೆಂದ ಮಾತ್ರಕ್ಕೆ ಮನಸ್ಸಿಗೆ ಬಂದಂತೆ ಬರೆಯಬಹುದು ಎಂದಲ್ಲ. ನಾವು ಜನರ ಭಾಷೆಯನ್ನು ಕಲಿಯಬೇಕು. ಜನರ ಬಾಳು ಬದುಕಿನಿಂದ ಅನುಭೂತಿಯನ್ನು ಪಡೆಯಬೇಕು. ರಚನಾ ಶಕ್ತಿಯನ್ನು ಉಪಯೋಗಿಸಿ ಜನಜೀವನವನ್ನು ಬಣ್ಣಿಸಬೇಕು... ನಮ್ಮ ದೃಷ್ಟಿಗೆ ಬ್ಲಾಂಕ್‌ವರ್ಸ್, ಫ್ರೀವರ್ಸ್ ವಾಸ್ತವತೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವೇನೋ ಅನಿಸುತ್ತದೆ... ಅಗ್ಗವಾದ ಅನುಕರಣವನ್ನು ಮಾಡಬೇಡಿರಿ..." ಎಂದು ಹೇಳಿದ್ದಾರೆ. ಕನ್ನಡದಲ್ಲಿಯೂ ಪ್ರಗತಿಶೀಲ ಲೇಖಕರೆಂದು ಹೇಳಿಕೊಳ್ಳುವ ಅವ್ಯುತ್ಪನ್ನರು ಹಲವರಿದ್ದಾರೆ. ಅವರು ಮೇಲಿನ ಮಾತನ್ನು ಗಮನಿಸುವದೊಳ್ಳೆಯದು.

ಕಾವ್ಯದ ಗುರಿ

'ಕವಿಯ ಗುರಿ' ಯಲ್ಲಿ 'ಉತ್ತಮ ಮನುಷ್ಯರ ಪ್ರವೃತ್ತಿಯನ್ನು ಹಿಡಿದು ಮಾನವ ಜೀವನದ ಗುರಿಯನ್ನು ನಿರ್ಧರಿಸುವಂತೆಯೇ ಉತ್ತಮ ಕವಿತೆಯ ಗುರಿಯನ್ನೂ ಧ್ಯೇಯವನ್ನೂ ನಿರ್ಣಯಿಸಬೇಕು ಎಂಬುದು ನ್ಯಾಯ... ಪಾಶ್ಚಾತ್ಯ ದೇಶಗಳ ಸಂಪರ್ಕ ನಮ್ಮ ದೇಶಕ್ಕೆ ಆದಾಗಿನಿಂದ ಕವಿತೆ ಆವೇಶ ಹುಟ್ಟಿಸಬೇಕು, ಆವೇಗ ಹುಟ್ಟಿಸಬೇಕು ಎಂಬ ಭಾವನೆ ಹುಟ್ಟಿ ದಿನದಿನಕ್ಕೆ ನಮ್ಮವರಲ್ಲಿ ಬೆಳೆಯುತ್ತಿದೆ. ನಮ್ಮ ಪ್ರವೃತ್ತಿಗೆ ಅನುಕೂಲವಾಗಿ ನಮ್ಮ ಆದರ್ಶಗಳನ್ನು ಕಲ್ಪಿಸಿಕೊಳ್ಳುತ್ತೇವೆ. ಆದರೆ ಇದು ನಮಗೆ ಉಪಾದೇಯವೆ, ಅಲ್ಲವೆ?' ಎಂದು ಕೇಳಿ, 'ಅರಿಸ್ಟಾಟಲ್ ಅಭಿಪ್ರಾಯದ ಪ್ರಕಾರ ಉತ್ತಮ ಸಾಹಿತ್ಯದ ಗುರಿ ಮುಖ್ಯವಾಗಿ ಪಾಠಕರನ್ನು ನಡಸುವ ತಾಮಸ ಶಕ್ತಿಗಳ ಪ್ರಕೋಪ ಎಂಬುದು ಸ್ಪಷ್ಟವಾಗಿದೆ. ಸ್ಥೂಲ ದೃಷ್ಟಿಯಿಂದ ನೋಡಿದರೆ ಆತ ಹೇಳಿದ ಗುರಿಯೂ ಶಾಂತಿಯಂತೆಯೇ ಕಾಣುತ್ತದೆ. ಸೂಕ್ಷ್ಮ ದೃಷ್ಟಿಯಿಂದ ಅರಸಿ ನೋಡಿದರೆ ಅದು ಶಾಂತಿಯಲ್ಲ ಭ್ರಾಂತಿ ಎಂದು ವಿಶದವಾಗುತ್ತದೆ' ಎಂದು ಸಿದ್ಧಾಂತಿಸಲಾಗಿದೆ. ಸತ್ವಗುಣದ ಉದ್ರೇಕದಿಂದ ಮಾತ್ರ ಅಖಂಡವಾಗಿ ಸ್ವಪ್ರಕಾಶಾನಂದ ಚಿನ್ಮಯವಾಗಿ ಸ್ವಾಕಾರದಂತೆ ಅಭಿನ್ನತ್ವದಿಂದ ಆಸ್ವಾದ್ಯವಾಗುವ ರಸ ಅಥವಾ ಸೌಂದರ್ಯ ಇಲ್ಲವೆ ಆನಂದದ ಅನುಭೂತಿ ಹೇಗೆ ಪಾಶ್ಚಾತ್ಯ ಆವಿದ್ಧ ನಾಟಕದ "ರಸಾ"ನುಭೂತಿಯಿಂದ ಭಿನ್ನ, ಹೇಗೆ ಉತ್ತಮ, ಹೇಗೆ ಸರ್ವಗ್ರಾಹ್ಯ ಎಂಬ ಅಂಶವನ್ನು ವಿವೇಚಿಸಿದವರು ನಮ್ಮ ಆಧುನಿಕ ವಿದ್ಯಾವಂತರಲ್ಲಿ ಬಹಳ ಜನರಿರಲಾರರು. ಆತ್ತಕಡೆಗೆ ವಿಚಾರ ಶಕ್ತಿಯನ್ನು ಪ್ರಚೋದಿಸುವ ಈ ಲೇಖನ ಅತ್ಯುತ್ತಮವೂ ಅತ್ಯವಶ್ಯಕವೂ ಎನಿಸಿದೆ. ಇದು ಆಧುನಿಕ ವಿಮರ್ಶಕಂಮನ್ಯರಿಗೆ ಒಂದು ರಣಾಹ್ವಾನದಂತಿದೆ.

"ಪತ್ರಿಕಾ ಧರ್ಮ" ದಲ್ಲಿ ಶ್ರೀ ಖಾಸಾ ಸುಬ್ಬರಾವು ವಾರ್ತಾ ಸಂಗ್ರಹ, ಪ್ರಕಟನೆ, ಪ್ರಕಟನೆಗಾರರು, ಕ್ಷುದ್ರವಾರ್ತೆ, ಸಮಕಾಲೀನ ಸಮಸ್ಯೆಗಳ ಚರ್ಚೆ– ವಿಶದೀಕರಣ, ಸ್ವಾಭಿಪ್ರಾಯ ಪ್ರಕಟನೆ, ಪತ್ರಿಕೆಗಳ ಒಡೆತನ, ವ್ಯಾಪಾರವಾಗಬಾರದು, ಪತ್ರಿಕೋದ್ಯೋಗಿಗಳ ಸಂಘ, ನಮ್ಮ ಕರ್ತವ್ಯ ಎಂಬ ವಿಷಯಗಳನ್ನು ಸಮರ್ಥವಾಗಿ ವಿವೇಚಿಸಿದ್ದಾರೆ.

ಕಲೆಯ ಅಂತರ್ದೃಷ್ಟಿ

"ಗೋರಿಕ ಸಂದರ್ಶನಾರ್ಥ" ದಲ್ಲಿ ಶ್ರೀ ಎಸ್. ಸಂಜೀವದೇವ್ ಅವರು ಚಿತ್ರಕಾರ ರೋರಿಕ್ಕನೊಡನೆ ಮಾಡಿದ ಸಂಭಾಷಣೆಯನ್ನು ನಡುವೆ ಕೊಟ್ಟಿದ್ದಾರೆ. "ಇಲ್ಲಿಯ ವರೆಗೆ ನನ್ನ ಚಿತ್ರಕಲೆಯಲ್ಲ ವಾಸ್ತವತೆಯನ್ನು ಅವಲಂಬಿಸಿದೆ, ಇನ್ನು ಕಾಲ್ಪನಿಕ ಚಿತ್ರಗಳನ್ನು ಚಿತ್ರಿಸಲು ಪ್ರಯತ್ನಿಸುತ್ತೇನೆ. ಚಿತ್ರಕಲೆಗೆ ಪ್ರಥಮ ದಶೆ ವಾಸ್ತವ ಜಗತ್ತಿನ ಅನುಕರಣ; ನಕಲು ಮಾಡುವುದು. ಚಿತ್ರಕಾರನ ಕೈ ಪಳಗಿ ತನ್ನ ಭಾವಗಳನ್ನು ಅನುಸರಿಸಿ ನಡೆಯಲು ಕಲಿತ ಮೇಲೆ ಅವನು ಬರೀ ಬಾಹ್ಯ ಜಗತ್ತಿಗೇ ಅಂಟಿಕೊಂಡಿರಲಾರ. ತನ್ನ ಅಂತರ್ಜಗತ್ತಿನೊಳಗಣ ಭಾವಕ್ಕೆ ರೂಪ ಕೊಡಬಯಸುತ್ತಾನೆ" ಎಂಬುದು ಭಾವಗರ್ಭಿತವೂ ಅನುಭವಗಂಭೀರವೂ ಆದ ಮಾತು. ಕಲೆಯ ಬಗ್ಗೆ ತಿಳಿದುಕೊಳ್ಳಬಯಸುವವರು ಈ ಮಾತನ್ನು ಮನನ ಮಾಡಬೇಕು.

ಸಂಕಲನದಲ್ಲಿಯ ವಿಷಯಗಳ ಪ್ರಾಮುಖ್ಯ, ಪ್ರತಿಪಾದಕರ ವಿದ್ವತ್ತೆ, ವಿವರಣಶೈಲಿ ಇವೆಲ್ಲವೂ ಸಹೃದಯಾನಂದಕರವಿವೆ ಎಂದು ನಿಸ್ಸಂಕೋಚದಿಂದ ಹೇಳಬಹುದು. ಇಂಥ ಲೇಖನ ಸಂಕಲನದಿಂದ ಸಾಹಿತ್ಯ ಪರಿಷತ್ತಿನ ಪ್ರತಿಷ್ಠೆ ಉದಿತೋದಿತವಾಗಬಹುದಲ್ಲದೆ "ಹೂಮಾಲೆ" ಯಂಥ ಕವನ ಸಂಗ್ರಹಗಳ ಪ್ರಕಟಣೆಯಿಂದಲ್ಲ. ಕನ್ನಡ ವಾಚಕರು ತಮ್ಮ ವಾಚಕತ್ವವನ್ನು ಒರೆಗೆ ಹಚ್ಚಿ ನೋಡಿಕೊಳ್ಳಬೇಕೆಂದರೆ ಇಂಥ ವಿಚಾರಗಂಭೀರ ಬರಹಗಳನ್ನು ಮೊದಲು ಕೊಂಡು ಅವಲೋಕಿಸಬೇಕು.

ರಾಜಾರಾಣಿ ದೇಖೋ

ಲೇಖಕರು – ಶ್ರೀ ಹಿರೇಮಲ್ಲೂರ ಈಶ್ವರನ್. ಪ್ರಕಾಶಕರು–ಕಲ್ಪನಾ ಗ್ರಂಥ ಪ್ರಕಾಶನ ಸಮಿತಿ ಹುಬ್ಬಳ್ಳಿ ಪುಟಗಳು ೧೦೨+೧೧. ಬೆಲೆ ರೂ. ೧–೮–೦

"ರಾಜಾರಾಣಿ ದೇಖೋ" ಪ್ರಾಧ್ಯಾಪಕ ಹಿರೇಮಲ್ಲೂರ ಈಶ್ವರನ್ನರ ನೂತನ ಕೃತಿ. ವ್ಯಕ್ತಿಚಿತ್ರಗಳ ರೂಪದಲ್ಲಿ ೧೯೪೨ ನೆಯ ಅಂದೋಲನದ ವಿವಿಧ ರೂಪಗಳನ್ನು ಚಿತ್ರಿಸುವ ಗ್ರಂಥವಿದು. ಭಾರತದ ದೇಶೀಯ ಭಾಷೆಗಳಲ್ಲಿ ೧೯೪೨ ನೆಯ ರಾಜಕೀಯ ಅಂದೋಲನದ ವಿವಿಧ ರೂಪಗಳ ಚಿತ್ರಗಳ ಸಂಗ್ರಹವು ಸಾಕಷ್ಟು ಬಂದಿತಾದರೂ ಕನ್ನಡದಲ್ಲಿ ಅದು ರೂಪಗೊಳ್ಳಲಿಲ್ಲ. ವಾರಪತ್ರಿಕೆ–ಮಾಸಪತ್ರಿಕೆಗಳಲ್ಲಿ ಕೆಲ ಕತೆಗಳು ಮಾತ್ರ ಕಾಣಿಸಿಕೊಂಡವು. ಅಂತಹ ಕೊರತೆಯನ್ನು ನಿವಾರಿಸಲು ಈಶ್ವರನ್ನರ ಈ ಗ್ರಂಥ ಪ್ರಯತ್ನಿಸಿದೆ.

ಈ ಗ್ರಂಥದಲ್ಲಿ ರಾಜಾರಾಣಿ ದೇಖೋ, ಪೋಸ್ಟಮನ್ ರಾಮಣ್ಣ, ನಿಂಗಪ್ಪಮಾಸ್ತರು, ಓಲೆಕಾರ ಬೋಲಾ, ಗುಳೇಕಾರ ಸತ್ಯಪ್ಪ, ವಿದ್ಯಾರ್ಥಿ ಪೀರಣ್ಣ, ಜೀತಗಾರ ಮುತ್ತಾ, ಕುಂಬಾರ ಮಲ್ಲಪ್ಪ ಹೀಗೆ ಎಂಟು ವ್ಯಕ್ತಿಗಳ ಚಿತ್ರಗಳನ್ನು ಕೊಡಲಾಗಿದೆ. ಈ ವ್ಯಕ್ತಿಚಿತ್ರಗಳ ಮುಖಾಂತರ ಸ್ವಾತಂತ್ರ್ಯದ ಹಿಂದಿನ ಅಳರಸರ ದಬ್ಬಾಳಿಕೆಯಿಂದ ಆಯಾ ವರ್ಗದವರ ಮೇಲುಂಟಾದ ಪರಿಣಾಮವನ್ನು ತೋರಿಸಲು ಪ್ರಯತ್ನಿಸಲಾಗಿದೆ. ನಡುನಡುವೆ ಆಗಿನ ಅಧಿಕಾರಿಗಳ ದುರ್ವರ್ತನೆಯ ಚಿತ್ರವೂ ಮೂಡಿಬರುತ್ತದೆ.

ಲೇಖಕರು ಹೆಚ್ಚು ಸಂಯಮದಿಂದ ವರ್ತಿಸಿದ್ದರೆ ಈ ಗ್ರಂಥ ಸುಂದರವಾಗಬಹುದಿತ್ತೆಂದು ನಮ್ಮ ಭಾವನೆ. ದಬ್ಬಾಳಿಕೆಯಿಂದುಂಟಾದ ರೋಷ ಕೆಚ್ಚುಗಳನ್ನು ವ್ಯಕ್ತಪಡಿಸುವದರಲ್ಲಿ ಚಿತ್ರವನ್ನು ಸುಂದರವಾಗಿ ಕೊಡಬೇಕೆಂಬುದನ್ನು ಗಮನಿಸಿಲ್ಲ. ಪ್ರತಿಯೊಂದರಲ್ಲಿಯೂ ಜೀವನದ ಒಂದೇ ಬಗೆಯನ್ನು– ಮರಣ ಇಲ್ಲವೇ ದುಃಖಾತಿರೇಕಗಳ ಪರಂಪರೆ. (Darker side of life) ಚಿತ್ರಿಸಿದ್ದಾರೆ. ಬನಶಂಕರಿ ಮತ್ತು ಅವಳ ತಂದೆ ಮಾಸ್ತರರು ಪ್ರತಿಯೊಂದು ಚಿತ್ರದಲ್ಲಿಯೂ ಕಂಡುಬರುತ್ತಿದ್ದರೂ ಅವರ ಬಗೆಗೇ ಒಂದು ಸ್ವತಂತ್ರ ಚಿತ್ರವನ್ನು ಬರೆಯಬಹುದಾಗಿದ್ದರೂ, ಲೇಖಕರು ಹಾಗೆ ಮಾಡದೆ ಎಂಟು ಚಿತ್ರಗಳಲ್ಲಿ ಅವರನ್ನು ಕಾಣಿಸಿ ಅವರ ಬಗ್ಗೆ ವಾಚಕರು ಯಾವದೇ ನಿರ್ಣಯಕ್ಕೆ ಬಾರದಂತೆ ಮಾಡಿದ್ದಾರೆ.

ಬಡವರನ್ನು ಕೇಳುವವರು ಯಾರೂ ಇಲ್ಲ, ಎಲ್ಲರೂ ದರ್ಪದಿಂದ ಅಧಿಕಾರ ನಡೆಸಿ ಬಡವರನ್ನು ತುಳಿಯುವವರು ಎಂಬ ಭಾವನೆ "ಪೋಸ್ಟಮನ್ ರಾಮಣ್ಣ" ನ ಚಿತ್ರದಿಂದ ದೊರೆಯಬಹುದಾದರೂ ಶಿಕ್ಷಕರ ಸಂಪು ಮತ್ತು ಪೋಸ್ಟಮನ್ನರ ಸಂಪು ಮತ್ತು ಅವುಗಳ ಹಿನ್ನೆಲೆಯನ್ನು ಲೇಖಕರು ಸರಿಯಾಗಿ ಚಿತ್ರಿಸಿಲ್ಲ. ಒಪ್ಪಂದ–ಒಡಂಬಡಿಕೆ ಮಾಡಿಕೊಳ್ಳುವದು ಭಾರತೀಯರ ಕಸಬೇ ಅಲ್ಲವೆಂದು ಲೇಖಕರು ಹೇಳುತ್ತ ಉದ್ದೇಶವನ್ನು ಹಿಂಸೆಯಿಂದಲೇ ಈಡೇರಿಸಿಕೊಳ್ಳಬೇಕೆಂಬ ಧ್ವನಿಮೂಡುವಂತೆ ವರ್ಣಿಸಿದ್ದಾರೆ. ಹೊಸದಾಗಿ ಸ್ವಾತಂತ್ರ್ಯಗಳಿಸಿದ ನಮ್ಮ ನಾಡು ಸಾವಧಾನವಾಗಿ ಪ್ರಗತಿ ಸಾಧಿಸಬೇಕಷ್ಟೆ. ಅದಕ್ಕೆ ಬಡವ ಸಿರಿವಂತರೆಂಬ ಭೇದವಿಲ್ಲದೆ ಅಹಿಂಸಾತ್ಮಕ ರೀತಿಯಿಂದ ನೆರವು ನೀಡಬೇಕಾದ ಸಮಯವಿದು.

ದೇಶದ ಹಿತಕ್ಕಾಗಿ ಎಲ್ಲವನ್ನು ತ್ಯಾಗ ಮಾಡಿ ದೇಶವು ಸಂಪೂರ್ಣ ಅಳಿದು ಹೋಗುವದನ್ನು ತಡೆಯಲು ನಡುಗಾಲ ಸರಕಾರ ರಚಿಸಲು ಒಪ್ಪಿದ ಧುರೀಣರನ್ನು ಅಸೆಬುರುಕರೆಂದು ಹೇಳುವದು ಸರಿಯಾಗದು. ಭಾವನೆಯ ಆವೇಶದಲ್ಲಿ ಲೇಖಕನು ಹೆಚ್ಚು ಎಚ್ಚರಿಕೆ ವಹಿಸುವದು ತೀರ ಅವಶ್ಯವಾಗಿದೆ.

ಹಿಂದೆ ಇಲ್ಲಿ ಅವರ ಒಂದು ಕೃತಿಯನ್ನು ವಿಮರ್ಶಿಸುವಾಗ್ಗೆ ದುಃಖಾತಿರೇಕವನ್ನು ಚಿತ್ರಿಸುವ ಸಾಮಗ್ರಿಯನ್ನಾಗಿ ಮಾಡಿಕೊಳ್ಳುವ ಅವರ ಒಲವಿನ ಬಗ್ಗೆ ಎಚ್ಚರಿಕೆ ಕೊಡಲಾಗಿತ್ತು. ಈಗ ಆ ಅತಿರೇಕದ ಪ್ರತಿಕ್ರಿಯೆಯೋ ಎಂಬಂತೆ ಕ್ಲೇಶಪೂರ್ಣತೆಗೆ ಅವರ ಲೇಖನಿ ಎಡೆಗೊಟ್ಟಿದೆ.

ಲೇಖಕರು ಯಾವ ವಿಷಯವನ್ನೂ ನೇರವಾಗಿ ಹೇಳುವದಿಲ್ಲ. ಸುತ್ತುಬಳಸಿ ಹೇಳುವ ಶೈಲಿಯನ್ನು ಲೇಖಕರು ಅನುಸರಿಸಿದ್ದಾರೆ. ವಿದ್ಯಾರ್ಥಿ ಪೀರಣ್ಣನ ಪರಿಚಯ ಮಾಡಿಕೊಡುವ ರೀತಿ, ಜೀತಗಾರ ಮುತ್ತಾನ ಚಿತ್ರದಲ್ಲಿಯ ಪ್ರಾರಂಭದ ರೀತಿಯನ್ನು ಇಲ್ಲಿ ಉದಾಹರಿಸಬಹುದು.

ಲೇಖಕರು, ಪೂರ್ವಿಕರು ಹೇಳಿದಂತೆ "ಶಿವೇತರಕ್ಷತಯೇ" ಎಂಬ ಸಾಹಿತ್ಯೋದ್ದೇಶವನ್ನು ಗಮನಿಸಿ ಉದ್ವೇಗಗಳರ ಸಾಹಿತ್ಯಕ್ಕಿಂತ ಕಲ್ಯಾಣಕರ ಸಾಹಿತ್ಯ ಶ್ರೇಷ್ಠವೆಂದು ಮನಗಂಡು ರಚನೆಯಲ್ಲಿ ತೊಡಗಿದರೆ ಅವರು ಇದಕ್ಕಿಂತ ಉತ್ತಮವಾದ ಕೃತಿಗಳನ್ನು ಕೊಡಬಲ್ಲರು. ಸದ್ಯಕ್ಕಂತೂ ಅವರ ಈ ಸಾಹಿತ್ಯದಲ್ಲಿ ಬೆಂಕಿಗಿಂತ ಹೊಗೆ ಹೆಚ್ಚು, ಅಂಗಿಕಟ್ಟತೆಗಿಂತ ಅರ್ಭಟ ಹೆಚ್ಚು ಎಂದು ವಿಷಾದದಿಂದ ಹೇಳಬೇಕಾಗಿದೆ.

ನಿಮಿಷಾವಲೋಕನ

ಹರಿಭಕ್ತಿಸುಧೆ: (ದ್ವಿತೀಯ ಸಂಸ್ಕರಣ) ಶ್ರೀ ರಂಗನಾಥ ರಾಮಚಂದ್ರ ದಿವಾಕರರು ಬರೆದುದು, ಪುಟ ೨೮೦, ಬೆಲೆ ೩) ರೂಪಾಯಿಗಳು. ಅಗಲೇ ಜನಪ್ರಿಯವಾದ ಈ ಪುಸ್ತಕ ಪುನರ್ಮುದ್ರಣದಲ್ಲಿ ಮತ್ತಷ್ಟು ಸಂಸ್ಕೃತವಾಗಿ ಪರಿಶುದ್ಧವಾಗಿ ಪ್ರಾಸಬಂಧದ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ ಎಂಬ ಭಕ್ತಿಯ ನವ ವಿಧ ಭಾವಗಳನ್ನು ಯುಕ್ತವಾದ ಚಿಕ್ಕ ಉಪೋದ್ಘಾತಗಳೊಂದಿಗೆ ಪ್ರಕಟವಾದ ಪರಿಷ್ಕೃತ ದಾಸರಪದಗಳ ಮೂಲಕ ಬಹಳ ಸುಂದರವಾಗಿ ಬಿಡಿಸಿಸಿದೆ. ದಪ್ಪ ಕಾಗದದಲ್ಲಿ ಅಂದವಾಗಿ ಮುದ್ರಿತವಾಗಿ ಮನೋಹರವಾದ ಮುಖಪುಟದಿಂದ ಮೆರೆವ ದಪ್ಪರಟ್ಟಿನ ಈ ಪುಸ್ತಕ ಎಲ್ಲರಿಂದಲೂ ಸಂಗ್ರಾಹ್ಯವೆನಿಸಿದೆ. ಬೇಕಾದವರು ಹುಬ್ಬಳ್ಳಿಯ ಅಧ್ಯಾತ್ಮ ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬಹುದು.

ಮೊಗವೀರ ವ್ಯವಸ್ಥಾಪಕ ಮಂಡಳಿ: ಜನತಾ ಸೇವೆಯನ್ನು "ಜನಾರ್ದನ" ಸೇವೆಯೆಂದು ತಿಳಿದ ಮುಂಬಯಿಯ ಮೊಗವೀರ ಮಂಡಳಿ ನಲ್ವತ್ತಾರನೆಯ ವಾರ್ಷಿಕ ವರದಿಯನ್ನು ಈಗ ಪ್ರಕಟಿಸಿದೆ. ೮೫ ಪುಟಗಳ ಈ ವರದಿಯಲ್ಲಿ ಮಂಡಳಿಯ ಹಲವಾರು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಗತಿಯನ್ನು ಕಾಣಬಹುದು. ಕನ್ನಡದ ಕಡಲಮಗರಾದ ಇವರ ಸಾಹಸ ಪ್ರೋತ್ಸಾಹಾರ್ಹವಾಗಿದೆ.

ಸಹ್ಯಾದ್ರಿ: ಕೊಡಗಿನ ಪೊನ್ನಂಪೇಟೆಯಿಂದ ಹೊರಡುವ ಹೊಸ ಮಾಸಿಕವಿದು. ಶ್ರೀ ಎಂ. ಬಿ. ಮುತ್ತಣ್ಣನವರು ಸಂಪಾದಕರು. ವಾರ್ಷಿಕ ಚಂದಾ ಮೂರು ರೂಪಾಯಿಗಳು, ಬಿಡಿ ಸಂಚಿಕೆಗೆ ಪಾಲ್ಕಾಣೆ. ಬಾಬೂ ರಾಜೇಂದ್ರ ಪ್ರಸಾದರ ಚಿತ್ರವನ್ನು ಹೊತ್ತ ಮೇಲೋಲೆಯ ಈ ಮಾಸಿಕದಲ್ಲಿ ವಿಚಾರಣೀಯವಾದ ಕೆಲ ಲೇಖನಗಳಿವೆ. ಕೊಡಗಿನ ಬೆಡಗಿನ ಶೈಲಿಯ ಪದ್ಯವೂ ಒಂದಿದೆ. ಸಂಪಾದಕೀಯ "ಸಂಯುಕ್ತ ಕರ್ನಾಟಕ"ದಿಂದ ಹಲವಾರು ಅವತರಣಿಕೆಗಳನ್ನು ಉದ್ಧರಿಸಿದೆ. ಹೊಸ ಸಹೋದ್ಯಮಿಗೆ ಶುಭದ ಹಾರೈಕೆ.

ಕನ್ನಡಗುಡಿ: ಹಲಗೂರಿನ "ಜ್ಞಾನೋಪಾಸಕರು" ಬರೆದ ೪೭ ಪುಟದ ಪತ್ತಾಣೆ ಬೆಲೆಯ ಈ ಪುಸ್ತಕವನ್ನು ದಳವಾಯಿ ಕೋಡಿಹಳ್ಳಿಯ ಸೇವಾ ಮಂದಿರದ ಶ್ರೀ ಸುಬ್ಬಣ್ಣನವರು ಪ್ರಕಟಿಸಿದ್ದಾರೆ. ಇದರಲ್ಲಿ ಕನ್ನಡ ನಾಡಿನ ಐತಿಹಾಸಿಕ ಮೇಲ್ಮೆಯನ್ನು ಕೊಂಡಾಡ

(೧೨ನೆಯ ಪುಟಕ್ಕೆ)

ಜೂನ ೨೭ ರಿಂದ ಜುಲೈ ೩ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ಅಶ್ವಿನೀವು ಮೊದಲಾದ ಕೆಲ ಚಿಲ್ಲರೆ ಅಶಾಂತಿಗಳನ್ನು ಬಿಟ್ಟರೆ ನಿಮ್ಮ ಪ್ರಕೃತಿ ಈ ವಾರ ಚನ್ನಾಗಿಯೇ ಇರುವದು. ಹೆಂಡತಿಯ ಆರೋಗ್ಯವೂ ಸರಿಯಾಗಿದ್ದರೂ ಮಕ್ಕಳ ವರ್ತನೆ ಅಷ್ಟು ತೃಪ್ತಿಕರವಿರಲಿಕ್ಕಿಲ್ಲ. ಆದರೆ ನಾಟಕ ಸುಖ, ಪ್ರಿಯಜನರ ಸಹವಾಸಾದಿಗಳಿಂದ ಮನಸ್ಸು ಉಲ್ಲಾಸಗೊಳ್ಳುವದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಗೆ ಕುಂದು ತರಬಹುದಾದ ಸಂಗತಿಗಳಿಗೆ ಎಡೆಗೊಡದಂತೆ ಎಚ್ಚರವಾಗಿರಿ. ವಾದ ಸ್ಪರ್ಧೆಗಳಲ್ಲಿ ಯಶಸ್ಸು ದೊರೆತರೂ ಶತ್ರುಗಳು ನಿಮ್ಮವರಲ್ಲೊಬ್ಬರೊಡನೆ ಪಿತೂರಿ ನಡೆಸಲು ಹವಣಿಸಬಹುದು. ಭೆಟ್ಟಿಗಿಂತ ಪತ್ರವ್ಯವಹಾರ ಲೇಸು. ಪ್ರವಾಸ ನಿರಾತಂಕ. ತಾ. ೨೭, ೨೮, ೨೯ ಅನುಕೂಲ.

ವೃಷಭ

ನಿಮ್ಮೆಲ್ಲರ ಪ್ರಕೃತಿಯೂ ಚನ್ನಾಗಿದ್ದರೂ ಮಕ್ಕಳ ವರ್ತನೆ ಅಷ್ಟು ಸರಿಬೀಳದು. ಆದರೆ ಇತರ ಪ್ರಾಪಂಚಿಕ ಸುಖಗಳಿಗೇನೂ ಕೊರತೆಯಿಲ್ಲ. ಉದ್ಯೋಗದಲ್ಲಿ ಲಾಭ ಪ್ರತಿಷ್ಠೆ ಉತ್ತಮವಾಗಿರುವದಲ್ಲದೆ ಸರ್ವಕಾರ್ಯಗಳಲ್ಲಿಯೂ ಜಯಶಾಲಿಗಳಾಗುವಿರಿ. ನೆರೆಹೊರೆಯವರು ಬೇಕೆಂದು ಕುಚೇಷ್ಟೆಮಾಡಿ ನಿಮ್ಮನ್ನು ಸಿಟ್ಟಿಗೆಬ್ಬಿಸಬಹುದು. ವಾದ ಸ್ಪರ್ಧೆಗಳಲ್ಲಿ ನಿಮ್ಮ ಪಕ್ಷಕ್ಕೇ ಅನುಕೂಲತೆ. ಪ್ರವಾಸ ದೂರದ್ದಾದರೂ ಸುಖಕರ. ಮಾತಿನಲ್ಲಿ ತಪ್ಪು ತಿಳುವಳಿಕೆಯಿಂದ ಮನಃಕ್ಲೇಶವುಂಟಾಗುವ ಸಂಭವವಿರುವದರಿಂದ ಪತ್ರವ್ಯವಹಾರದಿಂದಲೇ ಕೆಲಸ ಸಾಧಿಸುವದೊಳ್ಳಿತು. ರೋಹಿಣಿ ನಕ್ಷತ್ರದವರಿಗೆ ಅಷ್ಟು ಅನುಕೂಲ ಕಾಲವಲ್ಲ. ತಾ. ೨೭, ೨೮, ೨೯, ೩ ಹಿತಕರ.

ಮಿಥುನ

ಗಂಡ ಹೆಂಡಿರಿಬ್ಬರಿಗೂ ಪ್ರಕೃತಿ ಅಷ್ಟು ಸೌಖ್ಯವಾಗಿರದಿದ್ದರೂ ನಿಮ್ಮೊಳಗಿನ ಅನ್ಯೋನ್ಯತೆ, ಕುಟುಂಬದೊಳಗಿರುವ ಸಾಮರಸ್ಯಗಳು ಬಂಧುಗಳಲ್ಲಿ ಕೂಡ ಮತ್ಸರವನ್ನುಂಟು ಮಾಡುವಂತಿರುವವು. ಆದರೆ ನಿಮ್ಮ ಆರ್ಥಿಕ ಸ್ಥಿತಿಯನ್ನು ಮಾತ್ರ ನೀವು ಕಣ್ಣಲ್ಲಿ ಎಣ್ಣೆಹಾಕಿಕೊಂಡು ಕೆಲವಾರಗಳ ತನಕ ನೋಡಿಕೊಳ್ಳುತ್ತಿರಬೇಕು. ಉದ್ಯೋಗದಲ್ಲಿ ಪ್ರತಿಷ್ಠೆಗೂ ಲಾಭಕ್ಕೂ ಇಳಿಗಾಲ ಬರಲಿರುವದಲ್ಲದೆ ತುಂಬ ಖರ್ಚು ಕೂಡ ಗಂಟುಬೀಳಬಹುದು. ಖರ್ಚಿನಿಂದಾದರೂ ಇಷ್ಟಾರ್ಥ ಸಿದ್ಧಿಯಾಗುವದರಿಂದ ಸಮಾಧಾನಗೊಳ್ಳುವಿರಿ. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಸುಳ್ಳುಸೊಟ್ಟು ಮಾತಾಡುವ ಮತ್ತು ಬರೆಯುವ ಬುದ್ಧಿಯನ್ನು ಬಿಟ್ಟರೆ ನಿಮಗೇ ಹಿತ. ಪ್ರವಾಸ ಸುಖಕರ. ಭೆಟ್ಟಿ ಮತ್ತು ಪತ್ರವ್ಯವಹಾರ ಎರಡೂ ಅಷ್ಟಕ್ಕಷ್ಟೆ. ಆರ್ದ್ರೆಗೆ ತೊಂದರೆಗಳು ಕಡಿಮೆ. ತಾ. ೨೭, ೨೮, ೨೯ ಅನುಕೂಲ.

ಕರ್ಕ

ಸುಖ ದುಃಖಗಳೆರಡೂ ಸ್ಥಿರವಲ್ಲವೆಂದರಿತು ನೀವು ಧೈರ್ಯವನ್ನವಲಂಬಿಸಬೇಕು. ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅಷ್ಟು ಸುಖವಾಗಿರದು. ಅಲ್ಲದೆ ಒಲ್ಲದ ಜನರ ಸಹವಾಸದಿಂದ ಮನಸ್ಸು ಬೇಸತ್ತು ಹೋಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಕ್ಕೇನೂ ದಾರಿದ್ರ್ಯವಿಲ್ಲದಿದ್ದರೂ ಖರ್ಚು ಒಂದಕ್ಕೊಂದು ಮೀರಿ. ಆಹಾರ ವಿಹಾರದಲ್ಲಿ ಎಚ್ಚರಿಕೆ. ಏಕೆಂದರೆ ನಿಮ್ಮ ಅಸ್ವಸ್ಥತೆಗೆ ಅದೇ ಬೀಜವಾಗುವಂತಿದೆ. ವಾದಸ್ಪರ್ಧೆಗಳಲ್ಲಿ ಏನೂ ವಿಶೇಷ ಸಂಗತಿಯುಳ್ಳ. ಪ್ರವಾಸಾದಿ ಕಾರ್ಯಗಳು ಕಷ್ಟಸಾಧ್ಯ. ಪುಷ್ಯಕ್ಕೆ ತೊಂದರೆ ಕಡಿಮೆ. ತಾ. ೨೮, ೨೯, ೨, ೩ ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಚನ್ನಾಗಿದ್ದರೂ ಮಕ್ಕಳಿಗೆ ಅಲ್ಪಸ್ವಲ್ಪ ಕ್ಲೇಶ. ಹೆಂಡತಿಯೊಡನೆ ಮತಭೇದವಾಗದಂತೆ ಜಾಗರೂಕತೆಯಿಂದ ವರ್ತಿಸಿರಿ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಗೆ ಏನಾದರೂ ತೊಂದರೆ ಬರಬಹುದು. ವಾದ ಸ್ಪರ್ಧೆಗಳಲ್ಲಿ ಅನಪೇಕ್ಷಿತ ವೇಳೆಯಲ್ಲಿ ಹಿಂದೆ ಸರಿಯುವ ಪೇಚಿನ ಪ್ರಸಂಗ. ಮಿತ್ರರು ಶತ್ರುಗಳಂತೆ ವರ್ತಿಸುವರು. ಪ್ರವಾಸಕ್ಕೆ ಅಡ್ಡಿಯಿಲ್ಲ, ಭೆಟ್ಟಿಗಿಂತ ಪತ್ರವ್ಯವಹಾರ ನೆಟ್ಟಗೆ. ಪೂರ್ವಾ ನಕ್ಷತ್ರದವರು ವಿಶೇಷ ಸಹನಶೀಲತೆಯನ್ನು ತೋರಿಸಬೇಕಾಗುವದು. ತಾ. ೨೭, ೨, ೩, ಅನುಕೂಲ.

ಕನ್ಯಾ

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಹೆಂಡತಿಯದು ಸ್ವಲ್ಪ ಕೆಡಬಹುದಲ್ಲದೆ ಅವಳಿಗೆ ನಿಮ್ಮಲ್ಲಿ ಆಗಾಗ್ಗೆ ಸಂಶಯ ಉತ್ಪನ್ನವಾಗಬಹುದು. ಉಳಿದ ವಿಷಯದಲ್ಲಿ ಅನುಕೂಲವೇ. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ, ಚನ್ನಾಗಿರುವದು. ಆದರೆ ಖರ್ಚು ದಿನದಿನಕ್ಕೆ ಬೆಳೆಯುವದು. ವಾದ ಸ್ಪರ್ಧೆಗಳಲ್ಲಿ ಇದ್ದಕ್ಕಿದ್ದಂತೆ ಪ್ರವಾಸಾದಿ ಕಾರ್ಯಗಳಿಗೆ ಅನುಕೂಲ. ಹಸ್ತಾ ನಕ್ಷತ್ರಕ್ಕೆ ತುಸು ತೊಡಕು ಹೆಚ್ಚು. ತಾ. ೨೭, ೨೮, ೨೯, ೩ ಹಿತ.

ತುಲಾ

ನಿಮ್ಮ ಹೆಂಡತಿಯ ಪ್ರಕೃತಿ ಚಿಂತಾಜನಕವಾಗುವಷ್ಟು ಕೆಡಬಹುದು. ಮನೆಯಲ್ಲಿ ಎಲ್ಲರೂ ಏನೋ ಒಂದು ತರವಾಗಿ ವರ್ತಿಸುವರು. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ ಚನ್ನಾಗಿರುವದು. ಬಂಧುಗಳು ನಿಮಗೆ ತುಂಬ ಅವಶ್ಯವಾದ ವಸ್ತುವನ್ನು ಬೇಡಿ ನಿಮ್ಮನ್ನು ಉಭಯಸಂಕಟಕ್ಕೆ ಗುರಿಮಾಡಬಹುದು. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ತುಸು ಸಮಾಧಾನದ ರೀತಿಯನ್ನೆ ಪ್ರಕಟಿಸುವವು. ಪ್ರವಾಸ ಪತ್ರವ್ಯವಹಾರಗಳಿಗೆ ಕಾಲ ಅನುಕೂಲವಲ್ಲವಾದರೂ ಭೆಟ್ಟಿಗೆ ಅಡ್ಡಿಯಿಲ್ಲ. ಸ್ವಾತಿಗೆ ಅಷ್ಟು ತೊಂದರೆಯಿಲ್ಲ. ತಾ. ೨೭, ೨೮, ೨೯, ೩೦ ಅನುಕೂಲ.

ವೃಶ್ಚಿಕ

ದಂಪತಿಗಳಿಬ್ಬರ ಆರೋಗ್ಯವೂ ಸರಿಯಾಗಿದ್ದರೂ ಯಾವುದೋ ಒಂದು ಚಿಂತೆ ಇಬ್ಬರ ಮನವನ್ನು ಕೊರೆಯುವುದು. ಮಕ್ಕಳ ಉನ್ನತಿಯಾದರೂ ಅವರ ವರ್ತನೆ ಸರಿಹೋಗುವದಿಲ್ಲ. ಆರ್ಥಿಕ ದೃಷ್ಟಿಯಿಂದ ನಿಮಗೀ ವಾರ ಅನುಕೂಲವೆ. ಪ್ರತಿಷ್ಠೆ ಕಡಿಮೆಯಾದರೂ ಉದ್ಯೋಗದಲ್ಲಿ ಲಾಭ ಚನ್ನಾಗಿರುವದು. ವಾದ ಸ್ಪರ್ಧೆಗಳಲ್ಲೂ ನಿಮ್ಮ ಕೈಯೇ ಮೇಲು. ಮಿತ್ರರ ರೀತಿಯೆ ಅಷ್ಟು ಯೋಗ್ಯವಾಗಿರದು. ಪ್ರವಾಸಕ್ಕೆ ಅನುಕೂಲವಲ್ಲ. ಭೆಟ್ಟಿಯಾಗದಿರುವದೇ ಲೇಸು. ಪತ್ರವ್ಯವಹಾರಕ್ಕೆ ಅಡ್ಡಿಯಿಲ್ಲ. ಅನುರಾಧೆಗೆ ದುಷ್ಫಲಗಳ ಕಾಟ ಕಡಿಮೆ. ತಾ, ೨೮, ೨೯, ೨, ೩ ಅನುಕೂಲ.

ಧನು

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಹೆಂಡತಿ ಮಕ್ಕಳದು ಅಷ್ಟು ಸರಿಯಾಗಿರದು; ಬಂಧುಗಳಲ್ಲೊಬ್ಬನ ಅಕೃತ್ಯದ ಕಾರಣದಿಂದ ನಿಮಗೆ ಜನರಲ್ಲಿ ತಲೆಯೆತ್ತಿ ನಡೆಯದಂತಾಗುವುದು. ಹೊಲ ಮನೆಗಳಿಗೆ ಪ್ರಕೃತಿಕೋಪದಿಂದ ಹಾನಿಯೊದಗಬಹುದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆ ಚೂರುಚೂರಾಗಬಹುದೆಂಬ ಭೀತಿಯಿಂದ ನಡುಗುವಿರಿ. ಅಲ್ಪ ಸ್ವಲ್ಪ ಅನಿರೀಕ್ಷಿತ ಲಾಭ ಬರುವ ಯೋಗವುಂಟು. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿಯಿದ್ದರೂ ಶತ್ರುವಿಗೆ ಹೊರಹೊರಗೇ ಅಷ್ಟಿಷ್ಟು ಹಾನಿಯಾಗುವದು. ಪರಸ್ತ್ರೀಯ ವಿಷಯದಲ್ಲಿ ದುರ್ಬುದ್ಧಿಯನ್ನು ತೊರೆಯಿರಿ. ಪ್ರವಾಸ ಸುಖಕರ. ಭೆಟ್ಟಿ ಪತ್ರವ್ಯವಹಾರ ಫಲದಾಯಕವಲ್ಲ. ಪೂರ್ವಾಷಾಢಾ ನಕ್ಷತ್ರದವರಿಗೆ ತೊಂದರೆ ಹೆಚ್ಚು. ತಾ. ೩೦, ೧, ೨ ಅನುಕೂಲ.

ಮಕರ

ನಿಮ್ಮೆಲ್ಲರ ಪ್ರಕೃತಿಯೂ ಅಷ್ಟಕ್ಕಷ್ಟೆ. ಆದರೆ ಉಳಿದ ಸಂಗತಿಗಳು ಅನುಕೂಲ. ಒಂದು ಧಾರ್ಮಿಕ ಕೃತ್ಯವಾದೀತು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ಇಚ್ಛೆಯಂತೆ. ವೆಚ್ಚ ಸ್ವಲ್ಪ ಹೆಚ್ಚಾದರೂ ಉದ್ದೇಶ ಸಫಲವಾಗುವದು. ವಾದ ಸ್ಪರ್ಧೆಗಳಲ್ಲಿ ನಿಮಗೇನೂ ವಿಶೇಷ ಪ್ರಗತಿ ದೊರೆಯದಿದ್ದರೂ ಶತ್ರುವಿಗೆ ಹೊರ ಹೊರಗೇ ಹಾನಿ ತಟ್ಟುವದು. ಪ್ರವಾಸಾದಿ ಕಾರ್ಯಗಳು ಸಾಧಾರಣ ಚನ್ನಾಗಿಯೆ ನೆರವೇರುವವು. ಶ್ರವಣಕ್ಕೆ ತೊಂದರೆ ಹೆಚ್ಚು. ತಾ. ೨೮, ೨೯, ೨, ೩ ಅನುಕೂಲ.

ಕುಂಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಆಗಾಗ್ಗೆ ಕ್ಲೇಶಗಳು. ಅಲ್ಲದೆ ಅಪ್ರಿಯ ಜನರ ಸಹವಾಸದಿಂದ ಎಲ್ಲರೂ ಅಸಂತುಷ್ಟರಾಗಿರುವರು. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಅಷ್ಟಕ್ಕಷ್ಟೇ. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ಇದ್ದಲ್ಲೇ ಇರುವುವು. ಪ್ರವಾಸ ತೊಂದರೆಯದು. ಭೆಟ್ಟಿ ಪತ್ರವ್ಯವಹಾರ ಅನುಕೂಲ. ಶತತಾರೆಗೆ ಇದ್ದದ್ದರಲ್ಲಿ ಒಳ್ಳೆಯದು. ತಾ. ೨೭, ೩೦, ೧ ಹಿತ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಎಣಿಕೆ ಮೀರಿದಷ್ಟು ದೊರೆಯುವದು ಖರ್ಚು ಲೆಕ್ಕ ಮೀರಿದ್ದೆ. ವಾದ ಸ್ಪರ್ಧೆಗಳಲ್ಲಿ ಜಯ. ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರಾಭಾದ್ರಕ್ಕಂತೂ ತುಂಬ ಸುಯೋಗ. ತಾ. ೨೮, ೨೯, ೨, ೩ ಅನುಕೂಲ.

ಸ್ಟರ್ಲಿಂಗ್ ಶಿಲ್ಕುಗಳ ಮಾತುಕತೆ

(೭ ನೆಯ ಪುಟದಿಂದ)

ನಾವು ಆ ಸಮಯದಲ್ಲಿ ಸಡಿಲುಗೈಯಿಂದ ವರ್ತಿಸಿದೆವು. ಈ ಕಾರಣದಿಂದಲೂ ನಮ್ಮ ಶಿಲ್ಕು ನಿರೀಕ್ಷೆಮೀರಿ ಕರಗಿತು. ನಾವು ಬ್ರಿಟನ್ ಮತ್ತು ಇತರ ಸ್ಟರ್ಲಿಂಗ್ ಪ್ರದೇಶಗಳಿಂದ ತರಿಸಿದ ವಸ್ತುಗಳಲ್ಲಿ ಕೆಲ ವಿಲಾಸವಸ್ತುಗಳೂ ಇದ್ದವು. ಅವನ್ನು ಸುಲಭವಾಗಿ ನಾವು ಪ್ರತಿಬಂಧಿಸಬಹುದಿತ್ತು. ಆದರೆ ಈ ದೇಶದೊಳಗಿನ ಅತಿಪ್ರಸರಣಸ್ಥಿತಿಯನ್ನು ಹಿಡಿತಕ್ಕೆ ತರುವದಕ್ಕೆ ಸಹಕಾರಿಯಾದೀತು ಮತ್ತು ಬ್ರಿಟನ್ನಿನ ಪುನರುಜ್ಜೀವನಕ್ಕೂ ಅನುಕೂಲವಾದೀತೆಂದು ನಾವು ಆ ಮಾರ್ಗವನ್ನನುಸರಿಸಲಿಲ್ಲ. ಹೆಚ್ಚು ಸ್ಟರ್ಲಿಂಗುಗಳನ್ನು ವಿಮೋಚಿಸದಿದ್ದರೆ ನಾವು ಆಯಾತವನ್ನು ಬಿಗಿಹಿಡಿಯಬೇಕಾದೀತೆಂದು ಇಲ್ಲಿಗೆ ಬಂದ ಬ್ರಿಟಿಶ ಸ್ಟರ್ಲಿಂಗ್ ಶಿಷ್ಟಮಂಡಲಕ್ಕೆ ಭಾರತೀಯ ಅರ್ಥಶಾಖೆಯವರು ಹೇಳಿತೋರಿಸಿದ್ದರು. ಆದರೆ ಆ ಬಗ್ಗೆ ಬ್ರಿಟಿಶ್ ಸರಕಾರದಿಂದ ಏನೂ ಉತ್ತರ ಬಂದಿಲ್ಲ. ಬ್ರಿಟನ್ನು ನಮ್ಮೀ ಸ್ಥಿತಿಯನ್ನು ಮನಗಂಡು ತಕ್ಕಂತೆ ವರ್ತಿಸಬೇಕೆಂದು ಈಗ ಒತ್ತಾಯ ಮಾಡಬೇಕಾಗಿದೆ.

ನಾಲ್ಕು ವಿಚಾರಗಳು

ನಮ್ಮ ಶಿಷ್ಟಮಂಡಲ ಬ್ರಿಟಿಶ ಬೊಕ್ಕಸದವರಿಗೆ ನಾಲ್ಕು ಬಗೆಯ ಸೂಚನೆಗಳನ್ನು ಮಾಡುವದೆಂದು ನಂಬಲಾಗಿದೆ:

೧) ದುಷ್ಕರ ವಿನಿಮಯದ ರಾಷ್ಟ್ರಗಳೊಡನೆ ವಿನಿಮಯಕ್ಕೆ ಅನುಕೂಲವಾಗುವಂತೆ ಆ ಬಗ್ಗೆ ಹೆಚ್ಚು ಸ್ಟರ್ಲಿಂಗ್ ವಿಮೋಚನೆಯಾಗಬೇಕು. ನಾವು ಆಹಾರ ಧಾನ್ಯಗಳೇ ಮೊದಲಾದ ಅನಿವಾರ್ಯ ವಸ್ತುಗಳನ್ನು ದುಷ್ಕರ ವಿನಿಮಯದ, ಅಂದರೆ ಅಮೇರಿಕೆಯೆ ಮೊದಲಾದ ಡಾಲರ್ ನಾಣ್ಯದ ಕ್ಷೇತ್ರಗಳಿಂದಲೇ ಹೆಚ್ಚಾಗಿ ತರಿಸಬೇಕಾಗಿದೆ. ಈ ಬಗ್ಗೆ ಷಣ್ಮುಖಂ ಒಡಂಬಡಿಕೆಯನ್ವಯ ನಮಗೆ ಬರಿ ೧೫೦ ಲಕ್ಷ ಪೌಂಡು ಮಾತ್ರ ದೊರೆಯುವದು. ಆದರೆ ಆಹಾರಾಯಾತದ ನಿಮಿತ್ತ ನಮಗೆ ಈ ವರ್ಷ ೨೦೦೦ ಲಕ್ಷ ಡಾಲರುಗಳ ಕೊರತೆಯಂತೂ ಬಂದೇಬರುವದು. ಮುಂದಿನ ವರ್ಷವಾದರೂ ೧೫೦೦ ಲಕ್ಷ ಡಾಲರ ಕೊರತೆ ಬರಬಹುದೆಂದು ಗಣಿಸಲಾಗಿದೆ. ಆದ್ದರಿಂದ ಷಣ್ಮುಖಂ ಒಡಂಬಡಿಕೆಯಲ್ಲಿ ಕಾಣಿಸಿದ್ದಕ್ಕಿಂತ ಹೆಚ್ಚು ಸ್ಟರ್ಲಿಂಗುಗಳನ್ನು ಡಾಲರುಗಳಾಗಿ ಪರಿವರ್ತಿಸಲು ಬ್ರಿಟನ್ನು ಒಪ್ಪಬೇಕು.

೨) ಸ್ಟರ್ಲಿಂಗ್ ಪ್ರದೇಶದಲ್ಲಿ ವೆಚ್ಚ ಮಾಡಬಹುದಾದ ವಾರ್ಷಿಕ ಧನವಿಮೋಚನೆಯನ್ನೂ ಹೆಚ್ಚಿಸಬೇಕು. ಈಗ ಹಿಂದಿನ ೮೦೦ ಲಕ್ಷವಲ್ಲದೆ ೧೯೪೮-೫೧ ರ ವರೆಗೆ ೮೦೦ ಲಕ್ಷ ಸ್ಟರ್ಲಿಂಗುಗಳನ್ನು ಬಳಸಲು ಅನುಮತಿ ದೊರೆತಿತ್ತು. ಆದರೆ ಈಗಾಗಲೆ ತೋರಿಸಿಕೊಟ್ಟಂತೆ ಇದು ಸಾಲದೆ ಒಂದೇ ವರ್ಷದಲ್ಲಿ ೧೨೨೦ ಲಕ್ಷ ಪೌಂಡುಗಳನ್ನು ತೆಗೆದುಕೊಳ್ಳಲಾಗಿದೆ. ಭಾರತದ ಆರ್ಥಿಕ ಪರಿಸ್ಥಿತಿ ಸಂಕಟದಲ್ಲಿ ಸಿಕ್ಕಿದ್ದು ಅದನ್ನು ಹಿಡಿತಕ್ಕೆ ತರುವ ಸಲುವಾಗಿ ಬ್ರಿಟನ್ನು ಇನ್ನೂ ವರ್ಷಕ್ಕೆ ೮೦೦ ಲಕ್ಷ ಪೌಂಡುಗಳಂತೆ ಹೆಚ್ಚು ಶಿಲ್ಕನ್ನು ವಿಮೋಚನೆಗೊಳಿಸಬೇಕು.

೩) ಈಗಾಗಲೆ ಹೆಚ್ಚು ವೆಚ್ಚ ಮಾಡಿರುವ ೮೨೦ ಲಕ್ಷ ಸ್ಟರ್ಲಿಂಗು ಬ್ರಿಟಿಶ ನಿರ್ಯಾತ ಯೋಜನೆಗೆ ಸಹಾಯ ಮಾಡಲಿಕ್ಕಾಗಿಯೆ ಅದ್ದರಿಂದ ಅದನ್ನು ಈ ವರ್ಷದ ಲೆಕ್ಕಕ್ಕೆ ಹಿಡಿಯದೆ ಅಮಾನತ್ ಇಡಬೇಕು.

೪) ಯಾಂತ್ರಿಕ ಸಾಮಗ್ರಿಗಳನ್ನು ಕೊಳ್ಳಲು ಬ್ರಿಟನ್ನು ಭಾರತಕ್ಕೆ ನೆರವಾಗಬೇಕು. ಭಾರತದ ವಿಭಜನೆಯಿಂದುಂಟಾದ ವಿದೇಶ ವಿನಿಮಯ ಕೊರತೆಯು ತಾತ್ಕಾಲಿಕವಾಗಿರದೆ ಶಾಶ್ವತ ಸ್ವರೂಪದ್ದಾಗುವ ಲಕ್ಷಣವಿದೆ. ಪಾಕಿಸ್ತಾನದಲ್ಲಿ ಸೆಣಬಿನ ಗಿರಣಿಗಳು ಸ್ಥಾಪಿಸಲ್ಪಟ್ಟರಂತೂ ಇದು ಇನ್ನಷ್ಟು ಗಂಭೀರವಾಗಬಹುದು. ಇದಕ್ಕೆ ನಮ್ಮ ಉತ್ಪಾದನೆಯನ್ನೂ ನಿರ್ಯಾತವನ್ನೂ ಹೆಚ್ಚಿಸಿ ಆಯಾತವನ್ನು ಕಡಿಮೆ ಮಾಡುವದೊಂದೇ ಉಪಾಯ. ೧೯೫೧ ರೊಳಗೆ ಆಹಾರಾಯಾತವನ್ನು ನಿಲ್ಲಿಸಿಬಿಡುವ ಪ್ರಯತ್ನದಲ್ಲಿ ನಾವಿದ್ದೇವೆ. ಇದಕ್ಕಾಗಿಯೂ ಇತರ ಉತ್ಪಾದನೆಗೂ ನಮಗೆ ಯಂತ್ರ ಸಾಮಗ್ರಿಗಳು ಹೆಚ್ಚು ಬೇಕು. ಅದನ್ನು ಪೂರೈಸಲಿಕ್ಕಾಗಲಿ ಕೊಳ್ಳುವ ಪ್ರಯತ್ನಕ್ಕಾಗಲಿ ಬ್ರಿಟನ್ನು ಈ ವರೆಗೆ ವಿಶೇಷ ಸಹಾಯ ಮಾಡಿಲ್ಲ. ದಿನಬಳಕೆಯ ಸಾಮಗ್ರಿಗಳನ್ನಷ್ಟೆ ಅದು ಪೂರೈಸಿದೆ. ಈ ಧೋರಣೆ ಇನ್ನು ಬದಲಾಗಬೇಕು.

ಭಾರತವಿಂದು ಕಾಮನ್‌ವೆಲ್ತಿನಲ್ಲಿ ಉಳಿಯಲು ನಿರ್ಧರಿಸಿ ಬಿಟ್ಟಿದೆ. ಅದರಿಂದ ಅದರ ಸುಖದುಃಖಗಳನ್ನು ಗಮನಿಸುವದೂ ಬ್ರಿಟನ್ನಿನ ಕರ್ತವ್ಯವಾಗಿದೆ. ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಹದಕ್ಕೆ ತಂದಲ್ಲದೆ ಏಶಿಯದಲ್ಲಿ ಶಾಂತಿಯನ್ನು ಸ್ಥಾಪಿಸುವದಸಾಧ್ಯವೆಂದು ಬ್ರಿಟನ್ನು ಗಮನಿಸಬೇಕಾಗಿದೆ.

---

* ರುಮೇನಿಯದ ಗಲಟ್ಸ ಎಂಬಲ್ಲಿ ಪಾಕಿಸ್ತಾನದ ಪ್ರಜೆ ಅಮಿನ್ ಮಿಯಾನ್ ಎಂಬವನಿಗೆ ಒಬ್ಬ ಪಹರೆಯವನು ಗುಂಡಿಕ್ಕಿದನೆಂದು ತಿಳಿದು ಬಂದಿವೆ. ಇದನ್ನು ಕೂಡಲೆ ವಿಚಾರಿಸಬೇಕೆಂದು ರುಮೇನಿಯದಲ್ಲಿರುವ ಬ್ರಿಟಿಶ್ ರಾಯಭಾರಿ ಮಂತ್ರಿ ಅಲ್ಲಿಯ ವಿದೇಶ ಮಂತ್ರಿಶಾಖೆಗೆ ಬಿನ್ನವಿಸಿಕೊಂಡಿದ್ದಾನೆ. ಗುಂಡಿನೇಟಿಗೆ ತುತ್ತಾದ ಆ ಪಾಕಿಸ್ತಾನದ ಮನುಷ್ಯ ಆಗಿಂದಾಗ ಪರಲೋಕವಾಸಿಯಾದನು.

ಹರಿಜನ ಲೇಖ

ಅಗ್ರಲೇಖ

ಸಾರ್ವಜನಿಕ ಬಿಡುವುಗಳು

[ವಾರದ ಮುಖ್ಯ ಪ್ರಬಂಧವೆಂದು ಮಾಡಲು ಈ ಕೆಳಗಿನ ವಿಷಯ ಯೋಗ್ಯವಾಗಿದೆ. ಕಿ. ಘ. ಮ.]

ನಮ್ಮ ಉದ್ಯಮಗಳ ಉತ್ಪಾದನೆಯನ್ನು, ಕಾರ್ಯಾಲಯಗಳಲ್ಲಿಯ ಕೆಲಸವನ್ನು ಮತ್ತು ಶಾಲೆಯ ಮಕ್ಕಳ ವಿದ್ಯಾಭ್ಯಾಸವನ್ನು ಹೆಚ್ಚಿಸಲು ಸರಕಾರ ಬಹಳ ಲವಲವಿಕೆಯುಳ್ಳದ್ದಾಗಿದೆ; ಆದರೆ ಅದು ಇಡಿ ರಾಷ್ಟ್ರ ತೆಗೆದುಕೊಳ್ಳಬೇಕಾದ ಬಿಡುವಿನ ದಿನಗಳಸಂಖ್ಯೆಯತ್ತ ಲಕ್ಷ್ಯವಿತ್ತಿಲ್ಲ. ನಮ್ಮಲ್ಲಿರುವಷ್ಟು ಹೆಚ್ಚು ರಜೆಗಳು ಜಗತ್ತಿನಇನ್ನಾವ ಪ್ರಗತಿಪರ ದೇಶದಲ್ಲೂ ಇಲ್ಲ. ಪ್ರತಿಯೊಂದು ಜಾತೀಯ ರಜೆಯನ್ನೂ ಇಡಿ ರಾಷ್ಟ್ರದ ಬಿಡುವಿನ ದಿನವೆಂದು ಗಣಿಸುವುದು ಸಮರ್ಥನೀಯವಲ್ಲ. ಮಹಾಪುರುಷರು ದೇಶಕ್ಕೆ ಸಲ್ಲಿಸಿದ ನಿಸ್ವಾರ್ಥಸೇವೆಯನ್ನು ನೆನಪಿಗೆ ತಂದುಕೊಳ್ಳಲು, ಮತ್ತು ಅದೇ ಬುದ್ಧಿಯಿಂದ ಅವರನ್ನುಅನುಸರಿಸಲು ಹೊಸ ಮನೋನಿರ್ಧಾರಕ್ಕೆ ಬರಲು ಯಾವುದಾದರೊಂದು ಸಾಮಾಜಿಕ ಸೇವೆಯ ಕಾರ್ಯಕ್ರಮವನ್ನು ಕೈಕೊಳ್ಳಲು ನಾವು ಅವರ ವರ್ಧಂತಿ ಮತ್ತು ಪುಣ್ಯತಿಥಿಗಳನ್ನು ಆಚರಿಸುತ್ತೇವೆ. ಅಂಥ ಸಂದರ್ಭಗಳಲ್ಲಿ ಕೊಟ್ಟ ರಜೆ ನಿತ್ಯದ ಕೆಲಸ ನಿಲ್ಲಿಸುವಂಥದಿರಬಾರದು. ಮತ್ತು ಅದನ್ನು ವಿನೋದ, ಸಂತೆಯಿಂದ ಸಾಮಾನು ತರುವದು ಮತ್ತು ವಿಹಾರಾದಿಗಳಿಗೆ ಬಳಸಿಕೊಳ್ಳಬಾರದು.

ಸ್ವಾತಂತ್ರ್ಯ ಪಡೆದ ಈ ಕಾಲದಲ್ಲಿ ನಮ್ಮ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುವ ಅಗತ್ಯ ಹೆಚ್ಚಾಗಿದೆ. ನಾವು ಸಮಾಜ ಅಥವಾ ದೇಶದ ಬಗ್ಗೆ ನಮಗಿರುವ ಹೊಣೆಗಾರಿಕೆಯನ್ನು ತಿಳಿದುಕೊಂಡಿಲ್ಲ ಮತ್ತು ನಮ್ಮ ಚಟುವಟಿಕೆಗಳನ್ನು ವೈಯಕ್ತಿಕ ಅಗತ್ಯಗಳ ಮಟ್ಟಿಗೆಂದು ಮಿತಗೊಳಿಸಿಕೊಂಡಿದ್ದೇವೆ. ಎಡೆಬಿಡದೆ ಅಷ್ಟು ಹೆಚ್ಚು ರಜೆಗಳನ್ನು ಅನುಭವಿಸುತ್ತ ಬಂದುದರಿಂದ ನಮ್ಮಲ್ಲಿ ಒಂದು ತೆರನಾದ ಜಾಡ್ಯ ಅಥವಾ ಮಾಂದ್ಯ ಉಂಟಾಗಿದೆ. ಅದು ನಮ್ಮ ಪ್ರಗತಿಗೆ ಭಯಂಕರ ತಡೆಯಾಗಿ ಪರಿಣಮಿಸಿದೆ. ಆದರಿಂದಲೇ ಎಷ್ಟೋ ಸಂಪುಗಳಾಗುತ್ತಿವೆ ಎಂದು ನನ್ನ ವಿಚಾರ. ಇಂದಿನ ಆರ್ಥಿಕ ಸಂಕಟದ ಭಯಾವಹತೆಯನ್ನು ಅರಿತುಕೊಂಡ ಯಾವ ಕೆಲಸಗಾರನಾಗಲಿ, ಜನಾಭಿಪ್ರಾಯ ನೇತಾರನಾಗಲಿ ಅಂಥ ಮೇಲಿಂದ ಮೇಲೆ ಮಾಡುವ ಸಂಪಿನತ್ತ ಸರ್ವಥಾ ತಲೆಹಾಕಲಾರನು. ಪ್ರತಿಯೊಂದು ಜಾತಿಯೂ ತನ್ನ ಹಬ್ಬ ಹುಣ್ಣಿಮೆಗಳನ್ನು ರಾಷ್ಟ್ರೀಯ ರಜೆಯ ಪಟ್ಟಿಯಲ್ಲಿ ಸೇರಿಸಲು ಜಯಪ್ರದವಾಗಿ ಒತ್ತಾಯಪಡಿಸಿದ ಹಾಗೆಲ್ಲ ಬಿಡುವಿನ ದಿನಗಳ ಸಂಖ್ಯೆ ಹೆಚ್ಚುತ್ತ ಹೋಗಿದೆ. ಮೊದಲು ವಿದ್ಯಾಸಂಸ್ಥೆಗಳಿಗೆ ಮಾತ್ರ ಹೆಚ್ಚು ರಜೆಯಿತ್ತು. ಅನಂತರ ಅದು ಕಚೇರಿಗಳಿಗೆ ಹತ್ತಿಕೊಂಡಿತು. ಅದೀಗ ವ್ಯಾಪಾರೋದ್ಯಮ ಸಂಸ್ಥೆಗಳಿಗೂ ಹರಡಿದೆ. ನಮ್ಮ ನೇತೃಗಳೂ ಸರಕಾರವೂ ಲೌಕಿಕ ರಾಜ್ಯವನ್ನು ಸ್ಥಾಪಿಸುವುದರಿಂದ ನಮಗೆ ಅತ್ಯಂತ ಹಿತವಾಗುವುದೆಂದು ಸಾರಿದ್ದಾರೆ; ಆದುದರಿಂದ ಅವರು ರಾಷ್ಟ್ರೀಯ ಪ್ರಾಮುಖ್ಯವಿರುವ ದಿನಗಳಷ್ಟನ್ನು ಮಾತ್ರ ಸರ್ವಸಾಧಾರಣ ಬಿಡುದಿನ ದಿನಗಳನ್ನಾಗಿ ಸ್ವೀಕರಿಸುವುದು ಯುಕ್ತ. ಸಾರ್ವಜನಿಕ ಮತ್ತು ಸರಕಾರೀ ಕಚೇರಿಯ ಕೆಲಸಗಾರರು, ವ್ಯಾಪಾರ ನಿರತರು, ಉದ್ಯಮಿಗಳು ಮತ್ತು ಶಾಲಾಕರ್ಮಿಗಳು ತಮ್ಮ ಹಳೆಯಕಾಲದ ಸಂಕುಚಿತವಾದ ವರ್ಗೀಯ ವಿಚಾರಧಾರೆಯನ್ನು ಬಿಟ್ಟುಬಿಡಬೇಕು.

ಎರಡನೆಯ ಜಾಗತಿಕ ಸಮರದ ಸಮಯದಲ್ಲಿ ಕೆಲಸದ ಒತ್ತಡ ಹೆಚ್ಚಿತ್ತು. ಆಗ ಸರಕಾರ ಗಡಿಯಾರವನ್ನುಕೂಡ ಒಂದು ಗಂಟೆ ಹಿಂದಕ್ಕೆ ಹಾಕಿತು. ಅದು ಆದಿತ್ಯವಾರವನ್ನು ಹಿಡಿದು ಎಲ್ಲ ರಜೆಗಳನ್ನೂ ನಿಲ್ಲಿಸಿಬಿಟ್ಟಿತು. ಕೆಲಸ [illegible] ವಿಗ [illegible] ಜಾತಿಯನ್ನುಯುಕ್ತಾಗಿದಾಗಿತ್ತು. ಅವರು ಮುಕ್ಕಜಾತಿಯವರ ಬಿಡುವಿನ ದಿನಗಳಲ್ಲಿ ಕೆಲಸ ಮಾಡಬೇಕಾಗಿತ್ತು. ಎಲ್ಲ ಕೆಸಲಗಾರರೂ ಆದಿತ್ಯವಾರ ಕೆಲಸ ನಿಲ್ಲಿಸಿಬಿಡಲಾರರು; ಆದುದರಿಂದ ಅವರು ವಾರದ ಬಿಡುವನ್ನು ಬೇರೆ ಬೇರೆ ಬೇರೆ ಬೇರೆ [illegible] ಗಳಲ್ಲಿ ತೆಗೆದು ಕೊಂಡರು. ಅವರಿಂದ ಕಚೇರಿ ಇಡಿ ವಾರವೂ ತೆರೆದಿರಬಲ್ಲುದಾಯ್ತು.

ಶಿಕ್ಷಣ [illegible]
ರಾವ್ಯಾ
ಸಾವಃ
ಇತ್ಯಾ

ಇಂದು ನಮ್ಮ ರಾಷ್ಟ್ರೀಯ ಅಗತ್ಯ ಅಂದಿಗಿಂತ ಕಡಿಮೆಯಾಗಿದೆಯೇ? ಅಥವಾ ನಮ್ಮಲ್ಲಿ ದೇಶಪ್ರೇಮ ಇಲ್ಲವೆ ? ಹೊಣೆಗಾರಿಕೆ ಕಡಿಮೆಯಾಗಿದೆ ಎನ್ನಬಹುದೆ? ನಾವಿನ್ನೂ ನಮ್ಮ ಹಳೆಯ ದಾಸ್ಯಮನೋವೃತ್ತಿಯನ್ನು ಕಳೆದೊಗೆದಿಲ್ಲ; ಇನ್ನೂ ನಾವು ಮೇಲಿನವರ "ಹುಕುಂ" ಬಂದರೆ ಮಾತ್ರ ಕೆಲಸ ಮಾಡುವ ಬುದ್ಧಿಯವರಾಗಿದ್ದೇವೆ. ಸ್ವತಃ ನಾವೇ ಹೊಸದಾಗಿ ಯುಕ್ತವಾದ ಪರಂಪರೆಯನ್ನು ರೂಢಿಸಿಕೊಂಡು ಹೆಚ್ಚಿಗೆ ಕೆಲಸ ಮಾಡುವ ಪ್ರವೃತ್ತಿ ನಮ್ಮಲ್ಲಿ ಉಂಟಾಗಿಲ್ಲ. ಕಚೇರಿಯಲ್ಲಿಯ ನಮ್ಮ ಕೆಲಸಗಾರರು ಆದಷ್ಟು ಕಡಿಮೆ ಕೆಲಸ ಮಾಡಬೇಕೆಂದು ಸದಾ ಚಡಪಡಿಸುತ್ತಾರೆ. ಅಂಗಡಿಕಾರನೇಕೆ ನಡುಹಗಲ ಉಪಾಹಾರಕ್ಕಾಗಿ ಕೂಡ ತೆರೆಗೆಳೆಯನ್ನು ಮುಚ್ಚುವುದಿಲ್ಲ? ತಾನು ಹಾಗೆ [illegible]ದರೆ ತನಗೇ ನಷ್ಟವಾಗುವುದೆಂಬು ಅವನಿಗೆ ಗೊತ್ತಿದೆ. ಅದೇ ಬುದ್ಧಿ ನಮ್ಮೆಲ್ಲರಿಗೂ ಬರಬಾರದೇನು?

ರಾಷ್ಟ್ರಭಾಷೆ, ರಾಷ್ಟ್ರೀಯ ವೇಷಭೂಷಣ, ರಾಷ್ಟ್ರಧ್ವಜ, ರಾಷ್ಟ್ರಗೀತ ಮುಂತಾದ ಎಷ್ಟೋ ಸಮಸ್ಯೆಗಳು ಮುಂದೆ ಬಂದಿರುವಾಗ ರಾಷ್ಟ್ರೀಯ ಕೆಲಸದ ಸಮಸ್ಯೆಯೇಕೆ ಎಲ್ಲರ ಕಣ್ಣುಮುಂದೆ ಬರಬಾರದು?

ಇಂದು ರಾಷ್ಟ್ರಕ್ಕೆ ಮೊದಲು ಬೇಕಾದದ್ದು ಕೆಲಸ; ಸುಖ ಸಂತೋಷ ಕಡೆಗೆ. ನಾವು ನೇತೃಗಳೆಂದು ಕರೆಯುವವರೆಲ್ಲರೂ ಈಯೆಲ್ಲ ರಜೆಗಳನ್ನೂ ವಾರದ ಬಿಡುವುಗಳನ್ನೂ ಅನುಭವಿಸುವರೋ? ಪಂ. ನೆಹರು, ಸರದಾರ ಪಟೇಲ, ರಾಜೇಂದ್ರಬಾಬು, ಮೌಲಾನಾ ಆಜಾದ ಅಥವಾ ಡಾ. ಸೀತಾರಾಮಯ್ಯ ಇವರತ್ತ ನೋಡಿರಿ. ಸಾರ್ವಜನಿಕ ಸೇವೆಯನ್ನು ಪ್ರಾರಂಭಿಸಿದಂದಿನಿಂದ ಅವರಿಗೆ ಭಾನುವಾರ ಅಥವಾ ಇನ್ನಾವ ಬಿಡುವೆಂದರೆ ಏನೆಂದೇ ಗೊತ್ತಿಲ್ಲ. ನಮ್ಮ ದೇಶದ ಉನ್ನತಿಗಾಗಿ ನಾವೇಕೆ ಅಷ್ಟೇ ಉತ್ಸಾಹದಿಂದ ಕೆಲಸ ಮಾಡಬಾರದು ?

ಪ್ರಸ್ತುತ ಕಾಲದಲ್ಲಿ ಹೆಚ್ಚು ಕೆಲಸ ಮತ್ತು ದೇಶದ ಎಲ್ಲೆಡೆಯಲ್ಲಿಯ ನಮ್ಮ ಜೀವನಕ್ರಮದಲ್ಲಿ ಏಕರೂಪತೆ ಇವು ಅಗತ್ಯವೆನಿಸಿವೆ. ಸಂಯುಕ್ತಪ್ರಾಂತದಲ್ಲಿ ಅಂಗಡಿಕಾರರೂ ವ್ಯಾಪಾರಾನ್ವೇಷಿಗಳೂ ವೈದ್ಯಕೀಯ ರಜೆ ೧೫ ದಿನ, ಹಂಗಾಮಿ ರಜೆ ೧೫ ದಿನ, ಹಬ್ಬ ಹುಣ್ಣಿಮೆಯ ರಜೆ, ೩೧ ದಿನ ವಾರದ ಬಿಡುವು ೫೨ ದಿನ ಹೀಗೆ ಒಟ್ಟು ವರ್ಷಕ್ಕೆ ೧೧೩ ಅಥವಾ ಇನ್ನೂ ಹೆಚ್ಚು ದಿನಗಳ ರಜೆಯನ್ನು ಅನುಭವಿಸುವರು. ದಿಲ್ಲಿಯಲ್ಲಿಯೂ ಪಂಜಾಬಿನಲ್ಲಿಯೂ ವಾರದ ವಿಶ್ರಾಂತಿ ದಿನಗಳಲ್ಲದೆ ಕೇವಲ ೧೫ ದಿನಗಳ ಹಂಗಾಮಿ ರಜೆಯನ್ನು ಅವರು ಪಡೆಯಬಲ್ಲರು. ರಾಷ್ಟ್ರದ ಕಾರ್ಯದಕ್ಷತೆಗೆ ಭಂಗಬಾರದಂತೆ ನಮ್ಮನ್ನು ಯುಕ್ತವಾಗಿಡಲು ಇವು ಸಾಕೇ ಸಾಕು. ಅವಕ್ಕೆ ನಾವು ಕೆಲರಾಷ್ಟ್ರೀಯ ಬಿಡುವುಗಳನ್ನು ಕೂಡಿಸಿ ೭೦ ದಿನಗಳು ಅಂದರೆ ವರ್ಷದ ಐದನೆಯ ಒಂದಂಶ ರಜೆ ಎಂದು ಮಾಡಬಹುದು.

ಇಡಿ ಮೂರು ತಿಂಗಳಿನಷ್ಟಾಗುವ ಶಾಲೆಯ, ವಿಶ್ವವಿದ್ಯಾನಿಲಯದ ಮತ್ತು ಹೈಕೋರ್ಟಿನ ಬಿಡುವುಗಳಿಗೆ ಯುಕ್ತ ಸಮರ್ಥನೆಗಳಾವುವೂ ಸಿಗಲಾರವು. ನಾವು ಉಷ್ಣ ದೇಶದ ನೈಸರ್ಗಿಕ ನಿವಾಸಿಗಳು—ಶಾಲೆಗೆ ಹೋಗದಿದ್ದರೂ ಈ ದೇಶವನ್ನು ಬಿಟ್ಟು ನಾವು ಪರದೇಶಕ್ಕೆ ಹೋಗಲಾರೆವು. ಹಾಗಿದ್ದ ಮೇಲೆ ಬೆಲೆಬಾಳುವ ಅಷ್ಟು ಸಮಯವನ್ನೇಕೆ ಹಾಳು ಮಾಡಬೇಕು? ಹೆಚ್ಚು ಕಲಿಯಲು ಆ ಕಾಲವನ್ನು ಬಳಸಿಕೊಂಡು ವಿದ್ಯಾಭ್ಯಾಸದ ಒಟ್ಟು ಅವಧಿಯನ್ನು ಕಡಮೆ ಮಾಡಬಾರದೇಕೆ? ಈಗ ಉಪಾಧ್ಯಾಯರು ಮಕ್ಕಳನ್ನು ಬೀದಿಯಲ್ಲಿ ಅಲೆಯಲು ಬಿಟ್ಟು ಮನೆಗೆ ಹೋಗುವರು. ಅವು ಸೋಮಾರಿಗಳಾಗಿ ಉಚಿತೋದ್ಯಗಾರಿಕೆ [illegible] ಬಹು [illegible] ಕಲಿಯುತ್ತವೆ. ದೊಡ್ಡ ರಜೆ ಬೇಕಾದರೆ ಅವಧಿ ಒಮ್ಮೆಗೆ ೧೫ ದಿನ್ನೆ ಹೆಚ್ಚಿರಬಾರದು; ಮತ್ತು ಋತುಮಾನಾನುಸಾರವಾಗಿ ಅವರು ಅದುಪ್ರತಿಯೊಂದ ಅನಂತರವೂ [illegible]ಟಿ, ಸಭೆ, ಬಯಲಿನ ವಿಹಾರ [illegible] ಪ್ರವಾಸ ಮತ್ತು ಕಾರಖಾನೆ, ಹೊಸ್ಪಿಟಲ್ ಇತರ ಸಾಂಸ್ಕೃತಿಕ ಮಹತ್ವವಿರುವ ಸ್ಥಳಗಳಿಗೆ ಹೋಗುವುದು ಮುಂತಾದ ಕಾರ್ಯಕ್ರಮಗಳಿಗಾಗಿ ಈ ರಜೆಯನ್ನು ಬಳಸಿಕೊಳ್ಳಬೇಕು. ಇದರಿಂದ ಶಾಲೆಯೊಳಗಣ ಅಭ್ಯಾಸಕ್ಕೂ ಹೊರಗಿನ ವ್ಯವಹಾರಕ್ಕೂ [illegible] ಗಾಗುತ್ತದೆ.

ಸುಧಾನು. ಹಾಪುರ, —ಆರ್. ಕೆ. [illegible]

ಸಂ. ಬ್ರಾ.

ಉಳಿಯುವ ಒಂದೇ ದಾರಿ

Road to Survival [illegible] ಯೆಂಬ ಪುಸ್ತಕದಲ್ಲಿ ಪ್ರೊ. ಹಯೋಕರು ಸಾಮ್ಯವಾದಿ ಯೋಜನೆ ಮತ್ತು ಆರ್ಥಿಕ [illegible] ಅಧಃಪಾತಕ್ಕೆ ಕೆತ್ತಿರುವದನ್ನು ತೋರಿಸಿ ನಮ್ಮನ್ನು ನಡುಗಿಸುವಂತೆ ಮಾಡಿದ್ದರೆ, ಶ್ರೀ ವಿಲಿಯಂ ವಾಗ್ಟರು Road to Survival (ಉಳಿಯುವ ಉಪಾಯ) ಎಂಬ ಪುಸ್ತಕದಲ್ಲಿ ಮನುಷ್ಯನ ಲೋಭ ಕಾರ್ಪಣ್ಯ ಸಂಗ್ರಹಾಪೇಕ್ಷೆಗಳ ಫಲವಾಗಿ ಭೂಮಿಯ ಹುಲುಸಾದ ಹೊರಪದರು ಹಾಳಾಗಿ, ಅದರ ಗರ್ಭದ ಅಮೂಲ್ಯ ಸಂಪತ್ತಿ ನಾಶಹೊಂದುವ ಘೋರ ಸಂಭವವನ್ನು ಅಷ್ಟೇ ಮನವರಿಕೆಯಿಂದ ಅನೇಕ ಪ್ರಬಲ ಪ್ರಮಾಣಗಳನ್ನಿತ್ತು ಬಣ್ಣಿಸಿದ್ದಾರೆ. ಈ ಪುಸ್ತಕದಲ್ಲಿ ಬಣ್ಣಿಸಿದ ಗಂಡಾಂತರಗಳು ನಿಜವಾಗಿ ಇಲ್ಲವೆಂದು ಬಗೆಯುವದು ದಡ್ಡತನವೇ ಸರಿ.

ಮನುಷ್ಯನು ತನ್ನ ಸುತ್ತಣ ಆವರಣದ ಒಂದು ಅಂಗನೆಂದೂ ಅವನು ಅದರ ಮೇಲೂ ಅದು ಅವನ ಮೇಲೂ ಇಡಿ ಭೂಮಿಯಲ್ಲೆಲ್ಲ ಮಾಡುತಿರುವ ಪರಿಣಾಮಗಳನ್ನು ತೋರಿಸುವ ಪ್ರಯತ್ನವನ್ನು ಮೊದಲನೆ ಬಾರಿ ಈ ಪುಸ್ತಕದಲ್ಲಿ ಮಾಡಲಾಗಿದೆಯೆಂದೂ ಬರ್ನಾರ್ಡ ಬರೂಚರು ಮುನ್ನುಡಿಯಲ್ಲಿ ಹೇಳಿದ್ದಾರೆ. ನಾಳೆಯೇ ಸರ್ವನಾಶವಾಗಲಿದೆಂದು ಲೇಖಕರು ಸಾಧಿಸಿಲ್ಲ. ಆದರೆ ಸಮೃದ್ಧಿಯ ರಕ್ಷಣೆಯೂ ಬಡತನದ ಸಮಸ್ಯೆಯೂ ನಿಜವಾಗಿ ಒಂದೇ ವಸ್ತುವಿನ ಎರಡು ಮುಖಗಳೆಂದು ಅವರು ತೋರಿಸಿದ್ದಾರೆ. ಮನುಷ್ಯನು ತನ್ನ ಕಾರ್ಪಣ್ಯದಿಂದ ಪಶುಗಳಿಗಿಂತಲೂ ಕೀಳಾಗಿ ತನ್ನ ಸುತ್ತಣ ಆವರಣವನ್ನೆ ನಾಶಮಾಡುತಿದ್ದಾನೆ. ಜಗತ್ತಿನ, ಮುಖ್ಯವಾಗಿ ಭಾರತದ ಮುಂದೆ ದುರ್ಧರವಾದ ಆರ್ಥಿಕ ಅಡಚಣೆಗಳಿರುವಾಗ ಈ ಸಮಸ್ಯೆಯನ್ನು, ಅದೂ ನಮ್ಮನ್ನು ಅಪ್ಪಳಿಸುವ ಮೊದಲೇ, ಧೈರ್ಯದಿಂದಲೂ ದೂರಾಲೋಚನೆಯಿಂದಲೂ ಎದುರಿಸಬೇಕಾಗಿದೆ. ಯಂತ್ರಮೂಲಕ ತೀವ್ರವಾದ ಕೃಷಿಮಾಡುವದರಿಂದಾಗಲಿ ಔದ್ಯೋಗೀಕರಣದಿಂದಾಗಲಿ ಅದು ದೂರವಾಗಲಾರದು. ಅಡವಿಗಳ ನಾಶವೂ ಭೂಮಿಯ ಸಾರಹಾನಿಯೂ ಗಾಬರಿಗೊಳಿಸುವಷ್ಟು ವೇಗದಿಂದ ಆಗುತ್ತಿದೆ. ಭೂಮಿಯ ಹುಲುಸಾದ ಮೇಲು ಪದರು ಹಾಳಾಗುತಿದೆ.

ಪುಸ್ತಕದ ಸಾರಾಂಶವಿದು: ಈ ವರೆಗೆ ಮನುಷ್ಯನು ಸಾಧಿಸಿದ ಆರ್ಥಿಕ ಪ್ರಗತಿ ಅದ್ಭುತವಾಗಿದ್ದರೂ ಸಂಪತ್ತಿಯ ಉಪಯೋಗದಲ್ಲಿ ಅತಿಶಯ ದುಂದು ಆಗಿದೆ. ಹೊಸ ಆವಿಷ್ಕಾರಗಳು ಮುಖ್ಯವಾಗಿ ಸಿದ್ಧಸಾಮಗ್ರಿಗಳ ಉತ್ಪಾದನೆಗೆ ಮತ್ತು ಸಾರಿಗೆಗೆ ಸಂಬಂಧಿಸಿವೆ. ಇವುಗಳ ಸಹಾಯದಿಂದ ನಾವು ಜೀವಿಸಿದ್ದರೂ ಅವುಗಳಿಂದಲೇ ನಾವು ಜೀವಿಸುವದಿಲ್ಲ. ಆವಶ್ಯಕ ಕೃಷಿಗೆ ಯೋಗ್ಯವಾದ ಪ್ರದೇಶ ಭೂಮಿಯ ಮೇಲೆ ಬಹಳ ಕಡಿಮೆ. ಯುದ್ಧಗಳಿಂದಲೇ ಕೊರತೆ ಹುಟ್ಟಿರದೆ ಅವು ಜಗತ್ತಿನ ಪ್ರಚ್ಛನ್ನ ಉತ್ಪಾದಕ ಶಕ್ತಿಯನ್ನು ಅಗ್ನಿಪರೀಕ್ಷೆಗಷ್ಟೆ ಗುರಿಮಾಡಿದವು. ಜಗತ್ತು ದಿನಹೋದಂತೆ ಬಡವಾಗುತ್ತ ಬರುತಿದೆಯೆಂದು ಲೇಖಕರು ತೋರಿಸಿದ್ದಾರೆ. ಈ ವರೆಗೆ ಹಿಂದುಳಿದ ದೇಶಗಳ ಕಷ್ಟದಿಂದ ಮುಂದುವರಿದ ಕೆಲವೇ ಜನರ ಜೀವನ ಮಟ್ಟ ಏರಿಕೆಯುಳ್ಳುಳಿದಿದೆ. ಆದರೆ ಈಗ ರಾಷ್ಟ್ರೀಯ ಜಾಗೃತಿಯಾಗಿರುವದರಿಂದ ಇನ್ನು ಆ ದೇಶಗಳು ಮುಂದುವರಿದವರಿಗಾಗಿ ಬೆವರು ಸುರಿಸಲಾರವು.

ಈಗಿನ ಸ್ಪರ್ಧಾತ್ಮಕ ಅರ್ಥಪದ್ಧತಿಯಿಂದ ಆಗುತ್ತಿರುವ ಅಪಾರ ಅಪವ್ಯಯವನ್ನು ಯಾರೂ ಸರಿಯಾಗಿ ಮನಗಂಡಿಲ್ಲ. ಈ ಪದ್ಧತಿಯ ದೋಷಗಳನ್ನು ಲೇಖಕರು ವಿವರಿಸಿದ್ದಾರೆ. ಅವರು ಎಲ್ಲವನ್ನೂ ಆಧಾರ ಸಹಿತವಾಗಿ ಚರ್ಚಿಸಿದ್ದಾರೆ. ಹಂಚುವಿಕೆಯನ್ನು ಸುಧಾರಿಸಿದರೆ ಈಗಿರುವ ಕೊರತೆಗಳು ದೂರಾಗಬಹುದೇ ಎಂಬ ಪ್ರಶ್ನೆಗೆ ಲೇಖಕರು ನಕಾರಾತ್ಮಕ ಉತ್ತರವಿತ್ತಿದ್ದಾರೆ. ನಾವಿಂದು ಮೂಲಧನವನ್ನೇ ವೆಚ್ಚಮಾಡುತಿದ್ದೇವೆ, ಅದನ್ನು ತುಂಬಲು ಏನೂ ಮಾಡುತ್ತಿಲ್ಲವೆಂದು ಅವರು ತೋರಿಸಿಕೊಟ್ಟಿದ್ದಾರೆ.

ಅಪೇಕ್ಷೆಗಳ ಉತ್ಪಾದನೆಯು ಜನಸಂಖ್ಯೆ [illegible] ಹರಿಯುತ್ತದೆ; ಇನ್ನು ಉಳಿದಿರುವುದು ಕೇವಲ [illegible] ಎಂದು ಸಂದೇಹವಾಗಿದೆ. [illegible]

[illegible] ಲ್ಲದ ಕಾಲಕ್ಕೆ ಜೀವಶಕ್ತಿಯನ್ನು. [illegible] ಕೊಟ್ಟಂತಾಗಿಲ್ಲ ಎಂಬ ಬಗ್ಗೆ ಲೇಖಕರು [illegible] ವಾದ ಸಮರ್ಥನೆಯನ್ನು ಕೊಟ್ಟಿದ್ದಾರೆ.

ಹಿಂದೆ ಎಂದೂ ಸ್ತ್ರೀಪುರುಷರು ಈಗಿನ [illegible] ವಿಜ್ಞಾನ ಮತ್ತು ಸಾಮಗ್ರಿಗಳ ರಾಶಿ [illegible] ತಯಾರಿಕೆ ತಮಗೆ ಸ್ವರ್ಗಸುಖಪಟ್ಟು [illegible] ಕೊಡುತ್ತವೆ ಎಂಬ ಭ್ರಾಂತಿ ಉದಾತ್ತ [illegible] ಗಳಲ್ಲಿ ಕಾಲಹರಣ ಮಾಡುತ್ತಿದ್ದಿಲ್ಲ. [illegible] ಹೀಗೆ ಗಾಳಿ ಗೋಪುರ ಕಟ್ಟಿ ವಾಸ್ತವಿಕತೆಯನ್ನು ಮರೆತುದು ಇತಿಹಾಸದಲ್ಲಿಲ್ಲ.

ಪುಸ್ತಕದಲ್ಲಿ ಸಮಸ್ಯೆಯನ್ನು ಚೆನ್ನಾಗಿ ವಿವರಿಸಲಾಗಿದೆ; ಆದರೆ ಅದರ ಪರಿಹಾರ[illegible]ವನ್ನು ಮಾತ್ರ ಹೇಳಿಲ್ಲ. ಪ್ರಗತಿಯ [illegible] ಜನಸಂಖ್ಯೆಯನ್ನು ನಿಯಂತ್ರ[illegible] ಇಷ್ಟಕ್ಕೆ ಸಮಸ್ಯೆ ಮುಗಿದು [illegible] ಸಮಸ್ಯೆಯು [illegible] ಸಿದೆ. ಸತ್ಯವನ್ನು [illegible] ವಸ್ತುಗಳ ದಾಸರಾಗಬೇಕೋ [illegible] ಸಮಸ್ಯೆ. ನಮ್ಮ ಮಹರ್ಷಿಗಳ [illegible] ಮತ್ತು ಆಧ್ಯಾತ್ಮಿಕ ವಿದ್ಯೆಯನ್ನು ನಾವು [illegible] ವಡಿಸಿಕೊಂಡರೆ ನಾಗರಿಕತೆಯನ್ನು [illegible] ಸಾಧ್ಯವಾದೀತು. ಮೇಲ್ತರಗತಿಯ [illegible] ಮಟ್ಟವನ್ನು ಪಡೆಯುವ ಸ್ವಾರ್ಥವನ್ನು [illegible] ಗಿಟ್ಟು ಆತ್ಮಸಂಯಮದ ಮೂಲಕ [illegible] ಸಂತತಿನಿಯಂತ್ರಣ ಮತ್ತು [illegible] ಗಳನ್ನು ಮಹಾತ್ಮರು ಹೇಳಿದಂತೆ [illegible] ದಾಗ ಮಾತ್ರ ಎಲ್ಲರಿಗೂ ಆಹಾರ, [illegible] ಮತ್ತು ವಸತಿಗಳು ದೊರಕುವಂತಾ[illegible]. ಯಂತ್ರದೇವನು ಬಹಳ ದುರ್ಬಲನು; ಅವನು ಈ ಕಾರ್ಯವನ್ನು ಮಾಡಲಾರನು. ಅವನ [illegible] ದರೆ ನಾವು ಆರ್ಥಿಕ್ಯಂತ ಉತ್ಕೃಷ್ಟ [illegible] ಜೀವನದ ಎಲ್ಲ ಮೂಲ್ಯಗಳನ್ನು [illegible] ಬಿಟ್ಟೇವು, ಸ್ವತಃ ನಾಶವಾದೇವು. [illegible] ವಾಗಿ ಪಾಶ್ಚಾತ್ಯರಿಗೆ, ವಿಶೇಷತಃ [illegible] ಗ್ರಂಥಕರ್ತನಿಗೂ ಇದೆಲ್ಲ ಚೆನ್ನಾಗಿ [illegible] ವಾಗದು. ಏಕೆಂದರೆ—

ಸಂಗಾತ್ ಸಂಜಾಯತೇ ಕಾಮಃ
ಕಾಮಾತ್ ಕ್ರೋಧೋಽಭಿಜಾಯತೇ।
ಕ್ರೋಧಾದ್ಭವತಿ ಸಮ್ಮೋಹಃ
ಸಮ್ಮೋಹಾತ್ ಸ್ಮೃತಿವಿಭ್ರಮಃ।
ಸ್ಮೃತಿಭ್ರಂಶಾದ್ಬುದ್ಧಿನಾಶೋ
ಬುದ್ಧಿನಾಶಾತ್ ಪ್ರಣಶ್ಯತಿ।

ಎಷ್ಟು ಸತ್ಯ! ಮತ್ತು ಗೀತೆಯ ಈ ಅಮರ ಪಂಕ್ತಿಗಳಲ್ಲಿಯ ಮಹಾಸತ್ಯವನ್ನು [illegible] ವನು ಪುನಃ ಅರಿತುಕೊಂಡರೆ [illegible] ಎರಗಿರುವ ವಿನಾಶದಿಂದ ತಪ್ಪಿಸಿಕೊಳ್ಳಬಹುದು.

ಮುಂಬಯಿ, ೨೮-೬-೪೯ —ಆಶ್ಟ್ ನರಹರಿ [illegible]

ಗಾಂಧೀಜಿಯ ಶರೀರ ವರ್ಣನೆ

ನನ್ನ ಬಿನ್ನಹದ ಮೇರೆಗೆ ಮುಂ[illegible] ಸರಕಾರ ತನ್ನ ಸೆರೆಮನೆಯ [illegible] ಗಾಂಧೀಜಿಯನ್ನು ಕುರಿತು ಈ ಕೆಳಗಿನ [illegible] ಗಳನ್ನು ಒದಗಿಸಿದೆ:

ಎತ್ತರ— ೫ ಫೂಟು ೫ ಇಂಚು

ಗುರುತಿನ ಚಿಹ್ನಗಳು—

(೧) ಬಲ ತೊಡೆಯಲ್ಲಿ [illegible] ಯಿಂದ ೧/೨ ಅಂಶ [illegible]

[illegible]

(೨) [illegible]

[illegible]

[illegible]

ಜೊತೆ [illegible] —ಕಿ. ಘ. ಮ.

೧೯-೬-೪೯

ಹೆಣ್ಣುಮಕ್ಕಳಿಗಾಗಿ

ಸ್ತ್ರೀ ಶಿಕ್ಷಣ

ಲೇ:— ಶ್ರೀ ವಿ. ಪುಟ್ಟಮಾದಪ್ಪ

“ ಪುಕ್ಕಿಂಗ್ ಸ್ಪೊಲ್ಟ್ ವೇಲಲ್ಲಿ” ಎಂಬ ಕೈಲಾಂಸರವರ ನುಡಿಗಳು ಅನುಭವಯುತವಾದುವು, ಸರ್ವವಿದಿತವಾದುವು. ಮಗುವಿನ ಭವಿಷ್ಯಜ್ಜೀವನ ತಾಯಿಯ ಕೈಯಲ್ಲಿದೆ. ಇಂದು ಜನಿಸುವ ಪ್ರತಿಯೊಂದು ಮಗುವೂ ಮುಂದೆ ದೇಶದ ಪ್ರಜೆಯಾಗುವದರಿಂದ ದೇಶದ ಭವಿತವ್ಯವೂ ತಾಯಿಯ ಕೈಯಲಿದೆ. ಒಂದು ಪುಟ್ಟ ಸಂಸಾರದಲ್ಲಿ ಸ್ತ್ರೀಯು ಶಾಂತಿ, ಸುಖ, ಸಮರಸಗಳನ್ನು ನೆಲೆಗೊಳಿಸುವಂತೆ ನಾಡಿನಲ್ಲಿ ಶಾಂತಿ, ಸುಭಿಕ್ಷೆಗಳ ಸ್ಥಾಪನೆಗೂ ಆಕೆ ಸಹಾಯಕಳಾಗಿದ್ದಾಳೆ. ಸಂಸಾರದಲ್ಲಿ ಮಾತ್ರವೇ ಅಲ್ಲದೆ ನಾಡಿನ ಅಭ್ಯುದಯಾದಿಗಳಲ್ಲಿಯೂ ನೆರವಾಗುವ ಮಹಿಳೆಯ ಸ್ಥಾನ ಅತ್ಯಂತ ಮಹತ್ವದ್ದೂ ಹೊಣೆಗಾರಿಕೆಯುಳ್ಳದ್ದೂ ಆಗಿದೆ. ನಾಡಿನ ಪ್ರಗತಿಯಲ್ಲಿ ಅತಿ ಮುಖ್ಯಪಾತ್ರವಹಿಸುವ ಮಹಿಳೆಯರಿಗೆ ಉಚ್ಚ ಶಿಕ್ಷಣದ ಅವಶ್ಯಕತೆ ಇದೆ ಎಂದು ಬೇರೆ ಹೇಳಬೇಕಾಗಿಲ್ಲ. ೧೦೦ ಗಂಡಸರಿಗೆ ೯೫ ಹೆಂಗಸರಿರುವ ನಮ್ಮ ದೇಶದಲ್ಲಿ ಸುಸಂಸ್ಕೃತ ಮಹಿಳೆಯರ ಸಂಖ್ಯೆಯನ್ನು ಕೇವಲ ಬೆರಳುಗಳಿಂದ ಎಣಿಸಿಬಿಡಬಹುದು! ಈ ಕೊರತೆ ನೀಗುವದು ಸ್ವತಂತ್ರ ಭಾರತದ ಮುಂದಿರುವ ಪ್ರಸ್ತುತ ಸಮಸ್ಯೆಗಳಲ್ಲೊಂದು.

ಕಾವ್ಯಶ್ರೀಯ ಪೋಷಣೆ

ಮತ, ಆಚಾರ ವಿಚಾರಗಳಲ್ಲಿ ತಿರುಳನ್ನು ಬಿಟ್ಟು ಸಿಪ್ಪೆಯನ್ನೊಳಗೊಂಡ ಹಲವಾರು ಸಂಕುಚಿತ ಸ್ವಭಾವಗಳು ನಮ್ಮ ಜನರಲ್ಲಿ ಬಹಳ ದಿನಗಳಿಂದ ಬೆಳೆದುಬಂದಿವೆ. ಈ ಸಂಕುಚಿತ ಗುಣಗಳೇ ನಮ್ಮ ಪ್ರಗತಿಗೆ ಹಾನಿಕಾರಿಗಳೆಂದರೆ ತಪ್ಪಾಗಲಾರದು. ಈ ಮಂಕು, ಮೂಢ ಮುಸುಕನ್ನು ಜನರ ಮುಖದಿಂದ ಸೆಳೆದೊಗೆಯಲು ಸೂಕ್ತ ಶಿಕ್ಷಣ ಕ್ರಮವೊಂದೇ ಮಾರ್ಗ. ಇಂದಿನ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿರುವ ಹಲವಾರು ಲೋಪದೋಷಗಳನ್ನು ಸುಧಾರಿಸಿದರೇನೆ ಭಾರತದ ಭಾವೀ ಜನಾಂಗ ಸುಶಿಕ್ಷಿತರಾಗುವುದಕ್ಕೆ, ಸುಸಂಸ್ಕೃತವಾಗುವುದಕ್ಕೆ ಸಾಧ್ಯ. ಮಾರ್ಗರೆಟ್ ಕಸಿನ್ಸ್ ಎಂಬಾಕೆ ತನ್ನ “The Awakening of Asian womanhood” ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾಳೆ: “ಭಾರತದ ಕವಯಿತ್ರಿಗಳಾದ ಮೀರಾಬಾಯಿ, ಮುಕ್ತಾಬಾಯಿ, ತರು ದತ್ತ ಮತ್ತು ಸರೋಜಿನಿನಾಯ್ಡು ಮುಂತಾದವರನ್ನು ಯಾರು ತಾನೆ ಅರಿತಿಲ್ಲ? ಭಾರತ ಮಹಿಳೆಯರಲ್ಲಿ ಕಾವ್ಯಶ್ರೀ ಅಡಗಿದ್ದು ಬೆಳಕಿಗೆ ಬರಲು ಒಂದು ಸುರಕ್ಷಿತ ಸದವಕಾಶವನ್ನು ನಿರೀಕ್ಷಿಸುತ್ತಿದ್ದಾಳೆ. ಪ್ರತಿ ೧೦೦ ಜನ ಭಾರತೀಯರಲ್ಲಿ ಕೇವಲ ಒಬ್ಬ ಮಹಿಳೆ, ಅಥವಾ ೧೦೦೦ ಜನರಲ್ಲಿ ೧೩ ಹೆಂಗಸರು ವಿದ್ಯೆ ಪಡೆಯುತ್ತಾರೆಂದರೆ ಬಹಳ ವಿಷಾದವಾಗುತ್ತದೆ! ಪಾಶ್ಚಾತ್ಯ ದೇಶಗಳಲ್ಲಿ ನೂರಕ್ಕೆ ತೊಂಬತ್ತು ಹೆಂಗಸರು ಸುಲಭವೆಚ್ಚದಲ್ಲಿ ಒಳ್ಳೆಯ ವಿದ್ಯಾಭ್ಯಾಸವನ್ನು ಕೊನೆಯ ಪಕ್ಷ ಎಂಟು ವರುಷಗಳವರೆಗಾದರೂ ಪಡೆಯುವರೆಂದರೆ ಭಾರತೀಯರಿಗೆ ಎಷ್ಟು ಖೇದವಾಗುವುದಿಲ್ಲ? ಸ್ತ್ರೀಶಿಕ್ಷಣ ಭಾರತದಲ್ಲಿ ಬಹಳ ಹಿಂದುಳಿದಿದೆ. ೧೩ರ ಜನಯುವತಿಯರಿಗೆ ಕೇವಲ ೧೩ ಯುವತಿಯರು ವಿದ್ಯಾಭ್ಯಾಸ ಪಡೆಯುವರೆಂದರೆ ಸ್ತ್ರೀಶಿಕ್ಷಣವನ್ನು ಭಾರತೀಯ ತನ್ನಾಪಿತೃಗಳು ಎಷ್ಟು ಕಡೆಗಣಿಸಿದ್ದಾರೆ ಎಂದು ತಿಳಿದುಬರುತ್ತದೆ. ಒಬ್ಬ ಅವಿದ್ಯಾವತಿ ಮನೆಯ ವಹಿವಾಟಿನಲ್ಲಿ ಪತಿಗೆ ಹೇಗೆ ಸಹಾಯಕಳಾದಳು? ನಿರಕ್ಷರತೆ, ಮೂಢತೆಗಳು ಮನುಷ್ಯರನ್ನು ದಾಸಬುದ್ಧಿಯುಳ್ಳವರನ್ನಾಗಿ ಮಾಡುತ್ತವೆ. ಸೇವಕರಾಗಿರುವವರು ತಮ್ಮ ಮಕ್ಕಳನ್ನೂ ದಾಸವೃತ್ತಿಗೆ ಇಳಿಸುತ್ತಾರೆ. ರೋಮ್ ದೇಶದ ನಾಶಕ್ಕೆ ಇದೇ ಕಾರಣವಾಗಿತ್ತು.

ತರ್ಕಶಕ್ತಿಯ ಬೆಳವಣಿಗೆ

ದೇಶದ ಉನ್ನತಿಗೆ ಪುರುಷರಷ್ಟೇ ಪ್ರಮುಖ ಪಾತ್ರವನ್ನು ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಮಹಿಳೆಯರೂ ವಹಿಸಬೇಕಾದುದರಿಂದ ಸ್ತ್ರೀ ಶಿಕ್ಷಣದ ರೀತಿ, ನೀತಿ, ವಿಷಯಗಳನ್ನು ತಿಳಿದುಕೊಳ್ಳುವುದು ಬಹಳ ಉಪಯುಕ್ತವಾದುದು. ರಸ್ಕಿನ್ ಎಂಬ ಆಂಗ್ಲ ಲೇಖಕ ತನ್ನ ‘Sesame and Lilies’ ಎಂಬ ಪುಸ್ತಕದಲ್ಲಿ ಇದೇ ಮಾತನ್ನು ಹೇಳಿದ್ದಾನೆ. ಮಹಿಳೆಯರ ದೇಹಾರೋಗ್ಯ ಸ್ತ್ರೀ ಶಿಕ್ಷಣದ ಪ್ರಥಮ ಭಾಗ; ಮಹಿಳೆಯರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಅದನ್ನು ಕಾಪಾಡಿಕೊಳ್ಳಲು ಮಹಿಳೆಯರಿಗೆ ಸೂಕ್ತ ವ್ಯಾಯಾಮ ಶಿಕ್ಷಣವನ್ನು ಒದಗಿಸಿಕೊಡಬೇಕು. ಆರೋಗ್ಯಭಾಗ್ಯ ಇತರ ಪ್ರಾಪಂಚಿಕ ಭೋಗ ಭಾಗ್ಯಗಳಿಗಿಂತಲೂ ದೊಡ್ಡದು. ಆರೋಗ್ಯಶಿಕ್ಷಣದ ಅನಂತರ, ದೇಹ ಪುಷ್ಟಿಗೊಂಡು ಬಲಯುತವಾದ ಮೇಲೆ ಹೆಂಗಸರಿಗೆ ಶ್ರೇಷ್ಠ ತರಗತಿಯ ವಿದ್ಯಾಭ್ಯಾಸವನ್ನು ಒದಗಿಸಿ ಕೊಡಬೇಕು. ಪುರುಷನ ಕಾರ್ಯಗಳಲ್ಲೆಲ್ಲ ಸಹಾಯಕಳಾಗುವಂತೆ ಹೆಂಗಸಿಗೆ ವಿದ್ಯಾಭ್ಯಾಸ ಮಾಡಿಸಬೇಕು. ತನ್ನ ವಿದ್ಯಾಭ್ಯಾಸದಿಂದ ಮಹಿಳೆಗೆ ಒಂದು ವಸ್ತುವನ್ನು ಅರಿತುಕೊಳ್ಳುವ ಶಕ್ತಿ ಮಾತ್ರವಲ್ಲ; ಆ ವಿಷಯವನ್ನು ಗ್ರಹಿಸಿ ಒಂದು ತೀರ್ಮಾನಕ್ಕೆ ಬರುವ ಶಕ್ತಿಯೂ ಉಂಟಾಗಬೇಕು. ಊಹಾಬಲ, ಗ್ರಹಣಶಕ್ತಿ, ಜಿಜ್ಞಾಸೆ, ವಿಮರ್ಶೆ, ತೀರ್ಮಾನ ಕೊಡುವ ಶಕ್ತಿ–ಎಲ್ಲವೂ ಹೆಂಗಸಿಗೆ ತನ್ನ ವಿದ್ಯೆಯಿಂದ ವಿದಿತವಾಗಬೇಕು. ಕನಗರಗಳ ಹೆಸರು, ದನಗಳ ತಾರೀಕು, ಪ್ರಸಿದ್ಧ ಪುರುಷರ ಜನ್ಮದಿನಗಳು–ಇವುಗಳನ್ನು ಕಲಿತು ಗಿಳಿಯ ಪಾಠದಂತೆ ಒಪ್ಪಿಸುವುದರಿಂದ ಏನೂ ಪ್ರಯೋಜನವಿಲ್ಲ. ಆದರೆ ಆಕೆ ತಾನು ಓದುವ ಪುಸ್ತಕದಲ್ಲಿ ತನ್ಮಯಳಾಗಿ, ತನ್ನ ಭಾವನೆಯಲ್ಲಿ ಗತದಿನದ ಪ್ರಸಂಗಗಳನ್ನೆಲ್ಲ ಚಿತ್ರಿಸಿಕೊಂಡು, ಚರಿತ್ರಕಾರ ಪುಸ್ತಕದಲ್ಲಿ ತೇಲಿಸಿಬಿಟ್ಟಿರುವ ವಿಷಯಗಳನ್ನೆಲ್ಲ ಸಂಗ್ರಹಿಸಿ, ವಿಕಸಿಸಿ, ಪೃಥಕ್ಕರಿಸಿ ಪುಸ್ತಕವನ್ನು ಅರ್ಥಮಾಡಿಕೊಳ್ಳಬೇಕು. ಈ ಕಾರ್ಯ ಮಹಿಳೆಗೆ ತಾನು ಪಡೆಯುವ ಶಿಕ್ಷಣದಿಂದ ಮಾತ್ರ ಸಾಧ್ಯ. ದಯೆ, ಶಾಂತಿ, ಪ್ರೇಮ, ನೀತಿಗಳನ್ನು ಕುರಿತು ಆಕೆಗೆ ಪಾಠಗಳಾಗಬೇಕು.

ಇಷ್ಟಲ್ಲದೆ ಅದೇ ಲೇಖಕ ಹೆಂಗಸರು ಓದತಕ್ಕ ಪುಸ್ತಕಗಳ ವಿಷಯವಾಗಿ ಹೀಗೆ ಬರೆದಿದ್ದಾನೆ: ಮಹಿಳೆಯರು ಓದುವ ಪುಸ್ತಕಗಳು ಗಹನವಾಗಿದ್ದು ವಿಷಯ ಗೌರವದಿಂದ ಕೂಡಿರಬೇಕು. ವಿಷಯ ಗೌರವಗಳಿಲ್ಲದ ಪ್ರಣಯ ಪ್ರಸಂಗಗಳನ್ನು ನಿರೂಪಿಸುವ ಕತೆ, ಕಾದಂಬರಿ, ಪತ್ರಿಕೆಗಳನ್ನು ಮಹಿಳೆಯರಿಂದ ದೂರವಿರಿಸಬೇಕು. ಇವುಗಳನ್ನು ಓದುವದರಿಂದ ಆಕೆಯ ಪವಿತ್ರ ಜೀವನದ ಮೇಲೆ ಅನೇಕ ಕೆಡುಕು ಪರಿಣಾಮಗಳಾಗಬಹುದು. ವಿಖ್ಯಾತ ಲೇಖಕರಿಂದ ರಚಿತವಾದ ಕವನ ಕಾವ್ಯಗಳನ್ನೋದಲು ಆಕೆಗೆ ಅವಕಾಶ ಕಲ್ಪಿಸಿ ಕೊಡಬೇಕು.

ಕಾಮ ಶಿಕ್ಷಣ

ಸ್ತ್ರೀಯರಿಗೆ ಲೈಂಗಿಕ ಶಿಕ್ಷಣದ ಅವಶ್ಯಕತೆ, ರಾಜಕೀಯದಲ್ಲಿ ಸ್ತ್ರೀಯರ ಪಾತ್ರ ಮುಂತಾದ ವಿಷಯಗಳೂ ಗಮನಾರ್ಹವಾದುವು. ಬಹು ಹಿಂದಿನಿಂದಲೂ ನಮ್ಮ ದೇಶದಲ್ಲಿ ಲೈಂಗಿಕ ಶಿಕ್ಷಣಕ್ಕೆ ಉತ್ತೇಜನವಿಲ್ಲ. ಲೈಂಗಿಕ ಶಿಕ್ಷಣಕ್ಕೆ ಯುಕ್ತ ಗುರು ಸಿಕ್ಕುವುದು ಜಗತ್ತಿನ ಎಲ್ಲದೇಶಗಳಲ್ಲೂ ಕಠಿನವೆನಿಸಿದೆ. ಲೈಂಗಿಕ ಸಂಬಂಧದ ಮಾತುಕತೆಗಳಾಡಿದರೇನೇ ಪಾಪವೆಂದು ನಮ್ಮಲ್ಲಿ ಅನೇಕರು ತಿಳಿದಿದ್ದಾರೆ. ಕನ್ನೆಯೊಬ್ಬಳು ಒಬ್ಬ ಯುವಕನೊಡನೆ ಮಾತನಾಡಿದರೆ, ಅವನೊಡನೆ ಓಡಾಡಿದರೆ ನಮ್ಮ ಸಮಾಜ ಅವರತ್ತ ಮೂಗು ಮುರಿಯುತ್ತದೆ; ನಮ್ಮ ಜನರು ಅವರ ಸಲಿಗೆಯನ್ನು ಟೀಕಿಸುತ್ತಾರೆ. ನಮ್ಮ ದೇಶದ ಒಂದೆರಡು ಜನಾಂಗಗಳವರಂತೂ ಹೆಂಗಸರಿಗೆ ಬೆಳಕಿನ ಮುಖವನ್ನೂ ತೋರಿಸುವುದಿಲ್ಲ! ಹೆಂಗಸೆಂದರೆ ಒಂದು ಗುಪ್ತವಸ್ತು, ರಹಸ್ಯವ್ಯಕ್ತಿ ಎಂದು ಕೆಲವರು ಬಗೆದಂತಿದೆ! ಈ ಮೂಢ ಸಂಕುಚಿತ ಸ್ವಭಾವದಿಂದ ಆಗುವ ಹಾನಿಗಳೆಷ್ಟು? ಮಾರ್ಗರೆಟ್ ಕಸಿನ್ಸ್ ಬರೆದಿರುವ ಕತೆಯನ್ನು ಕೇಳಿ: “ಅರಮನೆಯಲ್ಲಿ ಜನಾನಾದಲ್ಲಿ ಒಬ್ಬ ರಾಜಪುತ್ರಿ ಕಾಹಿಲೆ ಬಿದ್ದಳು. ಜನಾನಾದ ಹೆಂಗಸರು ಪರ ಪುರುಷರನ್ನು ನೋಡಬಾರದ ಕಾರಣ ರಾಜಪುತ್ರಿಯ ದೇಹ ಪರೀಕ್ಷಿಸಲು ವೈದ್ಯರಿಗೆ ಅನುಮತಿ ಸಿಗಲಿಲ್ಲ. ಪರದೆಯೊಳಗಿಂದ ರಾಜಕುಮಾರಿ ನೀಡಿದ ಕೈಯನ್ನು ಮಾತ್ರ ವೈದ್ಯರು ಪರೀಕ್ಷಿಸಲು ಸಾಧ್ಯವಾಯಿತು. ರಾಜಪುತ್ರಿ ಸಾಯುವ ಮುನ್ನ ವೈದ್ಯರು ಆಕೆಯ ಮುಖವನ್ನು ಕಂಡರು. ಮೊದಲೇ ಆಕೆಯ ದೇಹವನ್ನು ಪರೀಕ್ಷಿಸಲು ವೈದ್ಯರಿಗೆ ಅನುಮತಿ ದೊರೆತಿದ್ದರೆ ಅವರು ಆಕೆಯನ್ನು ಸಾವಿನಿಂದುಳಿಸಬಹುದಿತ್ತು. ಇಂತಹ ಸಾವುಗಳು ಹಿಂದುಸ್ಥಾನದಲ್ಲಿ ಸಾವಿರಾರು!” ಹುಟ್ಟಿದ ದಿನದಿಂದಲೂ ಹೊರಗಣ ಪ್ರಪಂಚದರಿವೇ ಇಲ್ಲದೆ ತೆರೆಯ ಹಿಂದೆ ಬೆಳೆದು ಬಾಳಿ, ಕೊನೆಗೆ ಮಡಿಯುವ ಹೆಂಗಸರ ಜೀವನವನ್ನು ನೆನೆದರೆ ಎಷ್ಟು ವ್ಯಥೆಯಾಗುತ್ತದೆ! ಪ್ರಾಪಂಚಿಕ, ವ್ಯಾವಹಾರಿಕ ಜ್ಞಾನವಿಲ್ಲದೆ ಸರಿಯಾಗಿ ಗಾಳಿ ಬೆಳಕುಗಳಿಲ್ಲದೆ, ಇನ್ನಿತರರ ಸಂಪರ್ಕವಿಲ್ಲದೆ ಜೀವಿಸುವ ನಮ್ಮ ಕೆಲವು ಮಹಿಳೆಯರು ಯಾವ ವಿಧದಲ್ಲಿ ತಾನೆ ದೇಶದ ಉನ್ನತಿಗೆ ನೆರವಾದಾರು? ಅವರ ಆರೋಗ್ಯವೇ ಕ್ಷೀಣಸ್ಥಿತಿಯಲ್ಲಿರುವಾಗ ಇನ್ನು ಅವರು ಪಡೆಯುವ ಮಕ್ಕಳು ಎಷ್ಟು ಆರೋಗ್ಯದಿಂದಿರುವರು? ನಮ್ಮ ದೇಶದಲ್ಲಿ ಪ್ರತಿ ವರ್ಷವೂ ಆಗುತ್ತಿರುವ ಅಗಣಿತ ಸಾವಿಗೆ ಈ ನಮ್ಮ ಅನಾರೋಗ್ಯದ ಜೀವನವೇ ಕಾರಣ. ಹೆಚ್ಚು ಜನ ಸಾಯುವ ದೇಶಗಳಲ್ಲಿ ನಮ್ಮ ದೇಶ ಎರಡನೆಯದು; ಮೊದಲನೆಯದು ಚೀನ; ಕೇವಲ ೨೭ ವರುಷಗಳು ಭಾರತೀಯನ ಸರಾಸರಿ ಆಯುಷ್ಯ! ಈಯೆಲ್ಲ ದುಷ್ಪರಿಣಾಮಗಳನ್ನು ನಿವಾರಿಸಿ ಶಾಂತ ಸಂತುಷ್ಟ ಸುದೃಢ ಕುಟುಂಬಗಳ ರಚನೆಗೆ ಸ್ತ್ರೀ ಶಿಕ್ಷಣ ಅತ್ಯವಶ್ಯಕವೆಂಬುದನ್ನು ತಾಯ್ತಂದೆಗಳು ಗಮನಕ್ಕೆ ತಂದುಕೊಳ್ಳಬೇಕು.

ನಿಮಿಷಾವಲೋಕನ

(೧೧ ನೇ ಪುಟದಿಂದ)

ಲಾಗಿದೆ; ಅದರಲ್ಲೂ ಸಾಹಿತಿಗಳ ವರ್ಣನೆಯೇ ಹೆಚ್ಚು. ೧ ವಿಷಯವಿವರಣಕ್ಕಿಂತ ನಾಮನಿರ್ದೇಶಸಂಖ್ಯೆಯಿಂದಲೇ ಪುಸ್ತಕ ತುಂಬಿಹೋಗಿದೆ.

ಗೀತಾಪ್ರಭಾ: ಬೆಂಗಳೂರಿನ ಗೀತಾ ಪ್ರಚಾರ ಮಂಡಲಿಯ ಪತ್ರಿಕೆಯ ೨ ನೆಯ ಸಂಚಿಕೆ. ಅರ್ಜುನವಿಷಾದಯೋಗದ ಮೂಲವೂ ಅದರ ಅನುವಾದವೂ ಇದರಲ್ಲಿ ಸಾಗಿದೆ.

ಒಕ್ಕಲಿಗ (ಮಾಸಿಕ)

ಮುಂಬಯಿ ಸರಕಾರದ ಪ್ರಸಿದ್ಧಿಶಾಖೆ ಹೊರಡಿಸುವ ಈ ಕನ್ನಡ ಮಾಸಿಕದ ವಿಶೇಷ ಸಂಚಿಕೆ ೩೬ ಪುಟಗಳುಳ್ಳ ನಾಲ್ಕಾಣೆಯ ಬೆಲೆಯುಳ್ಳದ್ದು. ಇದರಲ್ಲಿ ಟ್ರಾಕ್ಟರ್ ಬಳಕೆ, ಆಲೂಗಡ್ಡೆಯ ಬೆಳೆ, ಬತ್ತಕ್ಕೆ ಹಿಡಿಯುವ ಜಿಟ್ಟೆ, ಗೊಬ್ಬರ ಮುಂತಾದ ಒಕ್ಕಲಿಗರಿಗೆ ಉಪಯುಕ್ತವಾದ ಹಲವಾರು ಬರಹಗಳಿವೆ. ಇದರ ವಾರ್ಷಿಕ ಚಂದಾ ೩ ರೂ., ಬಿಡಿಸಂಚಿಕೆಯ ಬೆಲೆ ನಾಲ್ಕಾಣೆ.

ಮೊಗವೀರ ಸಾಂವತ್ಸರಿಕ

ಈ ಸಾಂವತ್ಸರಿಕ ಸಂಚಿಕೆ ಮುಂಬಯಿಯ ಮೊಗವೀರ ಯುವಕ ಸಂಘದವರ ಪ್ರಕಟಣೆ. ೯೪ ಪುಟಗಳ ಹತ್ತಾಣೆ ಬೆಲೆಯ ಈ ಪುಸ್ತಕದಲ್ಲಿ ಕತೆ, ಪ್ರಬಂಧ ಮುಂತಾದ ೨೨ ಬರಹಗಳಿವೆ. ಶ್ರೀಗಳಾದ ಕೃಷ್ಣಕುಮಾರ ಕಲ್ಲೂರ, ಮುಳಿಯ ತಿಮ್ಮಪ್ಪಯ್ಯ, ರಾ. ಶ್ರೀ. ಕಸ್ತೂರಿ ಮುಂತಾದವರು ಬರಹಗಾರರು. ಸುಂದರವಾಗಿ ಮುದ್ರಿತವಾಗಿದೆ. ಮುಖಪತ್ರದಲ್ಲಿ ದಿ. ಸರೋಜಿನಿನಾಯ್ಡು ಅವರ ಚಿತ್ರವಿದೆ.

ಸರಸ್ವತಿ

ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮನವರ ಸಂಪಾದಕತ್ವದಲ್ಲಿ ಹೊರಡುತ್ತ ಬಂದ ಸ್ತ್ರೀಯರ ಮಾಸಿಕದ ರಜತೋತ್ಸವದ ಸಂಚಿಕೆಯಿದು. ೮೦ ಪುಟಗಳಷ್ಟು ಸ್ತ್ರೀಸಂಬಂಧಿ ಸಾಹಿತ್ಯ ಮತ್ತು ೧೭ ಪುಟಗಳಷ್ಟು ಮಕ್ಕಳ ಸಾಹಿತ್ಯ, ೧೨ ಪುಟಗಳ ತುಂಬ ಮಹನೀಯರುಗಳ ಸಂದೇಶಗಳು, ೮ ಪುಟಗಳಲ್ಲಿ ಮಹಿಳೆಯರ ಛಾಯಾ ಚಿತ್ರಗಳು ಮತ್ತು ಸುಮಾರು ೧೦ ಪುಟಗಳಷ್ಟು ಜಾಹೀರಾತುಗಳು ಈ ಸಂಚಿಕೆಯನ್ನು ಅಲಂಕರಿಸಿವೆ. ಈ ಪತ್ರಿಕೆಯ ಸಂಪಾದಕರ ಮತ್ತು ಮುಖ್ಯಬರಹಗಳ ಧಾಟಿ ಉಡುಪಿಯ ಶ್ರೀ ಪೇಜಾವರ ಮಠದ ಶ್ರೀಪಾದಂಗಳವರ ಸಂದೇಶದ “ಸರಸ್ವತಿಯು ಭಾರತದ ಸ್ತ್ರೀಯರನ್ನು ಪಾಶ್ಚಾತ್ಯ ನಾಗರಿಕತೆಯ ಅತಿರೇಕದಿಂದ ಕೆಳಗಿಳಿಸಿ ಮಧ್ಯಯುಗದ ಅಶಿಕ್ಷಿತತೆ, ಅಜ್ಞಾನ, ಮುಗ್ಧತೆಯ ಸ್ಥಾನದಿಂದ ಮೇಲಕ್ಕೇರಿಸಿ ಅವರಿಗೆ ಉದಾತ್ತ ಮಾರ್ಗವನ್ನು ತೋರಿಸಲಿ” ಎಂಬ ವಾಕ್ಯದ ಅರ್ಥವನ್ನು ಅನುಸರಿಸಿದೆ ಎಂದರೆ ತಪ್ಪಾಗಲಾರದು. ಆದುದರಿಂದ ಇದರ ಬರಹಗಳನ್ನು ಆಧುನಿಕ ಸ್ತ್ರೀಯ ಸ್ಥಾನಮಾನ, ಹಕ್ಕು, ಹೊಣೆಗಳನ್ನು ನಿರ್ಣಯಿಸಬಯಸುವ ಸರ್ವ ಸ್ತ್ರೀಪುರುಷರು ಅಗತ್ಯವಾಗಿ ಓದಬೇಕು.

ಹಳ್ಳಿಗಾಡು

ನಮ್ಮ ಹಳ್ಳಿಯ ನಾಡು
ಸುಖದ ಸೊಬಗಿನ ಗೂಡು
ಸಿರಿಯ ಬೆಡಗಿನ ಬೀಡು
ಸಂಸ್ಕೃತಿಯ ಕಾಡು॥
ಸತತ ಗೆಯ್ಯುವ ಜನರು
ಸಕಲ ವಿದ್ಯಾಧರರು!
ಅಖಿಲ ಭಾರತಕಿವರು
ಆಧಾರರಿಹರು॥
ಹಸಿರುಸೀರೆಯನುಟ್ಟ
ಏರಿ ಬೆಳೆದಿಹ ಬೆಟ್ಟ!
ಪಶು ಮೇದು ಬಲು ಪುಷ್ಟ
ವಿರಲೇನು ಕಷ್ಟ?
ಅಲರ ಗುಂಪಿನ ಕೂಟ.
ಮೇಲೆ ನಲಿಯುವ ಕೀಟ!
ತಂಬೆಲರಿನೋಡಾಟ
ಕವಿಗೆ ಸುಖದೂಟ॥
ಚೆಲುವಿನಡಕೆಯ ತೋಟ!
ನದಿ ತೊರೆಗಳೊಡನಾಟ!
ಅಹಹ ಎಂತಹ ನೋಟ!
ನಾಡಿಗೆ ಲಲಾಟ!
ತುಂಬಿಗಳ ಝೇಂಕಾರ–
ವಂಬುಧಿಯ ಭೋಂಕಾರ
ಕೋಗಿಲೆಯ ಕೂಕಾರ –
ನಾದಪೂರ!
ಧನ್ಯ, ಧನ್ಯನು ನಾನು!
ಸುಖದ ಸಗ್ಗದಸೂನು!
ಹಳ್ಳಿ ಹೊರತಿನ್ನೇನು?
ಬೇರೆ ಬೇಕೇನು?

—“ಮರಕ್ಕಿಣಿ”

ಸಮಸ್ತ ಭಾರತ

ಮದ್ರಾಸಿನಿಂದ ೭೦ ಮೈಲು ದೂರದಲ್ಲಿರುವ ತಿರೂರುಕುಪ್ಪಂ ಎಂಬ ಬತ್ತದ ಬೆಳೆಯ ಸಂಶೋಧನ ಕೇಂದ್ರದಲ್ಲಿ ವಿದ್ಯುತ್ ಪ್ರಯೋಗದಿಂದ ಬತ್ತದ ಉತ್ಪಾದನೆ ಪ್ರತಿ ಎಕರೆಗೆ ಈಗ ಬೆಳೆಯುವುದಕ್ಕಿಂತಲೂ ನೂರಕ್ಕೆ ೩೫ ರಷ್ಟು ಹೆಚ್ಚು ಬೆಳೆಯಲು ಬರುವುದೆಂದು ವಿದ್ಯುತ್ ಪ್ರಯೋಗ ತಜ್ಞರಾದ ಶ್ರೀ ಎ. ಆರ್. ಶ್ರೀನಿವಾಸರಾಯರು ಸಿದ್ಧಪಡಿಸಿ ತೋರಿಸಿದ್ದಾರೆ.

ಪ್ರವಾಸ ಮತ್ತು ನಿರ್ಯಾತಗಳ ಉದ್ದೇಶಗಳಿಗಾಗಿ ಜಪಾನನ್ನು ದುಷ್ಕರ ಚಲಾವಣೆಯ ಪ್ರದೇಶವೆಂದು ಇನ್ನು ಮುಂದೆ ಆಜ್ಞೆ ವಿಧಿಸುವವರೆಗೆ ತಿಳಿಯಬೇಕೆಂದು ಕಲಕತ್ತದ ಕಮರ್ಶಿಯಲ್ ಇಂಟೆಲಿಜನ್ಸ್ ಡೈರೆಕ್ಟರ್ ಜನರಲ್ಲರು ಪ್ರಕಟನೆ ಹೊರಡಿಸಿದ್ದಾರೆ.

ಮುಂಬಯಿಯ ಬ್ಯಾಂಕ್ ನೌಕರರ ಮಹಾಮಂಡಲವು ಜೂನ್ ೨೧ ರಲ್ಲಿ ಹೂಡಬೇಕೆಂದಿದ್ದ ಸಾಂಕೇತಿಕ ಸಂಪನ್ನು ರದ್ದುಗೊಳಿಸಬೇಕೆಂದು ಅದರ ಹಿಂದಿನ ದಿನ ಕೂಡಿದ ಸಭೆಯಲ್ಲಿ ತೀರ್ಮಾನಿಸಿತು.

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗಾಗಿ ಇದು ವರೆಗೆ ಒಟ್ಟು ೯ ಕೋಟಿ ೨೮ ಲಕ್ಷ ರೂಪಾಯಿಗಳು ಕೂಡಿವೆಯೆಂದೂ ಇನ್ನೂ ಪ್ರಾಂತಗಳು ಬ್ಯಾಂಕುಗಳು, ಸರಕಾರೀ ಖಜಾನೆಗಳಲ್ಲಿರುವ ಮತ್ತು ಕೇಂದ್ರದ ಲೆಕ್ಕಪತ್ರದಲ್ಲಿ ಜಮೆಯಾಗದ ಹಣವು ಈ ಅಂಕೆಯಲ್ಲಿ ಸೇರಿಲ್ಲವೆಂದೂ ತಿಳಿದಿದೆ.

ಅ. ಭಾ. ಹಿಂದು ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ವಿ. ಜಿ. ದೇಶಪಾಂಡೆಯವರು ಒಂದು ಪ್ರಕಟಣೆ ಹೊರಡಿಸಿ ರಾಜಸ್ತಾನದಲ್ಲಿಯ ಝಾಲನಾ, ದುಂಗಾರಪೂರಾಗಳಲ್ಲಿಯ ನಿರಾಶ್ರಿತರ ಮೇಲಾದ ಗೋಲಿಬಾರುಗಳ ನಿಷ್ಪಕ್ಷಪಾತ ವಿಚಾರಣೆಗಾಗಿ ಸಮಿತಿಯೊಂದನ್ನು ನಿಯಮಿಸಬೇಕೆಂದು ಹೇಳಿರುವರು.

ಆಸ್ಸಾಮಿನ ಬೆಲ್ಟಾಲಾ ಭೂಕಂಪಾಯದ ತೊಂದರೆಯ ಸಂಬಂಧದಲ್ಲಿ ಬಂಧಿತರಾದವರ ಬಿಡುಗಡೆ ಮಾಡಬೇಕೆಂದು ಬೆಲ್ಟಾಲಾ ಗ್ರಾಮ ನಿವಾಸಿಗಳು ಮೆರವಣಿಗೆಯಲ್ಲಿ ಹೊರಟು ಡೆಪ್ಯುಟಿ ಕಮಿಶನರರ ಕಡೆಗೆ ಹೋಗಿ ಹಿಂದಿರುಗುತ್ತಿದ್ದಾಗ ಪೋಲೀಸರು ಅವರನ್ನು ಚದುರಿಸ ಹೋದರು. ಮೂವರು ಧುರೀಣರನ್ನು ಅವರು ಬಂಧಿಸಿದ್ದರಿಂದ ಮೆರವಣಿಗೆಗಾರರು ಪೋಲೀಸರ ಮೇಲೆ ಕಲ್ಲೆಸೆದರು; ಅದರಿಂದ ಇಬ್ಬರು ಪೋಲೀಸರು ಗಾಯಗೊಂಡರು.

ಬಡೋದೆಯ ವೀಸನಗರ ಕಾಲೇಜಿನ ಮುಖ್ಯ ಗುರುಗಳಾಗಿದ್ದ ಶ್ರೀ ವಿ. ಕೃ. ಗೋಕಾಕರು ಕೊಲ್ಹಾಪುರದ ರಾಜಾರಾಮ ಕಾಲೇಜಿನ ಮುಖ್ಯಗುರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಪೂರ್ವಬಂಗಾಲದ ಗವರ್ನರ್ ಸರ್ ಫ್ರೆಡರಿಕ್ ಬೋರ್ನರ ಆಮಂತ್ರಣದ ಮೇರೆಗೆ ಪಶ್ಚಿಮ ಬಂಗಾಲದ ಗವರ್ನರರಾದ ಡಾ. ಕೈಲಾಸನಾಥ ಕಟಜು ಅವರು ಕಳೆದ ೨೫ ರಲ್ಲಿ ಪೂರ್ವಬಂಗಾಲಕ್ಕೆ ಭೆಟ್ಟಿಯಿತ್ತರು. ಉಭಯ ಪ್ರಾಂತಗಳ ಸ್ನೇಹವನ್ನು ಬೆಳೆಸುವ ಉದ್ದೇಶವೇ ಈ ಭೆಟ್ಟಿಯದಾಗಿದೆಯೆಂದು ತಿಳಿಯುತ್ತದೆ.

ಅನಿರ್ಬಂಧ ಆಯಾತ ಲೈಸೆನ್ಸ ನಂಬರು ೧೧ ರಲ್ಲಿ ತೋರಿಸಲಾದ ಕೆಲವೊಂದು ಸರಕುಗಳು ಹೊಸದಾಗಿ ಹೊರಡಿಸಿದ ಲೈಸೆನ್ಸ ನಂಬರು ೧೫ ರಲ್ಲಿ ಕೆಲವೊಂದು ನಿರ್ಬಂಧಗಳಿಗೊಳಪಡಿಸಲಾಗಿದೆ. ಆದರೆ ಅನಿರ್ಬಂಧ ಆಯಾತ ಲೈಸೆನ್ಸ ನಂಬರು ೧೧ ರನ್ವಯ ಈಗಾಗಲೇ ಆಯಾತ ಮಾಡಲು ವ್ಯಾಪಾರ ಕಂಪೆನಿಗಳು ವಿದೇಶೀ ಕಂಪೆನಿಗಳೊಡನೆ ಕರಾರು ಮಾಡಿಕೊಂಡಿದ್ದಾರೆ. ಅಂಥ ಸರಕುಗಳನ್ನು ಜೂನ್ ೧ ರಿಂದ ಜುಲೈ ೧೫ ರ ವರೆಗೆ ಸುಂಕದ ಅಧಿಕಾರಿಗಳಿಗೆ ಈ ಸರಕುಗಳು ಲೈಸೆನ್ಸ ನಂಬರು ೧೧ ರನ್ವಯ ತರಿಸಲ್ಪಟ್ಟವೆಂಬ ಬಗ್ಗೆ ಖಾತ್ರಿ ಮಾಡಿಕೊಟ್ಟರೆ ಅವುಗಳನ್ನು ಬಂದರಿನಿಂದ ಹೊರಗೆ ಬಿಡಲಾಗುವುದೆಂದು ಸರಕಾರೀ ಪ್ರಕಟನೆ ಹೊಸದಿಲ್ಲಿಯಿಂದ ಹೊರಟಿದೆ.

ಕೇಂದ್ರ, ಪ್ರಾಂತಿಕ, ಮತ್ತು ಸಂಸ್ಥಾನಗಳ ಪ್ರತಿನಿಧಿಗಳ ಎರಡುದಿನಗಳ ಆಹಾರ ಪರಿಷತ್ತು ಮುಂಬಯಿಯಲ್ಲಿ ಜುಲೈ ೧ ಕ್ಕೆ ಸೇರುವುದೆಂದು ತಿಳಿದುಬಂದಿದೆ. ಆಹಾರ ಸ್ವಾವಲಂಬನದ ಯೋಜನೆಯ ವಿವರ ಮುಂತಾದವನ್ನು ಪರಿಷತ್ತಿನಲ್ಲಿ ಚರ್ಚಿಸಬಹುದು.

ಭೂಪಾಲದ ಸರಕಾರೀ ಅಧಿಕಾರಿಗಳು ಜುಲೈ ೧ ರಿಂದ ೬ ತಿಂಗಳೊಳಗೆ ಹಿಂದಿಯನ್ನು ಕಲಿಯಬೇಕೆಂದು ಆಜ್ಞಾಪಿಸಲ್ಪಟ್ಟಿದೆ. ಸರಕಾರೀ ಅಧಿಕಾರಿಗಳಿಗಾಗಿ ರಾತ್ರಿಯ ವರ್ಗಗಳ ವ್ಯವಸ್ಥೆ ಮಾಡಲಾಗುವುದು.

ಕೇಂದ್ರ ವೇತನಸಮಿತಿಯ ಪ್ರಮಾಣದನ್ವಯ ವೇತನ ಮತ್ತು ಪ್ರಾವಿಡೆಂಟ್ ಫಂಡನ್ನು ಕೊಡಬೇಕೆಂಬ ತಮ್ಮ ಬೇಡಿಕೆಯನ್ನು ಜೂನ್ ೩೦ ರೊಳದಾಗಿ ಪೂರೈಸದಿದ್ದರೆ ಸಂಪು ಹೂಡುವೆವೆಂದು ನಾಸಿಕ ನಗರ ಸಭೆಯ ಕೆಲಸಗಾರರು ನೋಟೀಸು ಕೊಟ್ಟಿದ್ದಾರೆ.

ಪೂರ್ವ ಪಂಜಾಬ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ದಿವಾನ ರಾಮಲಾಲರನ್ನು ಇಟೆಲಿಯಲ್ಲಿ ಹಿಂದೀ ರಾಯಭಾರಿಗಳೆಂದೂ ಮುಂಬಯಿ ಪಬ್ಲಿಕ್ ಸರ್ವಿಸ್ ಕಮಿಶನ್ನಿನ ಸದಸ್ಯರಾದ ಅಸಫ್ ಅಲಿ ಅಸಘರ ಫೈಜಿಯವರನ್ನು ಇಜಿಪ್ತದಲ್ಲಿ ಹಿಂದೀ ರಾಯಭಾರಿಗಳೆಂದೂ ನೇಮಿಸಲಾಗಿದೆಯೆಂದು ಭಾರತ ಸರಕಾರದ ವಿದೇಶಖಾತೆ ಪ್ರಕಟಿಸಿದೆ. ಮೃತರಾದ ಸಯ್ಯದ್ ಹುಸೇನರ ಸ್ಥಳಕ್ಕೆ ಫೈಜಿಯವರ ನೇಮಕವಾಗಿದೆ.

ಕೊಲ್ಹಾಪುರದ ವಳಿವಡೆ ಶಿಬಿರದ ಒಬ್ಬ ಹಿಂದೀ ನಿರ್ವಾಸಿತನು ಕೊಲ್ಹಾಪುರ ಸಿಟಿ ಬ್ಯಾಂಕಿನಲ್ಲಿಟ್ಟ ೩೫೦೦ ರೂ. ಗಳ ಅಫರಾತಫರಾ ಮಾಡಿದ ಬಗ್ಗೆ ಸದರೀ ಬ್ಯಾಂಕಿನ ಮ್ಯಾನೇಜಿಂಗ ಡಾಯರೆಕ್ಟರರಾದ ಶ್ರೀ ದತ್ತಾಜಿರಾವ ಗುರುವ ಇವರನ್ನು ತಾ. ೧೬ ನೇ ದಿನ ಪೋಲೀಸರು ಬಂಧನ ಮಾಡಿದ್ದಾರೆ.

ಅಮೇರಿಕದಿಂದ ಹಿಂದುಸ್ತಾನಕ್ಕೆ ೧೯೪೮ ನೇ ಇಸ್ವಿಯಲ್ಲಿ ನಿರ್ಯಾತವಾದ ಬೇರೆ ಬೇರೆ ೪೮ ಪ್ರಕಾರದ ಶಸ್ತ್ರಾಸ್ತ್ರಗಳ ಒಟ್ಟು ಸಂಖ್ಯೆ ೯೬೦೦ ರಷ್ಟಾಯಿತು.

ಉಡುಪಿ ಸರಕಾರಿ ಆಸ್ಪತ್ರೆಗೆ ವಿದ್ಯುದ್ದೀಪಗಳ ವ್ಯವಸ್ಥೆ ಮಾಡಿದ್ದು ಇದರ ಉದ್ಘಾಟನೆಯು ದಿನಾಂಕ ೯ ರಂದು ಸಂಜೆ ಶ್ರೀ ಬಿ. ವೈಕುಂಠ ಬಾಳಿಗಾರ ಹಸ್ತದಿಂದಾಯ್ತು. ಅಂದಿನ ಸಭೆಗೆ ಶ್ರೀ ಕೆ. ಪದ್ಮನಾಭ ಪೈಗಳು ಅಧ್ಯಕ್ಷರಾಗಿದ್ದಳು. ಡಾ. ಶ್ರೀ ಟಿ. ಎ. ಪೈಗಳ ಸ್ವಾಗತವೂ ಶ್ರೀ ಆರ್. ಆರ್. ಕುಂಜೂರ್ ಮುಂತಾದವರ ಭಾಷಣಗಳೂ ಆದಬಳಿಕ ಆಸ್ಪತ್ರೆಯ ಮೆಡಿಕಲ್ ಆಫೀಸರ್ ಕೆಪ್ಟನ್ ಪಿ. ಕೆ. ನಾಯರರು ಅಭಿನಂದಿಸಿದರು.

ಗೋಡಸೆ ಆಪಟೆಯವರ ಗಲ್ಲಿನ ಶಿಕ್ಷೆ ಸ್ಥಿರವಾಯಿತು

ಡಾ. ಪರಚುರೆ ಮತ್ತು ಶಂಕರಕೃಷ್ಣಯ್ಯ ಇವರ ಬಿಡುಗಡೆ

ಗಾಂಧೀ ಕೊಲೆ ಖಟ್ಲೆ ಅಪೀಲಿನ ತೀರ್ಪು

ಪೂರ್ವ ಪಂಜಾಬ ಹೈಕೋರ್ಟಿನಲ್ಲಿ ಮೇ. ೨ ರಿಂದ ಜೂನ ೬ ರ ವರೆಗೆ ನಡೆದ ಮಹಾತ್ಮಾ ಗಾಂಧಿ ಕೊಲೆ ಪ್ರಕರಣದ ಅಪೀಲಿನ ವಿಚಾರಣೆಯ ತೀರ್ಪು ಕೊಡುತ್ತ ತಾ. ೨೧ ದಿನ ನ್ಯಾ. ಭಂಡಾರಿ, ನ್ಯಾ. ಅಚ್ರುರಾಮ ಮತ್ತು ನ್ಯಾ. ಕೋಸಲಾ ಅವರು ಉಳಿದ ಆರೋಪಿಗಳ ಅಪೀಲನ್ನು ನಿರಾಕರಿಸಿ ಡಾ. ಪರಚುರೆ ಮತ್ತು ಶಂಕರ ಕೃಷ್ಣಯ್ಯ ಇವರಿಬ್ಬರನ್ನು ಮಾತ್ರ ನಿರ್ದೋಷಿಗಳೆಂದು ಬಿಡುಗಡೆ ಮಾಡಿದರು.

ಗಾಂಧೀಜಿಯನ್ನು ಪ್ರತ್ಯಕ್ಷ ಕೊಲೆ ಮಾಡಿದ ನಥುರಾಮ ಗೋಡಸೆ ಮತ್ತು ಅವನ ಸಹಕಾರಿಯಾದ ಆಪ್ಟೆಗೆ ವಿಶೇಷ ನ್ಯಾಯಾಲಯದ ಶ್ರೀ ಆತ್ಮಚರಣರು ವಿಧಿಸಿದ್ದ ಮರಣ ದಂಡನೆ ಸ್ಥಿರಗೊಳಿಸಲ್ಪಟ್ಟಿತು. ಕರಕರೆ, ಮದನಲಾಲ ಮತ್ತು ಗೋಪಾಲ ಗೋಡಸೆಯವರಿಗೆ ವಿಧಿಸಲ್ಪಟ್ಟ ಆಜನ್ಮ ಕಾರಾಗೃಹದ ಶಿಕ್ಷೆಯು ಕಾಯಂ ಆಯಿತು. ಆದರೆ ಗೋಪಾಲ ಗೋಡಸೆಗೆ ದಯೆ ತೋರಿಸಬೇಕೆಂದು ನ್ಯಾಯಮೂರ್ತಿಗಳು ಸರಕಾರಕ್ಕೆ ಸೂಚಿಸಿದ್ದಾರೆ. ಮದನಲಾಲನಿಗೂ ದಯೆ ತೋರಿಸಬೇಕೆಂಬ ನ್ಯಾ. ಅಚ್ರುರಾಮರ ಸೂಚನೆಗೆ ಉಳಿದ ನ್ಯಾಯಾಧೀಶರು ಸೈಗುಟ್ಟಲ್ಲ.

೧೯೪೮ ಜನೆವರಿ ೩೦ ನೆ ದಿನ ಸಂಜೆ ಪ್ರಾರ್ಥನೆಯ ಬಯಲಲ್ಲಿ ಮಹಾತ್ಮಾ ಗಾಂಧಿಯವರನ್ನು ಪಿಸ್ತೂಲಿನಿಂದ ನಥುರಾಮ ಗೋಡಸೆಯು ಕೊಂದದ್ದರ ಫಲವಾಗಿ ಅದೇ ಮೇ ೨೧ ನೆ ದಿನ ದಿಲ್ಲಿಯಲ್ಲಿ ಶ್ರೀ. ಆತ್ಮಚರಣರ ವಿಶೇಷ ನ್ಯಾಯಾಲಯದಲ್ಲಿ ಪ್ರಾರಂಭವಾದ ಈ ಪ್ರಕರಣ ದಿಸೆಂಬರ ೩೦ ಕ್ಕೆ ಮುಕ್ತಾಯಗೊಂಡು ಕೊಲೆ, ಕೊಲೆಯ ಒಳಸಂಚು, ಶಸ್ತ್ರಾಸ್ತ್ರ ಕಾಯದೆಯ ಉಲ್ಲಂಘನೆಯೆ ಮೊದಲಾದ ಅಪರಾಧಗಳಿಗಾಗಿ ನಥುರಾಮ ಗೋಡಸೆಗೆ ಮತ್ತು ನಾರಾಯಣ ಆಪಟೆಗೆ ಗಲ್ಲು, ವಿಷ್ಣು ಕರಕರೆ, ಮದನಲಾಲ ಪಹವಾ (೧೯೪೮ ಜನೆ ೨೦ ದಿನ ಗಾಂಧೀಜಿಯ ಮೇಲೆ ಬಾಂಬು ಒಗೆದವ, ಗೋಪಾಲ ಗೋಡಸೆ, ಡಾ. ಪರಚುರೆ, ಮತ್ತು ಶಂಕರ ಕೃಷ್ಣಯ್ಯ ಇವರಿಗೆ ಕರಿನೀರಿನ ಶಿಕ್ಷೆಯಿತ್ತು, ಡಾ. ಸಾವರಕರರನ್ನು ಮಾತ್ರ ನಿರ್ದೋಷಿಯೆಂದು ಬಿಡುಗಡೆ ಮಾಡಲಾಗಿತ್ತು.

ತೀರ್ಪಿನ ವಿವರಗಳು

೩೧೫ ಫುಲ್ಸ್‌ಕೇಪ ಪುಟಗಳನ್ನಾವರಿಸಿದ ಈ ತೀರ್ಪಿನಲ್ಲಿ ಹೈಕೋರ್ಟ ಫುಲ್ ಬೆಂಚಿನವರು ಡಾ. ಪರಚುರೆ ಮತ್ತು ಶಂಕರ ಕೃಷ್ಣಯ್ಯನ ಬಿಡುಗಡೆಗೆ ಕಾರಣಕೊಡುತ್ತ, ಡಾ. ಪರಚುರೆಯವರ ಮೇಲಿನ ಆರೋಪ ನಿಸ್ಸಂದಿಗ್ಧವಾಗಿ ಸಿದ್ಧಗೊಳಿಸಲ್ಪಟ್ಟಿಲ್ಲವೆಂದೂ ಅವರಿಂದ ಪಡೆದ ಕಬೂಲಿ ಜವಾಬು ಅಕ್ರಮದಿಂದ ಮತ್ತು ಒತ್ತಾಯದಿಂದ ಪಡೆದಂತಿದ್ದು, ಅವರ ವಿರುದ್ಧ ಸಾಕ್ಷಿ ನುಡಿದವರ ಮಾತುಗಳು ವಿಶ್ವಾಸಾರ್ಹವಾಗಿಲ್ಲವೆಂದೂ ಹೇಳಿದ್ದಾರೆ. ಅದರಿಂದ ಆರೋಪಿಗೆ ಸಂಶಯದ ಲಾಭವಿತ್ತು ಅವರನ್ನು ಎಲ್ಲ ಆರೋಪಗಳಿಂದ ಮುಕ್ತಗೊಳಿಸಲಾಗಿದೆ. ಶಂಕರಕೃಷ್ಣಯ್ಯನಾದರೂ ಮಾಫಿ ಸಾಕ್ಷಿದಾರನಾದ ಬಡಗೆಯ ಸೇವಕನಿದ್ದು ಗಾಂಧೀಜಿಯ ಪ್ರಾಣಾಪಹಾರದ ಒಳಸಂಚಿನಲ್ಲಿ ಅವನ ಅಂಗವಿತ್ತೆನ್ನಲು ಸ್ಪಷ್ಟ ಪ್ರಮಾಣಗಳಿಲ್ಲವಾದ್ದರಿಂದ ಬಲವಾದ ಸಂಶಯವಿದ್ದರೂ ಅವನನ್ನು ನಿರ್ದೋಷಿಯೆಂದು ಬಿಡುಗಡೆ ಮಾಡಲಾಯಿತು.

ಗಾಂಧೀಜಿಯ ಕೊಲೆಯ ಒಳಸಂಚಾಗಿತ್ತೆಂಬುದನ್ನು ಒಪ್ಪುತ್ತ ನ್ಯಾಯಾಧೀಶರು, ಗೋಡಸೆ ಮತ್ತು ಆಪಟೆ ಇವರು ಮಹಾತ್ಮರ ಧೋರಣವನ್ನೊಪ್ಪದೆ ಅಹಿಂಸೆಯ ಮೂರ್ತಿಯನ್ನು ಹಿಂಸೆಯಿಂದ ದೂರೀಕರಿಸುವ ಹೀನವೂ ಕ್ರೂರವೂ ಆದ ಪೂರ್ವನಿಯೋಜಿತ ಕೃತ್ಯ ನಡೆಸಿದ್ದಕ್ಕೆ ಒಂದೇ ಒಂದು ಶಿಕ್ಷೆಯೆಂದರೆ ಗಲ್ಲು ಎಂದು ಹೇಳಿದ್ದಾರೆ. ಕರಕರೆಯೂ ಒಳಸಂಚಿನಲ್ಲಿ ಭಾಗವಹಿಸಿದ್ದರಿಂದ ಅವನಿಗೆ ಆಜನ್ಮ ಕಾರಾಗೃಹ ಶಿಕ್ಷೆಯಾಗಬೇಕು. ಮದನಲಾಲ ಪಹವಾ ಒಳಸಂಚಿನಲ್ಲಿ ಮುಖ್ಯ ಪಾತ್ರ ವಹಿಸದಿದ್ದರೂ ಅದರಲ್ಲಿ ಆಸ್ಥೆ ವಹಿಸಿ ಗಾಂಧೀಜಿಯ ಮೇಲೆ ಅರಳೆ ಚಿಪ್ಪಿನ ಮದ್ದು ಹಚ್ಚಿ ಒಗೆದುದರಿಂದ ಮಾನವ ಜೀವಿತದ ಬೆಲೆಯೇ ಅವನಿಗಿದ್ದಿಲ್ಲವೆಂದು ಸಿದ್ಧವಾಗುವದು. ಅವನಿಗೂ ದಯೆ ತೋರಿಸುವ ಅವಶ್ಯಕತೆ ಕಾಣುವದಿಲ್ಲ.

ಗೋಪಾಲ ಗೋಡಸೆ ಮಾತ್ರ ಆಸ್ಥೆಯಿಂದ ಈ ಸಂಚಿನಲ್ಲಿ ಭಾಗವಹಿಸಿಲ್ಲ. ತನ್ನ ಅಣ್ಣನಿಗೆ ಸಹಾಯ ಮಾಡಬೇಕೆಂಬ ಬುದ್ಧಿಯಿಂದಲೂ ಅಣ್ಣನು ತನ್ನ ಹೆಂಡತಿಯ ಹೆಸರಿಗೆ ೩೦೦೦ ರೂಪಾಯಿಯ ವಿಮೆಯನ್ನು ಬರೆದುಕೊಟ್ಟಿದ್ದರ ಕೃತಜ್ಞತೆಯಿಂದಲೂ ಅವನು ಇದರಲ್ಲಿ ಪ್ರವೇಶಿಸಿದನು. ಆದರೂ ಅವನು ಪ್ರತ್ಯಕ್ಷವಾಗಿ ಯಾವ ಆಕೃತ್ಯವನ್ನೂ ಮಾಡಿಲ್ಲವಾಗಿ ಅವನಿಗೆ ವಿಧಿಸಲ್ಪಟ್ಟಿರುವ ಆಮರಣ ಶಿಕ್ಷೆಯ ವಿಷಯದಲ್ಲಿ ದಯೆ ತೋರಿಸಬೇಕೆಂದು ನ್ಯಾಯಾಧೀಶರು ಸರಕಾರಕ್ಕೆ ಸೂಚಿಸಿದ್ದಾರೆ. ಡಾ. ಪರಚುರೆಯವರನ್ನು ಬಿಡುಗಡೆ ಮಾಡಿದ ಕೂಡಲೆ ಅವರನ್ನು ಪಂಜಾಬ ಸುರಕ್ಷಿತತೆಯ ಕಾಯದೆಯನ್ವಯ ಪುನಃ ಬಂಧಿಸಿ ಸೆರೆಯಲ್ಲಿರಿಸಲಾಗಿದೆ.

ಡಾ. ರಾಮಮನೋಹರ ಲೋಹಿಯಾರವರ ಖಟ್ಲೆಯಲ್ಲಿ ಪಂ. ಜವಾಹರಲಾಲ ಮತ್ತು ಇತರ ಏಳು ಜನರನ್ನು ಆರೋಪಿ ಪರವಾಗಿ ಸಾಕ್ಷಿಗಳೆಂದು ಕರೆಸಬೇಕೆಂದು ಡಾ. ಲೋಹಿಯಾರವರ ಪರವಾಗಿ ಕೊಟ್ಟಿದ್ದ ಅರ್ಜಿಯನ್ನು ಹೊಸದಿಲ್ಲಿಯ ಮ್ಯಾಜಿಸ್ಟ್ರೇಟರು ತಿರಸ್ಕರಿಸಿದರು.

ಗುಂಪಾಗಿ ... ತೆಗೆದು ಕೊಂಡರು. ಅವರಿಂದ ಕಚೇರಿ ಇದಿ ವಾರವೂ ಕಿರಿದಿರಬಲ್ಲುದಾಯ್ತು.

ಬಂ... ಲಿನ ವಿಹಾರ ... ಖಾನೆ, ಹೊಸ್ಟ... ಬೆಂಗಳೂರು ೨ ಮಹತ್ವವಿರುವ ...

ವಿಜ್ಞಾನದ ಸಾಮಾಜಿಕ ಹೊಣೆ

[ಈ ಕೆಳಗಿನದು "ವಿಜ್ಞಾನದ ಸಾಮಾಜಿಕ ಹೊಣೆ" ಎಂಬ ವಿಷಯದ ಮೇಲೆ ಚಿಕಾಗೋ ವಿಶ್ವವಿದ್ಯಾನಿಲಯದ ಅದಿಭೌತಶಾಸ್ತ್ರ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಹ್ಯಾರಿಸನ್ ಎಸ್. ಬ್ರೌನರು ಮೊದಲ ಅಧಿವೇಶನದಲ್ಲಿ ಮಾಡಿದ ಭಾಷಣದ ಸಾರ. ಇವರು ಅವರನ್ನು ಅಮೇರಿಕದ ಗುಂಪಿನ ಅಣುಶಕ್ತಿ ಸಂಬಂಧವಾದ ಅಭ್ಯಾಸದಲ್ಲಿ ೧೯೪೩ರಿಂದ ೧೯೪೬ರ ವರೆಗೆ ಸೇರಿಸಿಕೊಳ್ಳಲಾಗಿತ್ತು.
— ಎಂ. ಎಂ.]

ನಾನು ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿದಾಗ ನಮ್ಮೂರಿನ ಪ್ರಮುಖ ವ್ಯಾಪಾರಿಯೊಬ್ಬನು ಪದವೀದಾನ ಸಮಾರಂಭದಲ್ಲಿ ಹೀಗೆ ಹೇಳಿದನು: "ಜಗತ್ತೀಗ ಬಹಳ ಶೋಚನೀಯ ಪರಿಸ್ಥಿತಿಯಲ್ಲಿದೆ. ನಾಳಿನ ನಾಗರಿಕರಾದ ನಿಮ್ಮ ಕೈಯಲ್ಲಿದೆ ಮಾನವರ ವಾಸಕ್ಕೆ ಯೋಗ್ಯವನ್ನಾಗಿ ಅದನ್ನು ರೂಪಿಸುವುದು. ಯುದ್ಧವಿಲ್ಲದಂತೆ ಮಾಡಿ ಎಲ್ಲರಿಗೂ ಜೀವನಾವಶ್ಯಕ ಸಾಮಗ್ರಿಗಳು ಸಿಗುವಂತೆ ಮಾಡುವುದು ನಿಮ್ಮ ಕರ್ತವ್ಯ."

ಇಂಥ ಪದವೀದಾನ ಸಮಾರಂಭ ಭಾಷಣಗಳನ್ನು ಆ ವರ್ಷ ಜಗತ್ತಿನ ಎಲ್ಲೆಡೆಯಲ್ಲೂ ಕೊಟ್ಟಿರಬೇಕೆಂದು ತೋರುತ್ತದೆ; ನನಗೆ ತಿಳಿದ ಹಾಗೆ ಈಗಲೂ ಇಂಥ ಭಾಷಣಗಳು ನಡೆಯುತ್ತಲೇ ಇವೆ.

ಆದರೆ ಹೈಸ್ಕೂಲು ಪದವೀಧರನು ಹೊರಗಿನ ಪ್ರಪಂಚದಲ್ಲಿ ಕಾಲಿಟ್ಟು ವ್ಯವಹಾರವನ್ನು ಸುಧಾರಿಸಲು ಪ್ರಯತ್ನಿಸಿದೊಡನೆಯೇ ತನ್ನನ್ನು ಅನ್ಯರು ದಡ್ಡ, ಅವಿವೇಕಿ, ಅನನುಭವಿ ಎಂದು ಕರೆಯುವುದು ಅನುಭವಕ್ಕೆ ಬರುತ್ತದೆ. ಹಳಬರಿಗೆ ಹೊಸಬರು ಜಗತ್ತನ್ನು ಸುಧಾರಿಸುವುದು ಬೇಕಾಗಿಲ್ಲ ಎಂಬುದು ಅವನ ತಿಳುವಳಿಕೆಗೆ ಬರುತ್ತದೆ. ತರುಣರಲ್ಲಿ ಅನೇಕರಿಗೆ ಕಲ್ಲುಗೋಡೆಗೆ ತಲೆ ಚಚ್ಚಿಕೊಂಡುದರಿಂದ ಉಂಟಾಗುವ ಹಾಗೆ ಬೆಳೆದುಬರುವ ಸಿಡುಕೇ ಅವರನ್ನು ಎದುರಿಸುವ ಪ್ರತಿಭಟನೆಗೆ ಸಾಕಷ್ಟು ಪ್ರಮಾಣವಾಗಿದೆ.

ಆದರೂ ನಾವು ಕೆಲ ವರ್ಷಗಳ ಹಿಂದಿನ ಕಾಲದತ್ತ ಕಣ್ಣು ಹೊರಳಿಸಿದರೆ, ಕಳೆದ ಯುದ್ಧದಲ್ಲಿ ಯುದ್ಧಮಾಡಿ ಸತ್ತ ಯೋಧರಲ್ಲಿ ಬಹುಸಂಖ್ಯರು ಇಪ್ಪತ್ತು ಮತ್ತು ಅದಕ್ಕೂ ಕಡಿಮೆ ವರ್ಷ ವಯಸ್ಸಿನವರಾಗಿದ್ದರು ಎಂಬುದು ಕಂಡುಬರುತ್ತದೆ. ಅಣುಬಾಂಬಿನ ರಚನೆಗಾಗಿ ಆಸಕ್ತಿಯಿಂದ ದುಡಿದ ಬಹುಸಂಖ್ಯ ವಿಜ್ಞಾನಿಗಳು ಸುಮಾರು ಇಪ್ಪತ್ತರ ವಯಸ್ಸಿನವರೇ. ಚಿಕ್ಕವರು ಹೋರಾಡಲಿಕ್ಕೂ ಸಾಯಲಿಕ್ಕೂ ತಕ್ಕಷ್ಟು ಬೆಳೆದವರೆಂದು ನಮಗೆ ಹೇಳಲಾಗುತ್ತದೆ. ಅಣುಬಾಂಬನ್ನು ಹೇಗೆ ಮಾಡಬೇಕೆಂಬುದನ್ನು ಗುಣಿಸಿಹೇಳಲು ಅವರು ಸಾಕಷ್ಟು ದೊಡ್ಡವರು; ಆದರೆ ಆಧುನಿಕ ಜಗತ್ತಿಗೆ ಎದುರಾಗಿ ಅದನ್ನು ನಾಶಗೊಳಿಸುವೆವೆಂದು ಬೆದರಿಕೆ ಹಾಕುವ ಭಯಂಕರ ಸಮಸ್ಯೆಗಳ ಬಗ್ಗೆ ಏನು ಮಾಡಬೇಕೆಂದು ಹೇಳಲು ಮಾತ್ರ ಅವರು ಚಿಕ್ಕವರು!

ಇಂದು ವಿಜ್ಞಾನದ ಸಾಮಾಜಿಕ ಹೊಣೆಗಳನ್ನು ಕುರಿತು ಮಾತಾಡುವಾಗ ಚಿಕ್ಕವರಿಗೆ ಸ್ವಲ್ಪ ಸುಲಭವಾಗಿ ತಿಳಿಯುವ, ಆದರೆ ದೊಡ್ಡವರಿಗೆ ತಿಳಿಯಲು ಕಷ್ಟವಾಗುವ ಕೆಲ ವಿಷಯಗಳನ್ನು ಹೇಳುತ್ತೇನೆ. ಅದೇಕೆಂದರೆ, ಚಿಕ್ಕವರಲ್ಲಿ ವಯಸ್ಸಾದ ಹಾಗೆ ನಶಿಸಿ ಹೋಗುವ ಒಂದು ಗುಣವಿದೆ: ಅದೆಂದರೆ ಕಲ್ಪನಾಶಕ್ತಿ. ಕಲ್ಪನಾಶಕ್ತಿಯು ವಿಜ್ಞಾನದ ಒಂದು ಬಿಡಿಸಲಾರದ ಭಾಗ; ಅದು ಚಿಕ್ಕವರಿಗೆ ನೈಸರ್ಗಿಕವಾಗಿ ಇರುತ್ತದೆ. ದುರ್ಭಾಗ್ಯವಶದಿಂದ ದೊಡ್ಡವರಾಗುತ್ತ ಹೋದಂತೆ ಅದು ಬತ್ತಿ ಹೋಗುತ್ತದೆ; ಆದರೂ ಅದೀಗ ನಮ್ಮ ದುರದೃಷ್ಟದ ಪ್ರಪಂಚಕ್ಕೆ ಅನಿವಾರ್ಯವಾಗಿ ಬೇಕಾದ ಗುಣ.

ವಿಜ್ಞಾನದ ವಿಘಾತಕ ಪ್ರಯೋಗ

ಕಳೆದ ಮೂರು ಶತಮಾನಗಳಿಂದ ವಿಜ್ಞಾನದ ಸಂಶೋಧನೆ ಸಮಾಜದ ಮೇಲೆ ಒಳ್ಳೆಯ ಪರಿಣಾಮ ಕೊಟ್ಟಿದೆ; ಆದರೆ ಜನರು ಮಾತ್ರ ನಮ್ಮ ಪ್ರಪಂಚ ಅದರಿಂದ ಏನಾಗಿದೆ ಎಂಬುದನ್ನು ತಿಳಿದುಕೊಂಡೂ ಇಲ್ಲ, ತಿಳಿದುಕೊಳ್ಳಲು ಮನಸ್ಸು ಮಾಡಲೂ ಇಲ್ಲ. ನ್ಯೂಟನ್ನನ ಕಾಲದಲ್ಲೇ ವಿಜ್ಞಾನದ ಸಂಶೋಧನೆಯ ಮೇಲೆ ನಿಂತ ತಾಂತ್ರಿಕ ವಿದ್ಯೆಯ ಮೂಲಕ ಬೇಕಾದಷ್ಟು ಸುಖಸಾಮಗ್ರಿಗಳನ್ನೂ ಲಾಭವನ್ನೂ ಪಡೆಯಬಹುದೆಂದು ಜನರು ಅರಿತರು. ಪ್ಯಾಶ್ಚರನ ಕಾಲದಿಂದ ವೈದ್ಯವಿದ್ಯೆಗೆ ವಿಜ್ಞಾನವನ್ನು ಬಳಸಿಕೊಳ್ಳುವುದರಿಂದ ಹೆಚ್ಚು ಕಾಲ ಬದುಕಬಹುದೆಂದು ಅವರು ತಿಳಿಯುತ್ತ ಬಂದರು.

ಲಿಯೊನಾರ್ಡೋ ಡಾ. ವಿನ್ಸಿಯ ಕಾಲದಿಂದ ಭೌತಿಕ ಸಾಧನಗಳ ಮೂಲಕ ಯುದ್ಧಗಳನ್ನು ಗೆಲ್ಲಬಹುದೆಂದು ಲೋಕಕ್ಕೆ ಗೊತ್ತಾಯಿತು. ವರ್ಷ ಹೋದ ಹಾಗೆ ತಾಂತ್ರಿಕ ಚಾರ್ವಾಕ ಮತ ಬೆಳೆದು ಬಂದಿತು; ಹೊಸ ಹೊಸ ತಾಂತ್ರಿಕ ಜ್ಞಾನದ ಬೇಡಿಕೆ ಹೆಚ್ಚುತ್ತ ಹೋಯಿತು; ಹೆಚ್ಚು ಹೆಚ್ಚು ಜನರು ವಿಜ್ಞಾನಿಗಳೂ ತಾಂತ್ರಿಕ ತಜ್ಞರೂ ಆಗುತ್ತ ನಡೆದರು. ವಿಜ್ಞಾನಿಯೆಂದರೆ ಹೊಸದಾದ ಒಂದು ಶ್ರೀಮಂತ ಜೀವನವನ್ನು ಸೃಷ್ಟಿಸಬಲ್ಲವನೆಂದು ತಿಳಿಯಲಾರಂಭವಾಯಿತು. ಹೆಚ್ಚು ಲಾಭ ಪಡೆಯಲು, ಕಡಿಮೆ ಕಾಲ ದುಡಿಯಲು, ಹೆಚ್ಚು ವರ್ಷ ಬದುಕಲು, ಯುದ್ಧಗಳನ್ನು ಗೆಲ್ಲಲು—ಒಂದು ರಾಷ್ಟ್ರದ ಜನರು ಇದಕ್ಕಿಂತ ಹೆಚ್ಚು ಇನ್ನೇನನ್ನು ಅಪೇಕ್ಷಿಸಿಯಾರು ? ತನ್ನ ಅಜ್ಞಾನದ ಸಾಮರ್ಥ್ಯದಲ್ಲಿ ಮಾನವಕುಲವು ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳನ್ನು ಉದ್ಧಾರಕಗಳೆಂದು ಸ್ವೀಕರಿಸಿತು; ಅದು ಪ್ರಶ್ನಿಸಲಿಲ್ಲ, ಅವು ತನ್ನನ್ನು ಎಲ್ಲಿಗೆ ಒಯ್ಯುವುವೆಂದು ಕೇಳಲಿಲ್ಲ!

ಅವೆಲ್ಲಿಗೆ ಅದನ್ನೊಯ್ದವು?

ಜಗತ್ತಿನ ಬಹುಭಾಗಕ್ಕೆ ಅಭೂತಪೂರ್ವ ಸುಖವನ್ನು ತಂದುಕೊಟ್ಟವು.

ಇನ್ನೂ ಹೆಚ್ಚಿನ ಭಾಗಕ್ಕೆ ಅಭೂತಪೂರ್ವವಾದ ದುಃಖವನ್ನು ಅವು ತಂದೊಡ್ಡಿದವು.

ಮುಂದಿನ ಜಗತ್ತಿಗೆ (ಚಿಕ್ಕವರಾದ ನೀವು ಬದುಕಲಿರುವ ಜಗತ್ತಿಗೆ) ತಾಂತ್ರಿಕ ಜ್ಞಾನದ ಬೆಳವಣಿಗೆಯು ಪ್ರಲಯವನ್ನು ತರಬಹುದು. ಅಥವಾ ಜನರಿಗೆ ತಂತಮ್ಮೊಳಗೂ ತಮ್ಮ ಅವರಣದೊಡನೆಯೂ ವಿವೇಕದಿಂದ ಹೊಂದಿಕೊಂಡು ಬಾಳುವ ಅವಕಾಶವುಳ್ಳ ಸಮದರ್ಶಿತ್ವದ ಪ್ರಪಂಚವನ್ನು ರೂಪಿಸುವುದರಲ್ಲಿ ಅದು ಸಹಾಯಕವಾಗಬಹುದು. ಕಡೆಯ ಪರಿಣಾಮವು ಮುಂದಿನ ಬಾಳಿಗಾಗಿ ನಾವು ಮಾಡುವ ಯೋಜನೆಯನ್ನು ತಯಾರಿಸುವುದರಲ್ಲಿ ಬಳಸುವ ಸದ್ಬುದ್ಧಿ ಮತ್ತು ಕಲ್ಪನಾಶಕ್ತಿಗಳ ಮೇಲೆ ಅವಲಂಬಿಸಿದೆ—ಮಾನವನ ಕಾರ್ಯದ ಇತರ ಕ್ಷೇತ್ರಗಳಿಂದ ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನವನ್ನು ಬೇರ್ಪಡಿಸಿ ಶಾಂತಿಯುತವೂ ಸುಸ್ಥಿರವೂ ಆದ ಪ್ರಪಂಚಕ್ಕೆ ತಕ್ಕ ಮಾದರಿಯಲ್ಲಿ ರೂಪಿಸುವುದಕ್ಕೆ ಬಳಸುವ ಸದ್ಬುದ್ಧಿ ಮತ್ತು ಕಲ್ಪನಾಶಕ್ತಿಗಳ ಮೇಲೆ ನಿಂತಿದೆ.

ದುರದೃಷ್ಟದ ಚರಿತ್ರೆ

ನಾವು ಚರಿತ್ರೆಯತ್ತ ನೋಡೋಣ. ಅದು ಸುಭಗವಾಗಿಲ್ಲ! ವಿಜ್ಞಾನ, ತಾಂತ್ರಿಕ ಜ್ಞಾನಗಳು ರಾಷ್ಟ್ರಗಳ ಆಳರಸರ ಕೈಯಲ್ಲಿ ಬಲಾತ್ಕಾರದ ಮತ್ತು ಅಭೂತಪೂರ್ವ ಪರಿಣಾಮಗಳೆನಿಸುವ ದಮನದ ಸಾಧನಗಳನ್ನು ಇಟ್ಟಿವೆ. ಯುದ್ಧದ ಆಧುನಿಕ ಆಯುಧಗಳು ದೊಡ್ಡ ಗುಂಪಿನ ಜನರ ಮೇಲೆ ಚಿಕ್ಕ ಗುಂಪಿನವರು ತಮ್ಮ ಆಳಿಕೆಯನ್ನು ಹೇರಲು ಸಾಧ್ಯಮಾಡಿಕೊಡುತ್ತವೆ. ಇಂದಿನ ಸರ್ವಾಧಿಕಾರಿತ್ವದ ರಾಜ್ಯಗಳಲ್ಲಿ / ಆಳುವವರ ಕೈಯಲ್ಲಿರುವ ಶಸ್ತ್ರಾಸ್ತ್ರಗಳು ಜನತೆಯ ದಂಗೆಗಳನ್ನು ಜಯಪ್ರದವಾಗಲು ಬಿಡುವುದಿಲ್ಲ.

ಹಿಂದೆ ಚಿಕ್ಕಪುಟ್ಟ ಒರಟು ಆಯುಧಗಳನ್ನು ಹಿಡಿದು ಜನಜಂಗುಳಿಗೆ ನಿರಂಕುಶ ಪ್ರಭುತ್ವದ ವಿರುದ್ಧವಾಗಿ ದಂಗೆಯೇಳಲು ಸಾಧ್ಯವಿತ್ತು. ಇಂದಾದರೋ ಪ್ರಯೋಗವಿಜ್ಞಾನವು ನಿರಂಕುಶ ಪ್ರಭುತ್ವವು ಹಿಂಸಾಸಾಧನಗಳಿಂದ ಅಂತರಿಕವಾಗಿ ಬುಡಮೇಲು ಮಾಡುವ ಪ್ರಯತ್ನಕ್ಕೆ ಬಗ್ಗದೆ ಅಭೇದ್ಯವಾಗಿ ಉಳಿಯುವಂತೆ ಮಾಡಿದೆ.

ಸಾರಿಗೆ ಸಂಪರ್ಕಗಳಲ್ಲಿಯ ಸುಧಾರಣೆಗಳು ಪೋಲೀಸು ಚಟುವಟಿಕೆಗಳ ಅಪ್ರಯೋಜಕತೆಯನ್ನು ಹೆಚ್ಚಿಸಿವೆ. ಕ್ರಾಂತಿಕಾರಿ ಕ್ರಮಗಳಾದ ಸಾಮೂಹಿಕ ಸಂಪರ್ಕ, ರೋಟರಿ, ಮುದ್ರಾಯಂತ್ರಗಳು, ಆಕಾಶವಾಣಿ ಮತ್ತು ಚಲಚ್ಚಿತ್ರಗಳು ಪ್ರಚಾರದ ಬಲಿಷ್ಠ ಸಾಧನಗಳೆನಿಸಿವೆ. ಈ ಕಾಲದಲ್ಲಿ ಕೋಟ್ಯಂತರ ಜನರಲ್ಲಿ ಪ್ರಚಾರಮಾಡಲು ಅನುಕೂಲವಿರುವಾಗ, ಪ್ರಜೆಗಳಿಗೆ ತಿಳಿಯದಂತೆ ಹುಸಿಯನ್ನು ಉಣಿಸಲು ಸಾಧ್ಯವಿರುವಾಗ, ಅಜ್ಞಾನಕೂಪದಲ್ಲಿ ಅವರನ್ನು ಕೆಡಹಿ ಇಡಲಾಗುವಾಗ ಜನರು ಸರಕಾರದ ನಿಯಂತ್ರಣದ ಎದುರು ಬಲಹೀನರಾಗಿಹೋಗುವರು.

ಉಗ್ರವಾದ ರಾಷ್ಟ್ರೀಯತೆ ರಾಷ್ಟ್ರರಾಷ್ಟ್ರಗಳಲ್ಲಿ ಯುದ್ಧಗಳುಂಟಾಗುವಂತೆ ಮಾಡುತ್ತದೆ ಎಂಬುದನ್ನು ಇತಿಹಾಸ ನಮಗೆ ಕಲಿಸಿದೆ. ಈಗ ಯುದ್ಧಗಳೆಂದರೆ ಹಿಂದೆ ಎಂದೂ ಇರದ ತಾಂತ್ರಿಕ ಪದ್ಧತಿಗಳಲ್ಲಿಯ ಸ್ಪರ್ಧೆಗಳಾಗಿಬಿಟ್ಟಿವೆ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧವು ತಾಂತ್ರಿಕ ಜ್ಞಾನಾಭಿವೃದ್ಧಿಯ ಮೂಲಕ ದುಷ್ಕರವಾದ ವಿನಾಶಕ ಕೃತ್ಯವನ್ನು ಕಲ್ಪನಾತೀತವೆನಿಸುವಷ್ಟು ಸುಕರವನ್ನಾಗಿ ಮಾಡಿಕೊಟ್ಟ ಅವಧಿಯೆಂದು ಇತಿಹಾಸ ಬರೆದಿಡುತ್ತದೆ.

ಆದರೆ ಇನ್ನೂ ಪರಿಸ್ಥಿತಿಯು ಒತ್ತಾಯದಿಂದ ಮುಂದೆ ಮಾಡಬಹುದಾದುದರ ಚಿಕ್ಕಪುಟ್ಟ ಪ್ರಾರಂಭಿಕ ಅಂಶಗಳನ್ನು ನಾವು ಕಂಡಿದ್ದೇವಷ್ಟೆ. ಸದ್ಯಃ ತಂತನ್ನ ಸೈನಿಕ ಸುರಕ್ಷಿತತೆಯ ದೃಷ್ಟಿಯಿಂದ ಪ್ರತಿಯೊಂದು ರಾಷ್ಟ್ರವೂ ವಿಜ್ಞಾನವನ್ನು ಸಂಘಟಿಸಿದೆ. ಹೀಗಿರುವಾಗ ಯುದ್ಧತಂತ್ರದ ಪುರೋಗತಿ ಮತ್ತಷ್ಟು ತೀವ್ರಗತಿಯಿಂದ ಸಾಗಬಹುದೆಂದು ನಾವು ನಿರೀಕ್ಷಿಸಬಹುದು.

ನಮ್ಮ ಸದಾಶಯಗಳು ಕೂಡ ಕಷ್ಟ ನಷ್ಟಗಳನ್ನು ತಂದೊಡ್ಡಿವೆ. ನಿರ್ಮಲೀಕರಣದ ಕ್ರಮಗಳ ಪ್ರಸರಣ ಮತ್ತು ಹೆಚ್ಚು ಜನರಲ್ಲಿ ರೋಗ ಹಬ್ಬದಂತೆ ಮಾಡಿದ ನಿಯಂತ್ರಣ ಇವು ಜನಸಂಖ್ಯೆಯ ಅತಿವೃದ್ಧಿಯ ಸಮಸ್ಯೆಯನ್ನು ಹುಟ್ಟಿ[illegible]ಯನ್ನು [illegible] ಗೊಡದಿದ್ದ[illegible]! ಜನಸಂಖ್ಯೆ[illegible] ದುದರಿಂದ ಜನನನಿಯಂತ್ರಣವನ್ನು ಕಿತ್ತೊಗೆ[illegible] [illegible]ಹಾರ ದೊರಕಿಸುವ ಮತ್ತು ಜನಸಂಖ್ಯೆ[illegible] ಮಾರ್ಗಗಳನ್ನು ಹುಡುಕುವ ದುರ್ಭರ ಕಾರ್ಯ ನಮ್ಮನ್ನೆದುರಿಸುತ್ತಿದೆ.

ಹೆಚ್ಚಿದ ಜನಸಂಖ್ಯೆ ಮತ್ತು ಯುದ್ಧಗಳು ನಮ್ಮ ನೈಸರ್ಗಿಕ ಸಂಪತ್ತನ್ನೆಲ್ಲ ಕರಗಿಸಿಬಿಟ್ಟವು, ವಿದ್ಯುದಾದಿ ಶಕ್ತಿಗಳನ್ನು ಬತ್ತಿಸಿದವು, ಸಾಗು ಮಾಡಲು ಯೋಗ್ಯವಾದ ನಮ್ಮ ಭೂಮಿಗಳನ್ನು ಬಂಜೆಗೊಳಿಸಿದವು.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಸ್ತವ್ಯಸ್ತವೂ ಅಸಜ್ಜಿತವೂ ಆದ ಬಳಕೆಯಿಂದ ಆದ ಒಟ್ಟಿನ ಪರಿಣಾಮ ಸಮಾಜಘಾತಕವಾಗಿದೆ. ನಮಗಿದಿರಾದ ಅಪಾಯಗಳನ್ನು ಅರಿತು ನಾವೀಗ ಭವಿಷ್ಯತ್ಕಾಲದ ಸ್ಥಿತಿಗತಿಗಳನ್ನು ಅಭ್ಯಸಿಸಬೇಕು, ಅದಕ್ಕನುಗುಣವಾಗಿ ಯೋಜನೆಗಳನ್ನು ಸಿದ್ಧಗೊಳಿಸಬೇಕು; ಮತ್ತು ನಮಗಿದಿರಾಗಿರುವ ಭವಿತವ್ಯಕ್ಕಿಂತ ಹೆಚ್ಚು ಆಶಾದಾಯಕವಾದ ಅದೃಷ್ಟವನ್ನು ರೂಪಿಸುವುದರಲ್ಲಿ ನೆರವಾಗಬಲ್ಲ ವಿಜ್ಞಾನದ ಅಂಶಗಳನ್ನು ಬಳಸಿಕೊಳ್ಳಬೇಕು.

ಹಿಂದೆ ಬಳಸಿದಂತೆ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳನ್ನು ವಿಘಾತಕ ಕೃತ್ಯಗಳಿಗೆ ಬಳಸುವುದನ್ನು ಕಂಡಾಗಲೆಲ್ಲ ಮಹಡಿಯ ಮೇಲಟ್ಟದ ಮಾಡಿನ ಮೇಲೆ ನಿಂತು ಕೂಗು ಹಾಕುವುದು ಮೊದಲನೆಯ ಸಾಮಾಜಿಕ ಹೊಣೆ.

ಎರಡನೆಯ ಹೊಣೆಯೆಂದರೆ, ಮನುಷ್ಯನನ್ನು ಈಗ ಇದಿರಿಸುತ್ತಿರುವ ಅಹಾರ, ವಸ್ತ್ರ ಮತ್ತು ವಸತಿಗಳ ಸಮಸ್ಯೆಗಳಿಗೆ ಸಾಧ್ಯವಾದಾಗಲೆಲ್ಲ ರಚನಾತ್ಮಕ ತರಹೋಪಾಯಗಳನ್ನು ರಚಿಸಿಕೊಡುವುದು.

ಮೂರನೆಯದೂ ಅನೇಕಾಂಶಗಳಲ್ಲಿ ಇನ್ನೂ ಹೆಚ್ಚು ಮುಖ್ಯವೂ ಆದ ಇನ್ನೊಂದು ಹೊಣೆಯೆಂದರೆ ವೈಜ್ಞಾನಿಕವೆಂಬ ಮನೋವೃತ್ತಿಯನ್ನು ಎಲ್ಲೆಲ್ಲೂ ಹರಡುವುದು.

"ಜೀವನದ ಒಂದು ಕ್ರಮ"

ವೈಜ್ಞಾನಿಕ ಮನೋವೃತ್ತಿಯು ಏಕಕಾಲದಲ್ಲಿ ಒಂದು ವಿಚಾರ ಮಾರ್ಗವೂ ಹೌದು, ನಡೆತೆಯ ಒಂದು ರೀತಿ ಮತ್ತು ಜೀವನದ ಒಂದು ಕ್ರಮ ಎನಿಸಿರುವುದು ನಿಜ. ಅದಕ್ಕೆ ಅನೇಕ ಅಂಗಗಳಿವೆ; ಅವುಗಳಲ್ಲಿ ಅತಿ ಮುಖ್ಯವಾದುವು ಇವು:

ವಿಜ್ಞಾನಿ ಪರಂಪರಾಪ್ರಿಯತೆಯ ದೂರ ಇರಿಸ ಬೇಕು. ಅವನು ಯಾವಾಗಲೂ ನ್ಯಾಯವಾದ ತರ್ಕವೇ ಬೇಕೆಂದು ಹಟ ಹಿಡಿಯಬೇಕು.

ಅವನು ಎಚ್ಚರಿಕೆಯಿಂದ ಸಾಗಬೇಕು; ಆದರೂ ಪರಿವರ್ತನಕ್ಕೆ ಅವನು ಸಿದ್ಧನಿರಬೇಕು.

ಸತ್ಯವೇ ಬೇಕೆಂದು। ಅವನು ಛಲ ಹಿಡಿಯಬೇಕು. ಅವನು ರಾಷ್ಟ್ರೀಯ ಅಂಧಶ್ರದ್ಧೆಗಳು ತನ್ನ ಬುದ್ಧಿಗೆ ಸೋಂಕದಂತೆ ನೋಡಿಕೊಳ್ಳಬೇಕು.

ಎಲ್ಲಕ್ಕಿಂತ ಅಪ್ರತಿಹತವೂ ಆದ [illegible]ವೂ ಅವಿರೂಪಿ[illegible] ಸ್ವಾತಂತ್ರ್ಯ ಬೇಕೆಂದು ಅವನು ಪಟ್ಟುಹಿಡಿಯಬೇಕು.

ವೈಜ್ಞಾನಿಕ ಮನೋವೃತ್ತಿಯನ್ನು ಅಳವಡಿಸಿಕೊಳ್ಳುವುದರಿಂದ ಇರಲು ಯೋಗ್ಯವೆನಿಸುವ ಜಗತ್ತನ್ನು ನಿರ್ಮಿಸಲು ನಿಮಗೆಲ್ಲರಿಗೂ ಸಾಧ್ಯವಾಗುವುದು—ಅದೇ [illegible]ರಹಿತವೂ [illegible]—[illegible]ರಹಿತವೂ ಆದ ಪ್ರಪಂಚ.

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

	ತಾ. ೨೩
ಮುಂಬಯಿ ಡಾಯಿಂಗ್	೯೨೫-೦-೦
ಕೋಹಿನೂರು	೨೪೧-೮-೦
ಸ್ವದೇಶಿ	೨೬೭-೮-೦
ಗೋಕಾಕ	೨೩೯-೦-೦
ಸೆಂಚುರಿ	೨೪೬-೪-೦
ಸಿಂಪ್ಲೆಕ್ಸ	೧೪೯-೦-೦
ಟಾಟಾ ಸ್ಟೀಲ ಡೆಫರ್ಡ	೧೧೭೦-೦-೦
ಇಂಡಿಯನ್ ಅಯರ್ನ	೧೮-೧೧-೦
ಅಸೋ. ಸಿಮೆಂಟ್ಸ	೧೨೯-೧೨-೦
ಸೆಂಟ್ರಲ ಬ್ಯಾಂಕ	೭೭-೪-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೭೬೦-೦-೦

ಚಿನ್ನ ಬೆಳ್ಳಿ

ತಯಾರಿ ಚಿನ್ನ	೧೧೬-೨-೦
ವಾಯದಾ ,,	೧೧೫-೦-೦
ತಯಾರಿ ಬೆಳ್ಳಿ	೧೭೯-೬-೦

ಎಣ್ಣೆಕಾಳು

[illegible]	೧೮೮-೨-೦
ಅಗಸೆ (ತಯಾರಿ)	೨೯-೧೨-೦
,, ಹೊಸ	೨೯-೮-೦
ಅಗಸೆ ಎಣ್ಣೆ	೧೭-೦-೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

		ತಾ. ೨೩
ಜ. ಹೊಸ ಹತ್ತಿ (ನಗಕ್ಕೆ)		೪೧೧-೪೬೫
ಅಪ್ಲಂಡ ಹತ್ತಿ ,,		೪೫೦-೪೮೦
ಫೀನ್ ಅರಳೆ		೨೯೦-೨೯೩
ಡಬಲ್ ರೋಲ್		೨೮೦-೨೯೦
ಕುಸುಬಿ (ಬ. ಮಣಕ್ಕೆ)		೧೪-೯-೦ ೧೪-೧೧-೦
ಅಗಸಿ	(ಚೀಲಕ್ಕೆ)	೪೦-೪೨
ಔಡಲ	,,	೩೫
ಜ. ಹೆಸರು	,,	೮೪-೦-೦ ೪೬-೮-೦
ಕರಿ ಎಳ್ಳು	,,	೬೪
ಬಿಳಿ ಎಳ್ಳು	,,	೮೦-೯೩
ಕಡಲೆ	,,	೫೨-೫೩
ಜ. ತೊಗರಿ	,,	೨೮-೩೦
ಹುರಳಿ	,,	೩೪-೩೫
ಕೆಂ. ಅಲಸಂದಿ	,,	೫೧-೫೫
ಬಿ. ಅಲಸಂದಿ	,,	೬೦
ಶೇಂಗಾ (ಹೇರು)		೫೦-೫೬
ಶೇಂಗಾ ಕಾಳು		೮೦-೯೦

ಸಾಂಗಲಿ ಪೇಟೆ

	ತಾ. ೨೨
ಅರಿಸಿಣ(ಹೇರು)	೯೫-೧೦೭
ಮೆಣಸಿನಕಾಯಿ(ಹೇರು)	೧೫೦-೨೦೦
ಶೇಂಗಾ(ಖಂಡಿ)	೧೪೭-೧೪೮
ಬೆಲ್ಲ(ಹೇರು)	೫೦-೭೦

❋ ೧೯೪೮ ರಲ್ಲಿ ಜಗತ್ತಿನಲ್ಲಿ ಶೇಂಗಾ (ನೆಲಗಡಲೆ) ಯ ಉತ್ಪಾದನೆ ಹಿಂದಿನ ಎಲ್ಲ ದಾಖಲೆಗಳನ್ನು ಮೀರಿಸಿ ೧,೧೦,೬೫,೦೦೦ ಟನ್‌ನಷ್ಟಾಗಿದೆ. ಅದರಲ್ಲಿ ಭಾರತವೇ ಸರ್ವಪ್ರಧಾನ ಉತ್ಪಾದಕವಾಗಿದೆ. ಅದು ೩೪,೪೨,೦೦೦ಟನ್ ಶೇಂಗಾ ಬೆಳೆಯಿತು. ಅದರೆ ಇದು ಹಿಂದಿನ ವರ್ಷದ ಉತ್ಪಾದನೆಗಿಂತ ನೂರಕ್ಕೆ ೧೦ ರಷ್ಟು ಕಡಿಮೆಯಾಗಿದೆ.

ಕರ್ನಾಟಕದಲ್ಲಿ

ಧಾರವಾಡ

ಧಾರವಾಡದ ಪ್ಲಾಯವುಡ್ ಕಾರಖಾನೆಯವರು ೩೯ ಜನ ಕೆಲಸಗಾರರನ್ನು ತೆಗೆದು ಹಾಕಿದ್ದಲ್ಲದೆ ಕಾರಖಾನೆಯನ್ನು ಹಾನಿಯಾಗುತ್ತಿದೆಯೆಂಬ ಕಾರಣ ಕೊಟ್ಟು ಮುಚ್ಚಿದ್ದರ ವಿರುದ್ಧ ಕೂಲಿಕಾರ ಸಂಘದವರು ಸರಕಾರದ ಕೂಲಿಕಾರ ಶಾಖೆಯವರಿಗೆ ದೂರು ಕೊಟ್ಟಿದ್ದನ್ನು ವಿಚಾರಿಸಲು ಕೂಲಿಕಾರ ಸಂಧಾನಾಧಿಕಾರಿ ಶ್ರೀ ಬಿ. ಎಸ್. ದಾತಾರರು ಧಾರವಾಡಕ್ಕೆ ಬಂದು ಕಾರಖಾನೆಯ ಅಧಿಕಾರಿಗಳು ಕಾರಖಾನೆ ತೆರೆಯಲೊಪ್ಪದ ಕಾರಣ ಮುಂದಿನ ವಿಚಾರಕ್ಕಾಗಿ ಮುಂಬಯಿಗೆ ಹೊರಟರು.

ಧಾರವಾಡ ಜಿಲ್ಹೆಯ ಸೀದಾ ಅಂಗಡಿಗಳಲ್ಲಿ ಕಡಲೆ ಮತ್ತು ಕಡಲೆ ಬೇಳೆಯನ್ನು ಅನಿರ್ಬಂಧವಾಗಿ ಮಾರಲು- ಹುಕುಮು ಹೊರಟಿದೆ. ವ್ಯಾಪಾರಸ್ಥರು ಯೋಗ್ಯ ಬೆಲೆಗೆ ಮಾರುವದಾದರೆ ಲೋಕ ಬೆಲೆಗೆ ಪಡೆಯಬಹುದು.

ಶ್ರೀ ಎಮ್. ವಿ. ಮಿಣಜಗಿ, ಎ. ಎಂ., ಡಿ. ಆರ್ಟ, ಎ. ಆರ್. ಸಿ. ಎ. (ಲಂಡನ್) ಇವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಕಲಾವಿದರ ಸಭೆಯು ಕರ್ನಾಟಕದಲ್ಲೊಂದು ಪ್ರಾದೇಶಿಕ ಕಲಾಶಾಲೆಯನ್ನು ಕೂಡಲೆ ಸ್ಥಾಪಿಸಬೇಕೆಂದು ಕೋರುವ ಗೊತ್ತುವಳಿ ಮಾಡಿತು.

ಮುಳಗುಂದದಲ್ಲಿ ಒಕ್ಕಲತನ ಶಾಖೆಯವರು ಬೀಜದ ವ್ಯವಸ್ಥೆಯಿಡದೆ ಬರಿ ಹಿಂಡಿ ಗೊಬ್ಬರಗಳನ್ನು ಮಾತ್ರ ಇಟ್ಟಿದ್ದು, ಬೀಜದ ಬೆಲೆ ಪೇಟೆಯಲ್ಲಿ ವಿಪರೀತವಾಗಿರುವದರಿಂದ ಆಹಾರೋತ್ಪಾದನೆಗೆ ಧಕ್ಕೆ ಬರಬಹುದೆಂದು ದೂರಲಾಗಿದೆ.

ಧಾರವಾಡ ನಗರ ಹಿತರಕ್ಷಕ ಸಂಸ್ಥೆಯು ಮ್ಯುನಸಿಪಲ್ ಪಕ್ಷಕ್ಕೆ ಡಾ. ವಿ. ಆರ್. ಮಹಿಷಿಯವರು ನಾಯಕರಾಗಿಯೂ ಶ್ರೀ ಚನ್ನಪ್ಪ ಕೌದಿಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿದ್ದಾರೆ.

ತಾ. ೧೨ ಕ್ಕೆ ಸೇರಿದ ರೋಣ ತಾಲೂಕ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಏಕೀಕರಣದ ಸಂಬಂಧವಲ್ಲಿ ದಿಲ್ಲಿಗೆ ಹೋದ ಶಿಷ್ಟಮಂಡಲಕ್ಕೆ ಕಾರ್ಯ ಸಮಿತಿಯಿಂದ ನಿಶ್ಚಿತ ಆಶ್ವಾಸನ ಸಿಗದಿದ್ದುದಕ್ಕೆ ವಿಷಾದಪಡುವ ಮತ್ತು ಕರ್ನಾಟಕದ ಕನಿಷ್ಠ ಬೇಡಿಕೆಯನ್ನಾದರೂ ಪೂರೈಸಬೇಕೆಂದು ಕೇಳಿಕೊಳ್ಳುವ ಮೊದಲಾದ ಗೊತ್ತುವಳಿಗಳಾದವು.

ಬ್ಯಾಡಗಿಯಲ್ಲಿ ತಾ. ೬ ಕ್ಕೆ ಸೇರಿದ ಸಾರ್ವಜನಿಕ ಕಾರ್ಯಕರ್ತರು ನಿರ್ಣಯಿಸಿದಂತೆ ಮೈಸೂರಿನ ವಿಲಯನಕ್ಕೆ ಮೈಸೂರಿಗರಮನವೊಲಿಸುವ ಸಲುವಾಗಿ ಕಳಿಸಬೇಕಾದ ಸದಿಚ್ಛಾಪಥಕದಲ್ಲಿ ಸೇರಬಯಸುವ ತರುಣರಿಗಾಗಿ ಹತ್ತು ದಿನಗಳ ಶಿಕ್ಷಣಕೊಡುವ ವ್ಯವಸ್ಥೆಯಾಗಿದ್ದು ಶ್ರೀ ಲಿಂಗರಾಜ ಮುದ್ದಣ್ಣನವರು ಈ ತರಬೇತಿಯ ಕಾರ್ಯ ವಹಿಸುವರೆಂದು ತಿಳಿಯುತ್ತದೆ.

ಮುಂಬಯಿ ವಿಧಿ ಮಂಡಲಕ್ಕಾಗಿ ದಿ. ನರಸಿಂಗರಾವ ದೇಸಾಯಿ ಕಲ್ಲಾಪುರರ ಸ್ಥಾನಕ್ಕೆ ಧಾರವಾಡ—ಕಾರವಾರ ಜಿಲ್ಹಾ ಮತದಾರ ಸಂಘದಿಂದ ನಡೆದ ಉಪಚುನಾವಣೆಯಲ್ಲಿ ಶ್ರೀ ಗುರುರಾವ ನರಸಿಂಗರಾವ ದೇಸಾಯಿಯವರು ವಿರೋಧಿಗಳಾದ ಶ್ರೀ ನೇಮಚಂದಪ್ಪ ದೇಸಾಯಿ ಅಮ್ಮಿನಭಾವಿಯವರನ್ನು ೪೪೯ ವಿರುದ್ಧ ೩೪ ಮತಗಳಿಂದ ಸೋಲಿಸಿ ಆರಿಸಿ ಬಂದಿದ್ದಾರೆ. ಶ್ರೀ ನೇಮಚಂದಪ್ಪನವರು ಚುನಾವಣೆಯ ಹಿಂದಿನ ದಿನವೇ ತಾವು ಸ್ಪರ್ಧಿಸಬಾರದೆಂದು ನಿರ್ಣಯಿಸಿದ್ದರು.

ಬೆಳಗಾವಿ

ದಿನಾಂಕ ೧೬—೬—೪೯ ಚಿಕ್ಕೋಡಿ ತಾಲೂಕ ಮುಗಳಿಯಲ್ಲಿಯ ಹೋಮಗಾರ್ಡ್ಸ ಮಾಸ್ತರರಾದ ಶ್ರೀ. ಗಣಪತರಾವ ನಾಯಿಕ ಇವರಿಗೆ ಬೆಳಗಾಂವಿಗೆ ವರ್ಗವಾದ್ದರಿಂದ ಇಲ್ಲಿಯ ಗೃಹರಕ್ಷಕ ದಳದವರೂ ಶಾಲಾ ಶಿಕ್ಷಕರೂ ಊರ ಪ್ರಮುಖರೂ ಕೂಡಿಕೊಂಡು ಶ್ರೀ। ಶಿದಗೌಡಾ ನಿರಂಜನಗೌಡಾ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಬೀಳ್ಕೊಡುವ ಸಮಾರಂಭವನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿದ್ದರು.

ವಿಜಾಪುರ

ಕೈ. ವಾ. ಚನಗೌಡ ಕನಾಳ ಪಾಟೀಲ ಇವರ ಧರ್ಮಪತ್ನಿ ಶ್ರೀಮತಿ ಸಿದಲಿಂಗವ್ವನವರು ವಿಜಾಪುರ ಜಿಲ್ಹಾ ಲಿಂಗಾಯತ ವಿದ್ಯಾವರ್ಧಕ ಸಂಘಕ್ಕೆ ೫೦೦೦೦ ರೂಪಾಯಿ ಕಾಣಿಕೆ ಕೊಡಲೊಪ್ಪಿದ್ದು ಸಂಘದ ವಿಜಯಕಾಲೇಜಿನ ವಿಜ್ಞಾನ ಶಾಖೆಗೆ ಚನಗೌಡ ಕನ್ನಾಳ ಪಾಟೀಲ ವಿಜ್ಞಾನ ಸಂಸ್ಥೆಯೆಂದು ಹೆಸರಿಡಲಾಗುವದು.

ಎಡಹಳ್ಳಿ (ಮುಧೋಳ) ಗ್ರಾಮದಲ್ಲಿ ಸರಕಾರಕ್ಕೆ ಹೆಚ್ಚು ಧಾನ್ಯ ಮಾರಿದ ಶ್ರೀ ಗೌಡಪ್ಪ ಪಾಟೀಲರಿಗೆ ೧೦೦ ರೂ. ಇನಾಮನ್ನು ಶ್ರೀ ಕೌಜಲಗಿ ತಿರುಮಲರಾಯರ ಹಸ್ತದಿಂದ ಕೊಡಿಸಲಾಯಿತು.

ಶ್ರೀ ಎಸ್. ಎ. ಸರನಾಡ ಎಂಬ ವಿಜಯ ಕಾಲೇಜ ವಿದ್ಯಾರ್ಥಿಯು ಈ ಸಲದ ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಕನ್ನಡ ಆನರ್ಸ್ ತೆಗೆದುಕೊಂಡು, ಪ್ರಥಮ ವರ್ಗದಲ್ಲಿ ವಿಶ್ವವಿದ್ಯಾಲಯಕ್ಕೆ ಒಬ್ಬರೇ ಆಗಿ, ಪಾಸಾಗಿದ್ದಾರೆ.

ರಾಷ್ಟ್ರೀಯ ಸರಕಾರದ ಆಹಾರ ಪ್ರಯತ್ನದಲ್ಲಿಯೂ ಇತರ ರಚನಾತ್ಮಕ ಕಾರ್ಯಗಳಲ್ಲಿಯೂ ದಿನಂಪ್ರತಿ ಸ್ವಲ್ಪ ಸ್ವಲ್ಪ ಕಾಲವಾದರೂ ಕೆಲಸ ಮಾಡಿ ಸಮಾಜಸೇವೆ ಸಲ್ಲಿಸಬೇಕೆಂದು ವಕೀಲರು, ಡಾಕ್ಟರರೇ ಮೊದಲಾದ ವೃತ್ತಿವರ್ಗಗಳಿಗೆ ವಿಜಾಪುರ ಜಿಲ್ಹಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ದುಬೆಯವರು ಬಿನ್ನವಿಸಿಕೊಂಡಿದ್ದಾರೆ. ಇಂಥ ಸೇವೇಚ್ಛೆಯುಳ್ಳವರು ಜಿಲ್ಹಾ ಕಾಂಗ್ರೆಸ್ಸಿಗೆ ಬರೆದು ತಿಳಿಸಬೇಕೆಂದು ಪ್ರಾರ್ಥಿಸಲಾಗಿದೆ.

ಸಂಸ್ಥಾನಗಳು

ಗವರ್ನರ ಜನರಲ್ ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ "ಡಾಕ್ಟರ್ ಆಫ್ ಲಾ" (ಎಲ್ ಎಲ್. ಡಿ) ಪದವಿ ಕೊಡಬೇಕೆಂದು ಮೈಸೂರು ವಿಶ್ವವಿದ್ಯಾಲಯದವರು ನಿರ್ಣಯಿಸಿದ್ದಾರೆ.

ನಿಯಂತ್ರಿತ ಧಾನ್ಯಗಳಿಂದ ಮಾತ್ರವಲ್ಲ ಮತ್ತಾವದರಿಂದಲೂ ಇಡ್ಲಿ ದೋಸೆಗಳನ್ನು ಮಾಡತಕ್ಕದ್ದಲ್ಲವೆಂದು ಮೈಸೂರು ಸಂಸ್ಥಾನದಲ್ಲಿ ನಿಯಮಮಾಡಿದ್ದನ್ನು ಪ್ರತಿಭಟಿಸಿ ಬೆಂಗಳೂರಿನ ಹೋಟೆಲುಗಳು ಸಂಪುಹೂಡುವ ಬೆದರಿಕೆ ಹಾಕಿದ್ದವು. ಈ ನಿಯಮವನ್ನು ಪುನರ್ವಿಚಾರಿಸುವದಾಗಿ ಗೃಹಮಂತ್ರಿ ಮರಿಯಪ್ಪನವರು ನ್ಯಾಯವಿಧಾಯಕ ಸಭೆಯಲ್ಲಿ ಬಂದ ನಿಲುವಳಿ ಸೂಚನೆಗೆ ಸಮಾಧಾನವಿತ್ತರು.

ಅ. ಭಾ. ಹಿಂದ ಕಿಸಾನ ಪಂಚಾಯತದ ಕರ್ನಾಟಕ ಕಾರ್ಯಾಲಯದ ಉದ್ಘಾಟನೆ ತಾ. ೧೨ ಕ್ಕೆ ಶಿವಮೊಗ್ಗೆಯಲ್ಲಿ ಜಿಲ್ಹಾ ಬೋರ್ಡಿನ ಹಿಂದಿನ ಅಧ್ಯಕ್ಷ ಶ್ರೀ ಡಿ. ಪರಮೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಕಿಸಾನ ಪಂಚಾಯತ ಕಾರ್ಯ ಸಮಿತಿಯ ಸದಸ್ಯ ಶ್ರೀ ಅಣ್ಣಾ ದೇಶಪಾಂಡೆಯವರ ಹಸ್ತದಿಂದಾಯಿತು. ಈ ಸಮಾಜವಾದಿ ಸಂಸ್ಥೆ ರೈತರನ್ನು ಸಂಘಟಿಸುವ ಉದ್ದೇಶವನ್ನಿಟ್ಟುಕೊಂಡಿದೆ.

ಮೈಸೂರಿನ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಕೇವಲ ಬ್ರಾಹ್ಮಣರಿಗೆ ಮಾತ್ರವಲ್ಲದೆ ಎಲ್ಲ ಜಾತಿಯವರಿಗೂ ಪ್ರವೇಶ ಕೊಡುವ ವಿಚಾರ ನಡೆದಿದೆಯೆಂದು ಪ್ರ. ಪ್ರ. ಸಭೆಯಲ್ಲಿ ವಿದ್ಯಾಮಂತ್ರಿ ಶ್ರೀ ಡಿ. ಎಚ್ ಚಂದ್ರಶೇಖರಯ್ಯನವರು ತಿಳಿಸಿದರು.

ತಾ. ೬.೭.೮ ಕ್ಕೆ ರಾಯಚೂರಿನಲ್ಲಿ ರೂಢಿಯಂತೆ ಜರಗಿದ ಮಾರೆಮ್ಮನ ಜಾತ್ರೆಯಲ್ಲಿ ಪ್ರಾಣಿಬಲಿ ಕಡಿಮೆಯಾಗಿದ್ದುದೂ ಹರಿಜನ ಯುವತಿಯರನ್ನು ಬಸವಿ ಬಿಡುವ ಪದ್ಧತಿ ರದ್ದಾಗಿದ್ದುದೂ ವಿಶೇಷವಾಗಿ ಎದ್ದು ಕಾಣುತಿದ್ದವು.

ತಾ. ೧೧ ಕ್ಕೆ ಎತ್ತುಗಳ ಮೆರವಣಿಗೆ ಸಂಬಂಧದಲ್ಲಿ ರಾಯಚೂರಲ್ಲಾದ ಹಿಂದೂ ಮುಸ್ಲಿಂ ತಿಕ್ಕಾಟದ ಪರಿಣಾಮವಾಗಿ ೧೩ ಜನರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆಮಾಡಲಾಗಿದೆ.

ಹಿಂದೀ ಸ್ವಾತಂತ್ರ್ಯಸಂಗ್ರಾಮದಲ್ಲಿಯೂ ಮೈಸೂರು ಚಳವಳಿಯಲ್ಲಿಯೂ ಭಾಗವಹಿಸಿ ಸಂಕಷ್ಟಕ್ಕೆ ಗುರಿಯಾದವರಿಗೆ ನೆರವು ನೀಡಲು ಅಂಥವರ ಯಾದಿಯನ್ನು ಸಿದ್ಧಗೊಳಿಸಬೇಕೆಂದು ಮೈಸೂರು ಕಾಂಗ್ರೆಸ್ಸು ನಿರ್ಧರಿಸಿದೆ.

ಹೈದರಾಬಾದ ಕರ್ನಾಟಕ ಪ್ರಾಂ. ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಜನಾರ್ದನರಾವ ದೇಸಾಯರು ರಾಯಚೂರಿಗೆ ಭೆಟ್ಟಿಯಿತ್ತು, ನಾಗರಿಕ ಅಡಳಿತೆಗಾರರನ್ನೂ ಡಿ. ಎಸ್. ಪಿ. ಯವರನ್ನೂ ಭೆಟ್ಟಿಯಾಗಿ ತಾಲೂಕುಗಳಲ್ಲಿನ ಆಹಾರ ಅಹಾರ ಪರಿಸ್ಥಿತಿಯನ್ನು ಚರ್ಚಿಸಿದರು.

ಬಳ್ಳಾರಿ ಜಿಲ್ಹೆಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರೂ ವಯೋವೃದ್ಧರೂ ಆದ ಶ್ರೀ ಇಜಾರಿ ಪಶುಪಾಲಪ್ಪನವರು ತಾ. ೧೯ ಸಂಜೆ ೬-೩೦ ಕ್ಕೆ ವೃದ್ಧಾಪ್ಯಜನ್ಯ ಅಸ್ವಸ್ಥದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಹರಪನಹಳ್ಳಿಯ ಸಾಹಿತ್ಯ ಸಮ್ಮೇಲನದ (೧೯೪೬) ಸ್ವಾಗತಾಧ್ಯಕ್ಷರಾಗಿದ್ದರು.

ಉತ್ತರ ಕನ್ನಡ

ಕಾರವಾರದಲ್ಲಿ ವಿದ್ಯುಚ್ಛಕ್ತಿ ಕಂಪನಿ ಸ್ಥಾಪಿಸಿ ನಗರಕ್ಕೆ ವಿದ್ಯುತ್ತನ್ನು ಪೂರೈಸಲು ಹಣ, ಯಂತ್ರಾದಿ ವ್ಯವಸ್ಥೆಗಳನ್ನು ಮಾಡುವ ಸಲುವಾಗಿ ರಾವಬಹಾದುರ ಎಸ್. ಪಿ. ವಾಗಳೆಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಅವರ ನೇತೃತ್ವದಲ್ಲೇ ಒಂದು ಸಮಿತಿ ನೇಮಕವಾಗಿದೆ. ಹೊರಗಿನವರಿಗೆ ಈ ಕಾರ್ಯದ ಗುತ್ತಿಗೆ ಕೊಡಬಾರದೆಂದು ಸರಕಾರವನ್ನು ಕೇಳಿಕೊಳ್ಳಲಾಗಿದೆ.

ತಾ. ೨೦ ಕ್ಕೆ ಕುಮಟೆಯಲ್ಲಿ ಹೊಸದಾಗಿ ಪ್ರಾರಂಭವಾಗುತಿರುವ ಕೆನರಾ ಕಾಲೇಜಿನ ಉದ್ಘಾಟನ ಸಮಾರಂಭವನ್ನು ಶ್ರೀ ಕೃಷ್ಣರಾವ್ ಹಳದೀಪುರರು ನೆರವೇರಿಸುತ್ತ ದಿ. ಸರ್ ನಾರಾಯಣ ಚಂದಾವರಕರರಂಥ ಮೇಧಾವಿಗಳನ್ನೂ ಗೋಕರ್ಣದಂಥ ಪವಿತ್ರ ಕ್ಷೇತ್ರವನ್ನೂ ಜೋಗದಂಥ ಜಗತ್ಪ್ರಸಿದ್ಧ ಜಲಪಾತವನ್ನೂ ಪಡೆದರೂ ಅಲಕ್ಷ್ಯಕ್ಕೆ ಗುರಿಯಾದ ಈ ಜಿಲ್ಹೆಗೆ ಮೊದಲನೆಯದಾದ ಈ ಕಾಲೇಜಿನ ಪ್ರಥಮ ವಿದ್ಯಾರ್ಥಿಗಳ ಮೇಲೆ ಒಳ್ಳೆ ಪರಂಪರೆ ಹಾಕುವ ಹೊಣೆಯಿದೆಯೆಂದರು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಹಾ ಸಮಾಜವಾದೀ ಪಕ್ಷದ ಪರಿಷತ್ತು ದಿನಾಂಕ ೧೨ ರಲ್ಲಿ ಕರ್ನಾಟಕ ಸಮಾಜವಾದೀ ಪಕ್ಷದ ಜತೆಕಾರ್ಯದರ್ಶಿ ಶ್ರೀ ಬಿ. ಸದಾಶಿವರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬಯಿ ಡಾಕ್ ಕೆಲಸಗಾರ ಸಂಘದ ಕಾರ್ಯದರ್ಶಿ ಶ್ರೀ ಡಿಮೆಲ್ಲಾರವರು ಅದನ್ನು ಉದ್ಘಾಟನೆಮಾಡಿದರು ಪರಿಷತ್ತು ೧) ಜಿಲ್ಹೆಯ ನೇಜಿಯನ್ನು ನಾಶಗೈದ ಹುಳುವಿನ ವಿಚಾರದಲ್ಲಿ ಸರಕಾರ ಸಕಾಲದಲ್ಲಿ ಪ್ರತಿಕ್ರಿಯೆ ಮಾಡದಿರುವುದರ ನಿಷೇಧ, ಕೂಡಲೇ ಅದನ್ನು ನಾಶಮಾಡುವ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಕೇಳಿಕೆ. ೨) ಜಿಲ್ಹೆಗೆ ಅಕ್ಕಿಯ ಮಸೂದೆಯು ಬರುವಲ್ಲಿ ಮದ್ರಾಸು ಸರಕಾರ ಮಾಡಿದ ಅನ್ಯಾಯದ ಖಂಡನೆ, ಒಕ್ಕಲತನ ಮಸೂದೆಯನ್ನು ತರಬೇಕೆನ್ನುವ ಸೂಚನೆ. ೩) ಕಾರ್ಮಿಕರ ಕುರಿತಾದ ಸರಕಾರಿ ಪಂಚಾಯತರ ಎವಾರ್ಡನ್ನು ಜಿಲ್ಹೆಯ ಮೋಟರ್ ಕಂಪೆನಿಗಳು ಅನುಸರಿಸದಿರುವುದಕ್ಕಾಗಿ ನಿಷೇಧವ್ಯಕ್ತಪಡಿಸುವ ಮತ್ತು ಅವರನ್ನು ಆ ಕುರಿತು ಸರಕಾರ ಎಚ್ಚರಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಗಳೂ ಜಿಲ್ಹಾ ಪಾರ್ಟಿಯು ಮುಂಬರುವ ಚುನಾವಣೆಯಲ್ಲಿ ಭಾಗವಹಿಸಬೇಕೆಂಬ ನಿರ್ಧಾರವೂ ಆಯಿತು.

ಜಿಲ್ಹಾ ಅಹಾರ ಸಮಿತಿಯು ದಿನಾಂಕ ೮ ರಂದು ಕಲೆಕ್ಟರ್ ಸಯ್ಯದ್ ಅಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಹೆಯಲ್ಲಿ ಎದ್ದ ಹುಳಗಳ ನಾಶಕ್ಕೆ ತಕ್ಕ ಕಾರ್ಯಕೈಕೊಳ್ಳುವ ಭರವಸೆಯೀಯಲಾಗಿದೆ. ಮಳೆಗಾಲದಲ್ಲಿ ೨ ವಾರಗಳ ರೇಶನ್ ಕೊಡಬೇಕೆಂಬ ಶ್ರೀ ಕೆ. ಆರ್. ಕಾರಂತರ ಸೂಚನೆಯನ್ನು ಸರಕಾರಕ್ಕೆ ತಿಳಿಸುವುದೆಂತಾಯಿತು.

ಉಡುಪಿಯ ಶ್ರೀ ಮಧ್ವಸರೋವರದಲ್ಲಿ ಕಾಶಿಯ ಗಂಗಾಜಲದ ಬುಗ್ಗೆಗಳು ದಿನಾಂಕ ೯ ರಲ್ಲಿ ಸಂಜೆ ಕಾಣಿಸಿಕೊಂಡು ಸರೋವರದ ನೀರು ಬಿಳಿ ಬಣ್ಣದ ಛಾಯೆಹೊಂದಿದುದರಿಂದ ಗಂಗಾಭಾಗೀರಥಿಯು ಪ್ರಸನ್ನಳಾದಳೆಂದು ನಗಾರಿ ಬಾರಿಸಲಾಯಿತು. ಅಸ್ತಿಕ ಜನತೆಯೂ ಧರ್ಮಾಧಿಕಾರಿಗಳೂ ತೀರ್ಥಸ್ನಾನ ಮಾಡಿದರು. ೧೨ ವರ್ಷಗಳಿಗೊಮ್ಮೆ ಭಾಗೀರಥಿಯು ಮಧ್ವಸರೋವರದಲ್ಲಿ ಪ್ರಸನ್ನಳಾಗಿ ಮೂರು ದಿನಗಳ ತನಕ ಸನ್ನಿಹಿತಳಾಗಿರುವಳೆಂದು ಇಲ್ಲಿನ ನಂಬುಗೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.